ಮಂಗಳವಾರ, ನವೆಂಬರ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 320 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಧುಮೇಹವನ್ನು 'ರಿವರ್ಸ್' ಮಾಡುವ ಪ್ರಯೋಗ ಈಗ ತೀವ್ರವಾಗಿದೆ



ಆಳ–ಅಗಲ
ತಿದಿ ಒತ್ತಿದ ಹಿಂಸೆಯ ಕುಲುಮೆ

ಶಿಶುಗಳ ಸಾವಿನ ಸಂಖ್ಯೆ 12ಕ್ಕೆ ಏರಿಕೆ 11

ಎಸ್‌ಐಟಿ ಮುಖ್ಯಸ್ಥ: ಪರಮೇಶ್ವರಗೆ ಹೊಣೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,339	23,453	₹78,740 (ಬೆಂಗಳೂರು)	₹94,600 (ಬೆಂಗಳೂರು)	84.42

‘ಕೈ’ ಶಾಸಕರಿಗೆ ₹100 ಕೋಟಿ ಆಮಿಷದ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಕೆಡವಲು ಕಾಂಗ್ರೆಸ್ ಶಾಸಕರಾದ ಚನ್ನಮ್ಮನ ಕಿತ್ತೂರಿನ ಬಾಬಾಸಾಹೇಬ ಪಾಟೀಲ ಮತ್ತು ಚಿಕ್ಕಮಗಳೂರಿನ ಎಚ್‌.ಡಿ. ತಮ್ಮಯ್ಯ ಅವರಿಗೆ ಬಿಜೆಪಿಯಿಂದ ₹ 100 ಕೋಟಿ ಆಫರ್ ನೀಡಿರುವ ಎಲ್ಲ ದಾಖಲೆಗಳು ಇವೆ’ ಎಂದು ಮಂಡ್ಯ ಶಾಸಕ ಪಿ. ರವಿಕುಮಾರ್ ಗಣಿಗ ಅವರ ಹೇಳಿಕೆ, ರಾಜ್ಯದಲ್ಲಿ ‘ಆಪರೇಷನ್ ಕಮಲ’ದ ಸದ್ದನ್ನು ಮತ್ತಷ್ಟು ಜೋರಾಗಿಸಿದೆ.

ರವಿಕುಮಾರ್ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ ನಾಯಕರು, ಕಾಂಗ್ರೆಸ್‌ನವರು ತಮ್ಮ ಹುಳುಕು ಮುಚ್ಚಿಕೊಳ್ಳಲು ಮಾಡುತ್ತಿರುವ ಷಡ್ಯಂತ್ರ ಇದು. ದಾಖಲೆ ಇದ್ದರೆ ಬಿಡುಗಡೆ ಮಾಡಲಿ’ ಎಂದು ಸವಾಲು ಹಾಕಿದ್ದಾರೆ.

ತಮ್ಮ ಪಕ್ಷದ ಶಾಸಕನ ಮಾತಿಗೆ ಪ್ರತಿಕ್ರಿಯಿಸಿರುವ ತಮ್ಮಯ್ಯ, ‘ನನ್ನನ್ನು ಯಾರೂ ಸಂಪರ್ಕಿಸಿಲ್ಲ’ ಎಂದಿದ್ದರೆ, ಬಾಬಾಸಾಹೇಬ ಪಾಟೀಲ, ‘ಸಂಪರ್ಕಿಸಿದ್ದು ನಿಜ. ಆದರೆ, ದುಡ್ಡಿನ ಆಮಿಷ ಒಡ್ಡಿಲ್ಲ’ ಎಂದು ಹೇಳಿದ್ದಾರೆ.

‘ಬಿಜೆಪಿಯವರು ಕಾಂಗ್ರೆಸ್ ಶಾಸಕರ ಖರೀದಿಗೆ ಯತ್ನಿಸುತ್ತಿದ್ದು, ತಲಾ ಒಬ್ಬರಿಗೆ ₹ 50 ಕೋಟಿ ಆಫರ್ ಮಾಡಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಆರೋಪಿಸಿದ್ದರು. ಮುಖ್ಯಮಂತ್ರಿ ಮಾತಿಗೆ ಪೂರಕವಾಗಿ ಶನಿವಾರ ಮಾತನಾಡಿದ್ದ ರವಿಕುಮಾರ್, ‘ಕಾಂಗ್ರೆಸ್ ಶಾಸಕರ ಖರೀದಿಗೆ ₹ 50 ಕೋಟಿ ಅಲ್ಲ, ₹ 100 ಕೋಟಿ ಆಫರ್ ಕೊಡಲಾಗಿದೆ. ನಮ್ಮ ಶಾಸಕರ ಭೇಟಿಗೆ ಸಂಬಂಧಿಸಿದ ಆಡಿಯೊ, ವಿಡಿಯೊ ದಾಖಲೆ ಇದೆ. ಸಮಯ ನೋಡಿ ಬಿಡುಗಡೆ ಮಾಡುತ್ತೇವೆ’ ಎಂದಿದ್ದರು. ಅದೇ ವಿಚಾರವನ್ನು ಸೋಮವಾರ ಪುನರುಚ್ಚರಿಸುವ ಜೊತೆ ಇಬ್ಬರು ಶಾಸಕರ ಹೆಸರನ್ನೂ ಹೇಳಿದ್ದಾರೆ.


‘ಎಲ್ಲ ಸಾಕ್ಷ್ಯ ಶೀಘ್ರ ಬಿಡುಗಡೆ’


ರವಿಕುಮಾರ್

ಮಂಡ್ಯ: ‘ಕಾಂಗ್ರೆಸ್ ಸರ್ಕಾರ ಕೆಡವಲು ಬಿಜೆಪಿಯಿಂದ ₹50 ಕೋಟಿ ಅಲ್ಲ ₹100 ಕೋಟಿ ಆಫರ್ ಬಂದಿದೆ. ಬಿಜೆಪಿ– ಜೆಡಿಎಸ್‌ನವರು ಕಾಂಗ್ರೆಸ್ ಸರ್ಕಾರ ಬೀಳಿಸುವ ತವಕದಲ್ಲಿದ್ದಾರೆ. ‘ಆಪರೇಷನ್ ಕಮಲ’ಕ್ಕೆ ಸಂಬಂಧಿಸಿದ ಎಲ್ಲ ಸಾಕ್ಷ್ಯಗಳನ್ನು ಶೀಘ್ರದಲ್ಲಿ ಬಿಡುಗಡೆ ಮಾಡುತ್ತೇನೆ’ ಎಂದು ರವಿಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಮ್ಮ ಪಕ್ಷದ 50 ಕಾಂಗ್ರೆಸ್ ಶಾಸಕರಿಗೆ ಹಣದ ಆಮಿಷ ಒಡ್ಡಲಾಗಿದೆ. ₹ 50 ಕೋಟಿಗೆ ಬಗ್ಗಿಲ್ಲವೆಂದು ತಲಾ ₹100 ಕೋಟಿ ಆಫರ್ ನೀಡಿದ್ದಾರೆ. ಬಾಬಾಸಾಹೇಬ ಪಾಟೀಲ ಮತ್ತು ತಮ್ಮಯ್ಯ ಅವರನ್ನು ಏಕೆ ಸಂಪರ್ಕಿಸಿದ್ದರು? ಯಾವ್ಯಾವ ಹೋಟೆಲ್, ವಿಮಾನ ನಿಲ್ದಾಣ, ಅತಿಥಿಗೃಹದಲ್ಲಿ ಸಂಪರ್ಕಿಸಿದ್ದಾರೆ ಎಂಬ ಮಾಹಿತಿಯಿದೆ. ಈ ಬಗ್ಗೆ ಆಡಿಯೊ, ವಿಡಿಯೊ, ಸಿ.ಡಿ, ಪೆನ್‌ಡ್ರೈವ್ ಅಷ್ಟೇ ಅಲ್ಲ, ಐ ಕ್ಲೌಡ್ ಕೂಡ ಇದೆ’ ಎಂದರು.

‘ಯಾರೂ ಸಂಪರ್ಕಿಸಿಲ್ಲ’


ತಮ್ಮಯ್ಯ

ಚಿಕ್ಕಮಗಳೂರು: ‘ಬಿಜೆಪಿಯಿಂದ ಯಾರೂ ನನ್ನನ್ನು ಸಂಪರ್ಕ ಮಾಡಿಲ್ಲ, ನನಗೆ ಯಾರೂ ಹಣದ ಆಮಿಷ ಒಡ್ಡಿಲ್ಲ’ ಎಂದು ಕಾಂಗ್ರೆಸ್ ಶಾಸಕ ಎಚ್‌.ಡಿ. ತಮ್ಮಯ್ಯ ಹೇಳಿದರು.

‘ನಾನು ನಿಷ್ಠಾವಂತ ಕಾಂಗ್ರೆಸ್ ಶಾಸಕ. ರವಿಕುಮಾರ್ ಏನು ಮಾತನಾಡಿದ್ದಾರೆ, ನನ್ನ ಹೆಸರು ಏಕೆ ಬಂತು ಗೊತ್ತಿಲ್ಲ. ಅವರನ್ನೇ ಕೇಳಬೇಕು. ಈ ಹಿಂದೆ 18 ವರ್ಷ ಬಿಜೆಪಿಯಲ್ಲಿ ಇದ್ದೆ. ಬಿಜೆಪಿಯವರು ಸಿಕ್ಕಿದಾಗ ಆತ್ಮೀಯವಾಗಿ ಮಾತನಾಡುತ್ತಾರೆ. ಬಿಜೆಪಿ ಸೇರುವಂತೆ ಯಾರೂ ಪ್ರಸ್ತಾಪ ಮಾಡಿಲ್ಲ’ ಎಂದರು.

‘ನಾನು ಮಾರಾಟಕ್ಕಿಲ್ಲ’


ಬಾಬಾಸಾಹೇಬ ಪಾಟೀಲ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ‘ಬಿಜೆಪಿಯ ಹಿರಿಯ ನಾಯಕರು ಬಹಳ ದಿನಗಳ ಹಿಂದೆ ಆಪರೇಷನ್ ಕಮಲಕ್ಕಾಗಿ ನನ್ನನ್ನು ಸಂಪರ್ಕಿಸಿದ್ದರು. ನಾನು ಮಾರಾಟಕ್ಕಿಲ್ಲ’ ಎಂದು ಕಾಂಗ್ರೆಸ್‌ನ ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

‘ಕಾಂಗ್ರೆಸ್ ಪಕ್ಷಕ್ಕೆ ನನ್ನ ನಿಷ್ಠೆ. ಬೇರೆ ಪಕ್ಷಕ್ಕೆ ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬಿಜೆಪಿ ನಾಯಕರು ಸಂಪರ್ಕಿಸಿದ್ದ ವಿಷಯವನ್ನು ಪಕ್ಷದ ಗಮನಕ್ಕೂ ತಂದಿದ್ದೇನೆ’ ಎಂದರು.

‘ಕಾಂಗ್ರೆಸ್ ಸರ್ಕಾರ ನನ್ನ ಕ್ಷೇತ್ರಕ್ಕೆ ಅನುದಾನ ನೀಡಿದೆ. ಎಲ್ಲ ರೀತಿಯ ಸಹಕಾರವನ್ನು ಪಕ್ಷದ ನಾಯಕರು ನೀಡುತ್ತಿದ್ದಾರೆ. ಕಾಂಗ್ರೆಸ್ ತೊರೆಯುವ ವಿಚಾರವೇ ಬರುವುದಿಲ್ಲ’ ಎಂದು ಹೇಳಿದರು.

ಸರ್ಕಾರಿ ಕಚೇರಿಗಳಿಗೆ ಬೀಗ ಹಾಕಿದ ಪ್ರತಿಭಟನಕಾರರು • ಜಿರೀಬಾಮ್ ಇನ್ನೂ ಬೂದಿ ಮುಚ್ಚಿದ ಕೆಂಡ

ಮಣಿಪುರಕ್ಕೆ ಹೆಚ್ಚುವರಿ ಪಡೆ ರವಾನೆ

ಇಂಫಾಲ/ನವದೆಹಲಿ (ಪಿಟಿಐ): ಮಣಿಪುರದಲ್ಲಿ ಕರ್ಫ್ಯೂ ಆದೇಶವನ್ನು ಉಲ್ಲಂಘಿಸಿ ಮೈತೇಯಿ ಸಮುದಾಯದ ಗುಂಪೊಂದು ಸೋಮವಾರ ಬೀದಿಗೆ ಇಳಿದು, ಇಂಫಾಲ ಪಶ್ಚಿಮ ಜಿಲ್ಲೆಯಲ್ಲಿ ಹಲವು ಸರ್ಕಾರಿ ಕಚೇರಿಗಳಿಗೆ ಬೀಗ ಹಾಕಿದೆ.

ಜಿರೀಬಾಮ್‌ನಲ್ಲಿ ಈಚೆಗೆ ನಡೆದ ಕೆಲವು ಹತ್ಯೆಗಳನ್ನು ವಿರೋಧಿಸಿ ಮೈತೇಯಿ ಸಮುದಾಯದವರು ಈ ಬಗೆಯಲ್ಲಿ ಪ್ರತಿಭಟಿಸಿದ್ದಾರೆ.

ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ಕಾರಣ ಅಲ್ಲಿಗೆ ಹೆಚ್ಚುವರಿಯಾಗಿ ಒಟ್ಟು 5,000ಕ್ಕೂ ಹೆಚ್ಚು ಸಿಬ್ಬಂದಿ ಇರುವ 50 ಸಿಎಪಿಎಫ್ (ಕೇಂದ್ರ ಸಶಸ್ತ್ರ ಪೊಲೀಸ್ ಪಡೆ) ಕಂಪನಿಗಳನ್ನು ಕಳುಹಿಸಲು ತೀರ್ಮಾನಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಣಿಪುರ ಸ್ಥಿತಿ ಕುರಿತು ಪರಿಶೀಲನಾ ಸಭೆ ನಡೆಸಿದ ನಂತರ ಈ ತೀರ್ಮಾನ ಕೈಗೊಳ್ಳಲಾಗಿದೆ.

ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಸಚಿವರು ಹಾಗೂ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಶಾಸಕರ ಜೊತೆ ತುರ್ತು ಸಭೆ ನಡೆಸಿ, ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ.

ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಹಿಂಸಾಚಾರ ಶುರುವಾಗಿ, ಅದು ಇತರ ಕಡೆಗಳಿಗೂ ಹರಡಿದ ನಂತರ ಕೇಂದ್ರ ಗೃಹ ಸಚಿವಾಲಯವು 20 ಸಿಎಪಿಎಫ್ ಕಂಪನಿಗಳನ್ನು (ಸಿಆರ್‌ಪಿಎಫ್‌ನ 15 ಹಾಗೂ ಬಿಎಸ್‌ಎಫ್‌ನ ಐದು) ರವಾನಿಸಿತ್ತು.

ಈಗ ಹೆಚ್ಚುವರಿಯಾಗಿ 50 ಕಂಪನಿಗಳು ಈ ವಾರಾಂತ್ಯದೊಳಗೆ ಮಣಿಪುರ ತಲುಪಲಿವೆ. 35 ಕಂಪನಿಗಳನ್ನು ಸಿಆರ್‌ಪಿಎಫ್‌ನಿಂದ, ಇನ್ನುಳಿದ ಕಂಪನಿಗಳನ್ನು ಬಿಎಸ್‌ಎಫ್‌ನಿಂದ ಕಳುಹಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸಿಆರ್‌ಪಿಎಫ್‌ನ ಮಹಾನಿರ್ದೇಶಕ ಎ.ಡಿ. ಸಿಂಗ್ ಮತ್ತು ಸಿಎಪಿಎಫ್‌ನ ಹಿರಿಯ ಅಧಿಕಾರಿಗಳು ಮಣಿಪುರದಲ್ಲಿ ಬೀಡುಬಿಟ್ಟಿದ್ದಾರೆ. ಕಳೆದ ವಾರದ ನಿಯೋಜನೆಯನ್ನು ಪರಿಗಣಿಸಿದರೆ ಮಣಿಪುರ ರಾಜ್ಯದಲ್ಲಿ ಈಗಾಗಲೇ 218 ಸಿಎಪಿಎಫ್ ಕಂಪನಿಗಳು ಇವೆ.

ಸಂಘರ್ಷಕ್ಕೆ ಒಬ್ಬ ಸಾವು

ಹಿಂಸಾಗ್ರಸ್ತ ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಆಸ್ತಿಗಳನ್ನು ಧ್ವಂಸಗೊಳಿಸುತ್ತಿದ್ದ ಉದ್ರಿಕ್ತರ ಗುಂಪು ಹಾಗೂ ಭದ್ರತಾ ಪಡೆಗಳ ನಡುವೆ ಸಂಘರ್ಷ ಉಂಟಾಗಿದೆ. ಸಂಘರ್ಷದ ವೇಳೆ ಗುಂಡು ಹಾರಿಸಿದಾಗ, ಪ್ರತಿಭಟನೆಯಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಆದರೆ ಮೊದಲು ಗುಂಡು ಹಾರಿಸಿದ್ದು ಯಾರು ಎಂಬುದು ಸ್ಪಷ್ಟವಾಗಿಲ್ಲ. ಭದ್ರತಾ ಪಡೆಗಳ ಕಡೆಯಿಂದ ಗುಂಡು ಹಾರಿದೆ ಎಂದು ಕೆಲವು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಭಾನುವಾರ ರಾತ್ರಿ ಈ ಘಟನೆ ನಡೆದಿದೆ.

ಉಗ್ರರು ಅಪಹರಿಸಿದ್ದ ಮಹಿಳೆಯರು ಹಾಗೂ ಮಕ್ಕಳನ್ನು ಹತ್ಯೆ ಮಾಡಿದ್ದನ್ನು ವಿರೋಧಿಸಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ, ಉದ್ರಿಕ್ತರು ಜಿರೀಬಾಮ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಸ್ತಿಗಳನ್ನು ಧ್ವಂಸಗೊಳಿಸುತ್ತಿದ್ದರು. ಆಗ ಈ ಘರ್ಷಣೆ ನಡೆದಿದೆ.

20 ಹರೆಯದ ಈ ಮೃತ ವ್ಯಕ್ತಿಯನ್ನು ಕೆ. ಅತೌಬಾ ಎಂದು ಗುರುತಿಸಲಾಗಿದೆ. ಇಂಫಾಲ ಕಣಿವೆಯಲ್ಲಿ ಮೌನ ಮನೆಮಾಡಿದೆ. ಇಲ್ಲಿ ಕರ್ಫ್ಯೂ ಮುಂದುವರಿದಿದೆ. ಇಂಟರ್ನೆಟ್ ಸೇವೆಗಳ ಸ್ಥಗಿತವನ್ನು ಇನ್ನೂ ಹಿಂಪಡೆದಿಲ್ಲ.

ಎನ್‌ಐಎ ತನಿಖೆ

ಮಣಿಪುರದಲ್ಲಿ ಈಚೆಗೆ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಮೂರು ಪ್ರಕರಣಗಳನ್ನು ದಾಖಲಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಪ್ರಕರಣಗಳನ್ನು ಎನ್‌ಐಎ ನವೆಂಬರ್ 13ರಂದು ದಾಖಲು ಮಾಡಿಕೊಂಡಿದೆ, ತನಿಖೆ ಆರಂಭವಾಗಿದೆ ಎಂದು ಮೂಲಗಳು ಹೇಳಿವೆ.

ಜಿರೀಬಾಮ್‌ನಲ್ಲಿ ಶಸ್ತ್ರಸಜ್ಜಿತರಾಗಿದ್ದ ಉಗ್ರಗಾಮಿಗಳು ಮಹಿಳೆಯೊಬ್ಬಳನ್ನು ಹತ್ಯೆ ಮಾಡಿದ ಪ್ರಕರಣ, ಶಸ್ತ್ರಸಜ್ಜಿತ ಉಗ್ರರು ಸಿಆರ್‌ಪಿಎಫ್ ಸಿಬ್ಬಂದಿ ಮೇಲೆ ಹಾಗೂ ಪೊಲೀಸ್ ಠಾಣೆಯೊಂದರ ಮೇಲೆ ದಾಳಿ ನಡೆಸಿದ ಪ್ರಕರಣ, ಬೊರೊಬೆಕ್ರಾದಲ್ಲಿ ಮನೆಗಳನ್ನು ಸುಟ್ಟುಹಾಕಿದ್ದು ಹಾಗೂ ನಾಗರಿಕರ ಹತ್ಯೆ ಮಾಡಿದ ಪ್ರಕರಣ ಕುರಿತು ಎನ್‌ಐಎ ತನಿಖೆ ಆರಂಭಿಸಿದೆ.


ಇಂಫಾಲದಲ್ಲಿ ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿರುವ ಯೋಧ.–ಪಿಟಿಐ ಚಿತ್ರ

ಸತತ ಎರಡನೇ ದಿನವೂ ಅಮಿತ್ ಶಾ ಸಭೆ

ಮಣಿಪುರದ ಭದ್ರತಾ ವ್ಯವಸ್ಥೆಯ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಪರಿಶೀಲನೆ ನಡೆಸಿದರು. ಅಲ್ಲದೆ, ಮಣಿಪುರದಲ್ಲಿ ಕೇಂದ್ರದ ಪಡೆಗಳನ್ನು ನಿಯೋಜಿಸುವ ಬಗ್ಗೆಯೂ ಅವರು ಪರಿಶೀಲನೆ ನಡೆಸಿದರು.

ಅಮಿತ್ ಶಾ ಅವರು ಸತತ ಎರಡನೆಯ ದಿನವೂ ಮಣಿಪುರ ಸ್ಥಿತಿ ಬಗ್ಗೆ ಪರಿಶೀಲನಾ ಸಭೆ ನಡೆಸಿದ್ದಾರೆ. ಮಣಿಪುರದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಶಾಂತಿಯ ಮರುಸ್ಥಾಪನೆ ಆದಷ್ಟು ಬೇಗ ಆಗಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಕೇಂದ್ರ ಗೃಹ ಸಚಿವರು ನಡೆಸಿದ ಸಭೆಯಲ್ಲಿ ಕೇಂದ್ರ ಹಾಗೂ ಮಣಿಪುರ ಸರ್ಕಾರದ ಹಿರಿಯ ಅಧಿಕಾರಿಗಳು ಕೂಡ ಭಾಗಿಯಾಗಿದ್ದರು.

11ನೇ ಪುಟ ನೋಡಿ

ಉಸಿರುಗಟ್ಟುತ್ತಿದೆ ದೆಹಲಿ

ಎಎಪಿ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಚಾಟಿ

ನವದೆಹಲಿ (ಪಿಟಿಐ): ದೆಹಲಿಯ ವಾಯು ಗುಣಮಟ್ಟ ತೀವ್ರ ಕುಸಿತ ಕಂಡಿದ್ದರೂ ಜಿಆರ್‌ಎಪಿ–4ರ ಅಡಿಯಲ್ಲಿ ಕಠಿಣವಾದ ಕ್ರಮಗಳನ್ನು ಜಾರಿಗೊಳಿಸುವಲ್ಲಿ ವಿಳಂಬ ಏಕಾಯಿತು ಎಂದು ಸುಪ್ರೀಂ ಕೋರ್ಟ್ ಸೋಮವಾರ ದೆಹಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ವಾಯು ಗುಣಮಟ್ಟ ಸೂಚ್ಯಂಕ 494ಕ್ಕೆ

ದೇಶದ ರಾಜಧಾನಿ ದೆಹಲಿಯ ವಾಯು ಗುಣಮಟ್ಟ ಸೋಮವಾರ ಮತ್ತಷ್ಟು ಹದಗೆಟ್ಟಿದ್ದು, ಬೆಳಿಗ್ಗೆ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 484ಕ್ಕೆ ತಲುಪುವ ಮೂಲಕ ‘ತೀವ್ರ ಅಪಾಯ’ದ ಹಂತ ತಲುಪಿತು.




ದೆಹಲಿಗೆ ಇಂದು ಹಿಂತಿರುಗಿದೆ. ಮಧ್ಯಾಹ್ನ 2 ಗಂಟೆಯಾದರೂ ರನ್‌ವೇಯಲ್ಲಿ 100 ಮೀಟರ್ ದೂರವನ್ನೂ ನೋಡಲು ಆಗುತ್ತಿರಲಿಲ್ಲ. ನಾನು ಇಲ್ಲಿ 40 ವರ್ಷಗಳಲ್ಲಿ ಈ ರೀತಿಯದ್ದನ್ನು ಕಂಡಿರಲಿಲ್ಲ. ದೆಹಲಿಗೆ ಎಂತಹ ದುರ್ಗತಿ ಬಂದಿತು. ಅತ್ಯುತ್ತಮ ಮತ್ತು ಅತ್ಯಾಕರ್ಷಕ ನಗರ ಈಗ ಉಸಿರುಗಟ್ಟಿಸುವ ಸಾವಿನ ಬಲೆಯಾಗಿದೆ

ವಿಲಿಯಂ ಡಾಲ್ರಿಂಪಲ್, ಸಾಹಿತಿ

ಸುದ್ದಿ 11







ನಮನ... ಕನಕದಾಸ ಜಯಂತಿಯ ಪ್ರಯುಕ್ತ ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಪುಷ್ಪವೃಷ್ಟಿಯ ಮೂಲಕ ಜನಪದ ಕಲಾವಿದರು ಗೌರವಾರ್ಪಣೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಸಿ.ಎಂ ಬಾಮೈದಗೆ ಇ.ಡಿ. ವಿಚಾರಣೆ

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬದಲಿ ನಿವೇಶನ ಹಂಚಿಕೆ ಪ್ರಕರಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಾಮೈದ ಬಿ.ಎಂ. ಮಲ್ಲಿಕಾರ್ಜುನಸ್ವಾಮಿ ಅವರು ಜಾರಿ ನಿರ್ದೇಶನಾಲಯದ (ಇ.ಡಿ.) ಎದುರು ಸೋಮವಾರ ಹಾಜರಾಗಿ, ವಿಚಾರಣೆ ಎದುರಿಸಿದರು.

ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ 14 ಬದಲಿ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದಡಿ ಲೋಕಾಯುಕ್ತ ಪೊಲೀಸರು ಹಾಗೂ ಇ.ಡಿ ದಾಖಲಿಸಿರುವ ಪ್ರತ್ಯೇಕ ಪ್ರಕರಣಗಳಲ್ಲಿ ಮಲ್ಲಿಕಾರ್ಜುನಸ್ವಾಮಿ ಮೂರನೇ ಆರೋಪಿಯಾಗಿದ್ದಾರೆ.

ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಮಲ್ಲಿಕಾರ್ಜುನ ಸ್ವಾಮಿ ಅವರು ದೇವರಾಜು ಎಂಬುವವರಿಂದ ಖರೀದಿಸಿದ್ದರು. ಕೆಲವು ವರ್ಷಗಳ ಬಳಿಕ ಆ ಜಮೀನನ್ನು ಸಹೋದರಿ ಪಾರ್ವತಿ ಅವರಿಗೆ ದಾನವಾಗಿ ನೀಡಿದ್ದರು. ಅದೇ ಜಮೀನಿನಲ್ಲಿ ಮುಡಾ ಅನಧಿಕೃತವಾಗಿ ಬಡಾವಣೆ ನಿರ್ಮಿಸಿದೆ ಎಂಬ ಕಾರಣಕ್ಕಾಗಿ ಪಾರ್ವತಿ ಅವರಿಗೆ ಮೈಸೂರಿನ ವಿಜಯನಗರದಲ್ಲಿ 14 ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು.

ಮುಡಾ ಮಾಜಿ ಆಯುಕ್ತರಾದ ಡಿ.ಬಿ. ನಟೇಶ್, ದಿನೇಶ್ ಕುಮಾರ್, ಅವರ ಆಪ್ತರು, ಬೆಂಗಳೂರು, ಮೈಸೂರು ಮತ್ತು ಮಂಡ್ಯದಲ್ಲಿನ ಕೆಲವು ಬಿಲ್ಡರ್‌ಗಳ ಮನೆ, ಕಚೇರಿಗಳ ಮೇಲೆ ದಾಳಿಮಾಡಿದ್ದ ಇ.ಡಿ. ಅಧಿಕಾರಿಗಳು ಶೋಧ ನಡೆಸಿದ್ದರು. ಮುಡಾ ಕಚೇರಿಯಲ್ಲೂ ಶೋಧ ನಡೆಸಲಾಗಿತ್ತು. ದಾಳಿ ವೇಳೆ ವಶಕ್ಕೆ ಪಡೆದ ದಾಖಲೆಗಳ ಆಧಾರದಲ್ಲೂ ಮಲ್ಲಿಕಾರ್ಜುಸ್ವಾಮಿ ಅವರನ್ನು ಪ್ರಶ್ನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಐದು ಗಂಟೆ ವಿಚಾರಣೆ: ಹೇಳಿಕೆ ದಾಖಲು

‘ಐದು ಗಂಟೆಗಳ ಕಾಲ ಮಲ್ಲಿಕಾರ್ಜುನಸ್ವಾಮಿ ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು. ಪರಿಶಿಷ್ಟ ಜಾತಿಯ ಕುಟುಂಬಕ್ಕೆ ಮಂಜೂರಾಗಿದ್ದ ಜಮೀನಿನ ಖರೀದಿ, ಜಮೀನು ಖರೀದಿಗೆ ಬಳಸಿದ ಹಣದ ಮೂಲ, ಆ ಬಳಿಕ ಸಹೋದರಿ ಪಾರ್ವತಿ ಅವರಿಗೆ ಜಮೀನನ್ನು ದಾನವಾಗಿ ನೀಡಿರುವುದು ಸೇರಿದಂತೆ ಹಲವು ವಿಷಯಗಳ ಕುರಿತು ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಏಕ್ ಹೈ ತೋ ಸೇಫ್ ಹೈ’ಗೆ ರಾಹುಲ್ ಲೇವಡಿ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ‘ಏಕ್ ಹೈ ತೋ ಸೇಫ್ ಹೈ’ (ಒಗ್ಗಟ್ಟಾಗಿದ್ದರೆ ಸುರಕ್ಷಿತವಾಗಿರುತ್ತೇವೆ) ಘೋಷಣೆ ಮತ್ತು ಅದಾನಿ ಸಮೂಹಕ್ಕೆ ಗುತ್ತಿಗೆ ನೀಡಿರುವ ಧಾರಾವಿ ಮರು ಅಭಿವೃದ್ಧಿ ಯೋಜನೆಯನ್ನು ತುಲನೆ ಮಾಡಿ, ಲೋಕಸಭಾ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಲೇವಡಿ ಮಾಡಿದರು. 5

ಕಾಳುಮೆಣಸು ಜಿಎಸ್‌ಟಿಗೆ ಬೇಡ

ಮಡಿಕೇರಿ: ‘ಕಾಳುಮೆಣಸನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬಾರದು’ ಎಂದು ಕರ್ನಾಟಕ ಬೆಳೆಗಾರರ ಸಂಘವು ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. 10

ಒಳಪುಟಗಳಲ್ಲಿ



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಟೆಕ್ ಶೃಂಗಕ್ಕೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯಾದ ಅತಿ ದೊಡ್ಡ ತಂತ್ರಜ್ಞಾನ ಶೃಂಗ ಎನಿಸಿರುವ ‘ಬೆಂಗಳೂರು ಟೆಕ್ ಶೃಂಗ 2024’ಕ್ಕೆ ನಗರದ ಅರಮನೆ ಆವರಣದಲ್ಲಿ ಮಂಗಳವಾರ (ನ.19 ರಿಂದ 21) ಚಾಲನೆ ಸಿಗಲಿದೆ.

ಈ ಬಾರಿಯ ಶೃಂಗದ ವಿಷಯ ‘ಅನ್‌ಬೌಂಡ್’ (ಅನಿಯಮಿತ) ಎಂಬುದಾಗಿದ್ದು, ಸಿ.ಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ.

ಅಂಕಿ ಅಂಶಗಳು

15 ದೇಶಗಳ ಉನ್ನತ ಮಟ್ಟದ ನಿಯೋಗ

52 ದೇಶಗಳ ಪ್ರತಿನಿಧಿಗಳು

ನವೋದ್ಯಮಗಳ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಜಾಗತಿಕ ಪಾಲುದಾರಿಕೆಗೆ ಆದ್ಯತೆ ನೀಡಲಾಗಿದೆ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

6ನೇ ಪುಟ ನೋಡಿ

ಗ್ರಾಮೀಣ ಐಟಿ ರಸಪ್ರಶ್ನೆ

ಪ್ರತಿ ಬಾರಿಯಂತೆ ಈ ಬಾರಿಯೂ ಟಿಸಿಎಸ್ ಗ್ರಾಮೀಣ ಐಟಿ ರಸಪ್ರಶ್ನೆ ಮತ್ತು ಬಯೋಕ್ವಿಜ್‌ನ ಫೈನಲ್ ನಡೆಯಲಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಅಲ್ಲದೇ, ಯುವ ಸಂಶೋಧಕರು ಮತ್ತು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬಯೋ ಪೋಸ್ಟರ್ಸ್– ಡಿಸ್ಕವರಿ ವಾಕ್‌ವೇ, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಪದವೀಧರರಿಗೆ ತಮ್ಮ ನವೀನ ಪರಿಕಲ್ಪನೆಗಳು ಮತ್ತು ಆಲೋಚನೆಗಳನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

‘ಕಬ್ಬನ್ ಪಾರ್ಕ್ ಮತ್ತು ಮಂತ್ರಿ ಸ್ಕ್ವೇರ್ ಮೆಟ್ರೊ ನಿಲ್ದಾಣಗಳಿಂದ ಅರಮನೆ ಮೈದಾನದ ಆವರಣಕ್ಕೆ ಬಸ್ ವ್ಯವಸ್ಥೆಯೂ ಇದೆ’ ಎಂದರು.

ಜನರಲ್ಲಿ ಹೆಚ್ಚಿದ ಭೀತಿ: ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಚಿರತೆ ದಾಳಿಗೆ ಬಲಿಯಾದ ಮಹಿಳೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯ ಗಡಿ ಗ್ರಾಮ ಶಿವಗಂಗೆ ಬೆಟ್ಟದ ತಪ್ಪಲಿನ ಕಂಬಾಳು ಗೊಲ್ಲರಹಟ್ಟಿ ಗ್ರಾಮದ ಮಹಿಳೆಯೊಬ್ಬರನ್ನು ಭಾನುವಾರ ಸಂಜೆ ಚಿರತೆಯೊಂದು ಕೊಂದು, ತಲೆ ಹಾಗೂ ಎದೆಯ ಭಾಗಗಳನ್ನು ತಿಂದು ಹಾಕಿದೆ.

ಗೊಲ್ಲರಹಟ್ಟಿ ಕರಿಯಮ್ಮ (55) ಮೃತಪಟ್ಟವರು. ಭಾನುವಾರ ಸಂಜೆ 5.30ರ ವೇಳೆಗೆ ಕರಿಯಮ್ಮ ತಮ್ಮ ಮನೆಯ ಸಮೀಪದ ಹಿತ್ತಲಲ್ಲಿ ಹುಲ್ಲು ಕೊಯ್ಯಲು ಹೋಗಿದ್ದರು. 6.30 ಗಂಟೆಯಾದರೂ ಹಿಂತಿರುಗದೇ ಇದ್ದಾಗ, ಮನೆಯವರು ಹುಡುಕಾಡಿದ್ದರು.

‘ಹಿತ್ತಲ ಬಳಿ ಕರಿಯಮ್ಮ ಅವರ ಚಪ್ಪಲಿ ಮತ್ತು ಹರಿದ ಬಟ್ಟೆಯ ಜತೆಗೆ ರಕ್ತದ ಕಲೆಯೂ ಪತ್ತೆಯಾಯಿತು’ ಎಂದು ಗ್ರಾಮದ ಮುನಿರಂಗಯ್ಯ ವಿವರಿಸಿದರು.

7ನೇ ಪುಟ ನೋಡಿ


ಮಹಿಳೆಯನ್ನು ಕೊಂದ ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಯಿಂದ ಘಟನಾ ಸ್ಥಳದ ಸಮೀಪದಲ್ಲಿ ಬೋನು ಇರಿಸಲಾಗಿದೆ


ಹಸು ಮೇಯಿಸುವಾಗ ನನ್ನ ಮೇಲೆ ದಾಳಿ ಮಾಡಿದ್ದ ಚಿರತೆ ಈಗ ಕರಿಯಮ್ಮ ಅವರ ಜೀವ ತೆಗೆದಿದೆ. ಈ ಹಿಂದೆಯೇ ಅರಣ್ಯ ಇಲಾಖೆ ಅಧಿಕಾರಿಗಳು ಗಮನಹರಿಸಿದ್ದರೆ ಒಂದು ಜೀವ ಉಳಿಯುತ್ತಿತ್ತು

ಅಮ್ಮಯ್ಯಮ್ಮ, ಹಿಂದೆ ಚಿರತೆ ದಾಳಿಗೊಳಗಾದ ಮಹಿಳೆ

ಬೋನು ಇಟ್ಟು ಚಿರತೆಯನ್ನು ಹಿಡಿದು ದೂರ ಬಿಡಲಾಗುವುದು.

ಮಂಜುನಾಥ್, ಆರ್‌ಎಫ್‌ಒ, ನೆಲಮಂಗಲ ಪ್ರಾದೇಶಿಕ ವಲಯ

‘ದಾಳಿಗಳಿಂದ ತಪ್ಪಿಸಿಕೊಂಡಿದ್ದರು’


ಕರಿಯಮ್ಮ

‘ಕರಿಯಮ್ಮ ಬಹಳ ಧೈರ್ಯವಂತೆ. ಹಿಂದೆ ಒಮ್ಮೆ ಹಸು ಕಾಯುತ್ತಿದ್ದಾಗ ಹಾಗೂ ಒಮ್ಮೆ ಮೇಕೆ ಮೇಲೆ ಚಿರತೆ ದಾಳಿ ಮಾಡಿದಾಗ ತಪ್ಪಿಸಿಕೊಂಡು, ಮೇಕೆಯನ್ನು ಕಾಪಾಡಿದ್ದರು. ಆದರೆ, ಮೂರನೇ ಸಲ ವನ್ಯಜೀವಿ ದಾಳಿಗೆ ಒಳಗಾಗಿ ಜೀವ ತೆತ್ತಿದ್ದಾರೆ’ ಎಂದು ಕಂಬಾಳು ಗೊಲ್ಲರಹಟ್ಟಿಯ ಗ್ರಾಮಸ್ಥರು ಹೇಳಿದರು.

ಮತ್ತೆರಡು ಮೇಕೆ ಬಲಿ

ಇತ್ತ ಮಹಿಳೆಯನ್ನು ಕೊಂದ ಚಿರತೆಯನ್ನು ಹಿಡಿಯಲು ಅರಣ್ಯಾಧಿಕಾರಿಗಳು ಬೋನು ಇರಿಸಿ ಕಾಯುತ್ತಿದ್ದರೆ, ಗೊಲ್ಲರಹಟ್ಟಿಯ ಸಮೀಪದ ಬ್ಯಾಡರಹಳ್ಳಿಯ ಗೋಮಾಳದಲ್ಲಿ ಚಿರತೆ ಸೋಮವಾರ ಸಂಜೆ ಎರಡು ಮೇಕೆಗಳನ್ನು ಕೊಂದಿದೆ.

ಅಂಡೆಕಲ್ಲು ಕಾಲೊನಿಯ ರಾಜಣ್ಣ ಮತ್ತು ಕರಿಯಮ್ಮ ಅವರು ಬ್ಯಾಡರಹಳ್ಳಿಯ ಗೋಮಾಳದಲ್ಲಿ ಸೋಮವಾರ ಸಂಜೆ ಮನೆಗೆ ಮೇಕೆ ಹೊಡೆದುಕೊಂಡು ಬರುತ್ತಿದ್ದರು. ಆಗ ಹಿಂದಿನಿಂದ ಬಂದ ಚಿರತೆ ಮೇಕೆಯೊಂದರ ಮೇಲೆ ದಾಳಿ ಮಾಡಿದೆ.

ಅದನ್ನು ಬಿಡಿಸಲು ಮುಂದಾದ ರಾಜಣ್ಣ ಅವರ ಕಾಲಿಗೆ ಪರಚಿದೆ. ಚಿರತೆ ದಾಳಿಯಿಂದ ಕರಿಯಮ್ಮ ಅವರ ಮೇಕೆ ಸತ್ತಿದ್ದರೆ, ರಾಜಣ್ಣ ಅವರ ಮೇಕೆಯೊಂದನ್ನು ಎಳೆದೊಯ್ದಿದೆ.



ಹಿಂದುಳಿದ ಜಾತಿಗಳ ಒಕ್ಕೂಟದ ಕಾರ್ಯದರ್ಶಿ ಗುಂಜೂರು ಆರ್.ರಾಮಕೃಷ್ಣಪ್ಪ ಅವರು ಶಾಲಾ ಮಕ್ಕಳಿಗೆ ಕನಕದಾಸರ ಕೀರ್ತನೆಗಳ ಕಿರು ಪುಸ್ತಕಗಳನ್ನು ವಿತರಿಸಿದರು

‘ಕನಕದಾಸರ ತತ್ವಾದರ್ಶ ಪಾಲಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಜಾತಿ ಸಂಕೋಲೆಯನ್ನು ಕಳಚಿದ ಭಕ್ತ ಕನಕದಾಸರ ತತ್ವ, ಕೀರ್ತನೆಯ ಸಂದೇಶಗಳನ್ನು ಪಾಲಿಸುವುದು ನಾವು ಅವರಿಗೆ ಕೊಡುವ ಅತಿ ದೊಡ್ಡ ಗೌರವ ಎಂದು ಹಿಂದುಳಿದ ಜಾತಿಗಳ ಒಕ್ಕೂಟದ ಕಾರ್ಯದರ್ಶಿ ಗುಂಜೂರು ಆರ್.ರಾಮಕೃಷ್ಣಪ್ಪ ಹೇಳಿದರು

ಕೆ.ಆರ್.ಪುರದ ಗುಂಜೂರು ಪಾಳ್ಯದಲ್ಲಿ ಸಂತ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಕುಲ ಕುಲವೆಂದು ಬಡಿದಾಡದಿರಿ ಎಂದು ಕನಕದಾಸರು ನೀಡಿದ ಸಂದೇಶ ಇಂದಿಗೂ ಪ್ರಸ್ತುತ. ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಲಾಗಿದೆ. ಆದರೆ, ನಮ್ಮ ಮನಃಸ್ಥಿತಿಗಳು ಬದಲಾಗಬೇಕು ಎಂದರು.

ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ಕ್ರಿಕೆಟ್ ಮತ್ತು ಕಬಡ್ಡಿಯಲ್ಲಿ ವಿಜೇತರಾದ ತಂಡಗಳಿಗೆ ರಾಯಣ್ಣ ಕಪ್, ಕನಕ ಕಪ್ ಜೊತೆಗೆ ನಗದು ಬಹುಮಾನ ವಿತರಿಸಲಾಯಿತು. ಕನಕದಾಸರ ಕೀರ್ತನೆಗಳ ಕಿರು ಪುಸ್ತಕವನ್ನು ಶಾಲಾ ಮಕ್ಕಳಿಗೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಗೋಪಾಲ್, ಮುರಳಿ, ಬಾಲಾಜಿ, ಶ್ರೀಧರ್, ಮಂಜು, ನಾಗರಾಜ್ ರಮೇಶ್, ರಘುರಾಮ ರೆಡ್ಡಿ ಸರ್ವೇಶ್, ಮೋಹನ್ ಬಾಬು ಇದ್ದರು.

ಕನಕದಾಸರ ಜಯಂತಿಯಲ್ಲಿ ಸಿದ್ದರಾಮಯ್ಯಗೆ ಪ್ರಶ್ನಿಸಿದ ಸಿದ್ದರಾಮಾನಂದ ಸ್ವಾಮೀಜಿ

ಜಾತಿ ಗಣತಿ ವರದಿ ಬಿಡುಗಡೆ ವಿಳಂಬ ಏಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ (ಜಾತಿವಾರು ಜನಗಣತಿ) ವರದಿಯನ್ನು ಬಿಡುಗಡೆ ಮಾಡಲು ಯಾಕೆ ಮೀನಾಮೇಷ ಎಣಿಸುತ್ತಿದ್ದೀರಿ? ಅಧಿಕಾರ ಹೋದರೆ ಹೋಗಲಿ, ಬೇಗ ಬಿಡುಗಡೆ ಮಾಡಿ. ಇದರಿಂದ ಎಲ್ಲ ಸಮಾಜಗಳಿಗೆ ಅನುಕೂಲವಾಗಲಿದೆ’ ಎಂದು ತಿಂಥಿಣಿ ಕನಕ ಗುರುಪೀಠದ ಸಿದ್ದರಾಮಾನಂದ ಸ್ವಾಮೀಜಿ ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮುಖ್ಯಮಂತ್ರಿಯವರ ಎದುರೇ ಮಾತನಾಡಿದರು.

‘ಕೆಲವರು ಸಿದ್ದರಾಮಯ್ಯ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ಜಾತಿವಾರು ಜನಗಣತಿಯ ವರದಿ ಬಿಡುಗಡೆ ಮಾಡದಂತೆ ಒತ್ತಡ ಹೇರುತ್ತಿದ್ದಾರೆ. ಕೈಕಟ್ಟಿ ಹಾಕುತ್ತಿದ್ದಾರೆ. ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳದೇ ಸಮೀಕ್ಷೆ ವರದಿಯನ್ನು ಬಿಡುಗಡೆ ಮಾಡಬೇಕು. ಅದೇ ರೀತಿ ಕುರುಬ ಸಮುದಾಯದಲ್ಲಿನ 18 ಶ್ರೀಮಂತ ಕಲಾ ಪ್ರಕಾರಗಳನ್ನು ಉಳಿಸಲು ಕುರುಬ ಕಲಾ ಅಕಾಡೆಮಿ ಸ್ಥಾಪನೆ ಮಾಡಬೇಕು. ಯಾವುದಾದರೂ ವಿಶ್ವ ವಿದ್ಯಾಲಯಕ್ಕೆ ಕನಕದಾಸರ ಹೆಸರಿಡಬೇಕು’ ಎಂದು ಆಗ್ರಹಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, ‘ಮುಖ್ಯಮಂತ್ರಿ ಅವರಿಗೆ ಕಪ್ಪು ಚುಕ್ಕೆ ಹಚ್ಚುವ ಕೆಲಸ ಈಗ ನಡೆದಿದೆ. ಅವರ ಪರವಾಗಿ ಇಡೀ ಸಮಾಜವಿದೆ. ಕನಕದಾಸರು ಕೂಡ ಅಪಮಾನ ಅನುಭವಿಸಿದ್ದರು. ಅಪಮಾನ ಸಹಿಸಿಕೊಂಡು ಸಮಾಜ ತಿದ್ದುವ ಕೆಲಸ ಮಾಡಿದ್ದರು. ಉತ್ತಮ ಕೆಲಸ ಮಾಡುವವರಿಗೆ ಅಪಮಾನ ತಪ್ಪಿದ್ದಲ್ಲ’ ಎಂದರು.

ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಸಾಹಿತಿಗಳಾದ ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ ಇದ್ದರು.



ರೂಪಾ ರಾಜೇಶ್ ತಂಡದವರು ಕನಕದಾಸ ನೃತ್ಯ ರೂಪಕ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ


ಬರಹಗಾರರಿಗೆ ಅವಮಾನ: ಆರೋಪ

‘ಸಮಗ್ರ ತತ್ವಪದ ಯೋಜನೆಯ 18 ಸಂಪುಟಗಳನ್ನು ಕನಕ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಆದರೆ, ಕೆಲವೇ ಸಂಪುಟಗಳ ಬರಹಗಾರರನ್ನು ವೇದಿಕೆಗೆ ಕರೆದು, ಕೆಲವರನ್ನು ಬಿಟ್ಟು ಅವಮಾನ ಮಾಡಲಾಗಿದೆ’ ಎಂದು ಬರಹಗಾರ ಗಂಗಪ್ಪ ತಳವಾರ್ ಅವರು ಅಸಮಾಧಾನ ವ್ಯಕ್ತಪಡಿಸಿದರು.

18 ಸಂಪುಟಗಳಲ್ಲಿ ಒಂದಾದ ‘ಗಟ್ಟಹಳ್ಳಿ ಆಂಜನಪ್ಪನವರ ಸುಜ್ಞಾನ ಬೋಧ ತತ್ವಗಳು’ ಎಂಬ ಸಂಪುಟವನ್ನು ಗಂಗಪ್ಪ ತಳವಾರ್ ಸಂಪಾದಿಸಿದ್ದರು.

‘ನಮಗೆ ಆಹ್ವಾನ ನೀಡಿದ್ದಲ್ಲದೇ, ಬರುವುದನ್ನು ಖಚಿತಪಡಿಸಿಕೊಂಡಿದ್ದರು. ಆದರೆ, ಕೆಲವರನ್ನಷ್ಟೇ ವೇದಿಕೆಗೆ ಕರೆದು ನನ್ನ ಹೆಸರನ್ನೂ ಪ್ರಸ್ತಾಪ ಮಾಡದೇ ಅಪಮಾನ ಮಾಡಿದ್ದಾರೆ. ಈ ಯೋಜನೆಯ ಅಧ್ಯಕ್ಷ ನಟರಾಜ್ ಬೂದಾಳ್ ಅವರನ್ನೂ ಕರೆದಿಲ್ಲ’ ಎಂದು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಲೇಖಕರಿಗೆ ನೀಡುವ ಗೌರವ ಪ್ರತಿಯಾದರೂ ಸಿಗಬಹುದು ಎಂಬ ಕಾರಣಕ್ಕೆ ಅಧಿಕಾರಿಗಳನ್ನು ಕೇಳಿದರೆ, ದುಡ್ಡು ಕೊಟ್ಟು ತೆಗೆದುಕೊಂಡು ಹೋಗಿ ಎಂದು ಇನ್ನಷ್ಟು ಅಪಮಾನ ಮಾಡಿದ್ದಾರೆ’ ಎಂದರು.





ಕನಕದಾಸರ ಭಾವಚಿತ್ರಕ್ಕೆ ಹೂಮಾಲೆ ಹಾಕುವುದರ ಮೂಲಕ ಬ್ಯಾಟರಾಯನಪುರ ಕ್ಷೇತ್ರದ ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಚಿಕ್ಕಜಾಲದಲ್ಲಿ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು

‘ಸಮಾನತೆ ಸಂದೇಶ ಸಾರಿದ ದಾರ್ಶನಿಕ’

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ವತಿಯಿಂದ ಚಿಕ್ಕಜಾಲದಲ್ಲಿ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎನ್.ಕೆ. ಮಹೇಶ್‌ಕುಮಾರ್, ‘16ನೇ ಶತಮಾನದಲ್ಲಿಯೇ ಜಾತಿಪದ್ಧತಿಯ ವಿರುದ್ಧ ಹೋರಾಟ ನಡೆಸಿದವರು ಕನಕದಾಸರು. ಕೀರ್ತನೆಗಳ ಮೂಲಕ ಸಮಾಜಕ್ಕೆ ಸಮಾನತೆಯ ಸಂದೇಶ ಸಾರಿದ ಮಹಾನ್ ದಾರ್ಶನಿಕ ಅವರು. ಕನಕರ ಕೀರ್ತನೆಗಳು ಹಾಗೂ ಸಂದೇಶಗಳು ಸಮಾಜಕ್ಕೆ ಇಂದಿಗೂ ಪ್ರಸ್ತುತ’ ಎಂದು ಬಣ್ಣಿಸಿದರು.

‘ಹಾಸ್ಟೆಲ್ ನಿರ್ಮಾಣ ಪ್ರಗತಿಯಲ್ಲಿದೆ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಪಟ್ಟಣದಲ್ಲಿ ಕುರುಬ ಸಮುದಾಯ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಮುಖ್ಯಮಂತ್ರಿಯವರು ₹1 ಕೋಟಿ ಬಿಡುಗಡೆ ಮಾಡಿದ್ದಾರೆ. ಕಟ್ಟಡದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ’ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ಪಟ್ಟಣದಲ್ಲಿ ಸೋಮವಾರ ನಡೆದ ‘ಕನಕದಾಸ ಜಯಂತಿ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ತಾಲ್ಲೂಕಿನ ಬ್ಯಾಡರಹಳ್ಳಿಯ ಸಮೀಪ ಕನಕ ಭವನ ಹಾಗೂ ಅಂಗವಿಕಲರ ಶಾಲೆ ನಿರ್ಮಾಣಕ್ಕೆ ಒಂದು ಎಕರೆ ಐದು ಗುಂಟೆ ಜಾಗ ಮಂಜೂರಾಗಿದೆ. ಭವನ ನಿರ್ಮಾಣಕ್ಕೆ ಶಾಸಕರ ನಿಧಿಯಿಂದ ಹಾಗೂ ವೈಯಕ್ತಿಕವಾಗಿ ಸಹಕಾರ ನೀಡುತ್ತೇನೆ’ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಹೊನ್ನಸಿದ್ದಯ್ಯ, ಪ್ರಧಾನ ಕಾರ್ಯದರ್ಶಿ ಬಿ.ಡಿ.ಗಂಗರಾಜು ಕನಕ ಭವನ ನಿರ್ಮಾಣಕ್ಕೆ ಸರ್ಕಾರದ ಅನುದಾನ ಕೋರಿ ಮನವಿ ಪತ್ರ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕುರುಬ ಸಮಾಜದ ಸಾಧಕರಿಗೆ ಗೌರವಿಸಲಾಯಿತು. ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿ ವರೆಗೆ ಕನಕದಾಸರ ಭಾವಚಿತ್ರವನ್ನು ಜಾನಪದ ಕಲಾ ಪ್ರಕಾರಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ತಹಶೀಲ್ದಾರ್ ಅಮೃತ್ ಅತ್ರೇಶ್, ನಗರಸಭೆ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ಮುಖಂಡರಾದ ಚಿಕ್ಕನಾಗಯ್ಯ, ಕೆ.ನಾಗರಾಜು, ಕೇಶವಮೂರ್ತಿ, ಎಸ್. ಮುನಿರಾಜು, ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು, ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎಂ.ಕೆ.ನಾಗರಾಜು, ಕನಕ ಸಹಕಾರಿ ಸಂಘದ ಅಧ್ಯಕ್ಷ ಬಿ.ಎಸ್.ಲೋಕೇಶ್ ಭಾಗವಹಿಸಿದ್ದರು.



ಸಾಧಕರಾದ (ಕುಳಿತವರು) ನಗರಸಭೆ ಸದಸ್ಯ ಎನ್.ಎಂ.ಚೇತನ್, ಜ್ಯೋತಿಷಿ ವಿಖ್ಯಾತ್, ರೈತ ಗಂಗಕಾಳಯ್ಯ, ಕಲಾವಿದ ಬಿ.ಕೆಂಚಪ್ಪ, ಶಿಕ್ಷಣ ಕ್ಷೇತ್ರದ ನಾರಾಯಣಗೌಡ ಅವರನ್ನು ಶಾಸಕ ಎನ್.ಶ್ರೀನಿವಾಸ್ (ಮೂರನೆಯವರು) ಗೌರವಿಸಿದರು. ಚಿತ್ರದಲ್ಲಿ ಮುಖಂಡ ಚಿಕ್ಕನಾಗಯ್ಯ, ಕುರುಬರ ಸಂಘದ ಅಧ್ಯಕ್ಷ ಹೊನ್ನಸಿದ್ದಯ್ಯ, ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು, ನಗರಸಭೆ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ಮುಖಂಡ ಕೇಶವಮೂರ್ತಿ ಇದ್ದಾರೆ

‘ಬಿಜೆಪಿ ಆಮಿಷ ನಡೆಯಲ್ಲ’

‘ಆಪರೇಷನ್ ಮಾಡುತ್ತಿದ್ದವರೇ ಈಗ ಕಾಂಗ್ರೆಸ್ ಸೇರಿದ್ದಾರೆ. ಬಿಜೆಪಿಯವರು ನಮ್ಮ ಶಾಸಕರನ್ನು ಸಂಪರ್ಕಿಸುತ್ತಿದ್ದಾರೆ. ಎಲ್ಲ ಪಕ್ಷದ ಶಾಸಕರು ಕೆಪಿಸಿಸಿ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಯವರೊಂದಿಗೆ ಗಟ್ಟಿಯಾಗಿ ನಿಂತಿದ್ದೇವೆ’ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಯವರು, ನಮ್ಮ ಶಾಸಕರಿಗೆ ಆಸೆ, ಅಧಿಕಾರದ ಆಮಿಷಗಳನ್ನು ತೋರಿಸುತ್ತಿದ್ದಾರೆ. ಇದರಲ್ಲಿ ಅವರು ಯಶಸ್ವಿಯಾಗುವುದಿಲ್ಲ’ ಎಂದರು.

ನಾಳೆ ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆಸ್ಟಿನ್ ಟೌನ್‌ನ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಕೈಗೊಳ್ಳುವುದರಿಂದ ಬುಧವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಬ್ರಂಟನ್ ರಸ್ತೆ, ಶೋಭಾ ಪರ್ಲ್, ಐಸಿಐಸಿಐ ಬ್ಯಾಂಕ್, ಎಂಬೆಸ್ಸಿ ಹೈಟ್ಸ್, ಆಭರಣ್ ಜ್ಯೂವೆಲರ್ಸ್, ಹರ್ಬನ್ ಲೈಫ್, ಆರ್‌ಎಂಝಡ್, ಅಶೋಕ್ ನಗರ, ಗರುಡ ಮಾಲ್, ದೊಮ್ಮಲೂರು, ಆಸ್ಟಿನ್ ಟೌನ್, ವಿವೇಕ್ ನಗರ, ಟ್ರಿನಿಟಿ ಚರ್ಚ್, ವಿಜಾಜ್ ಬ್ಯಾಂಕ್, ಹೋಟೆಲ್ ತಾಜ್, ವಿಕ್ಟೋರಿಯಾ ಲೇಔಟ್, ಮ್ಯೂಸಿಯಂ ರಸ್ತೆ, ಆಲ್ಬರ್ಟ್ ಸ್ಟ್ರೀಟ್, ಕಿಂಗ್ ಸ್ಟ್ರೀಟ್, ಮ್ಯೂಸಿಯಂ ಅಡ್ಡ ರಸ್ತೆ, ಲ್ಯಾವೆಲ್ಲೆ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ವೈ.ಜಿ.ಪಾಳ್ಯ, ಕೆಎಸ್‌ಆರ್‌ಪಿ, ಐಟಿಸಿ ಹೋಟೆಲ್, ರಿಚ್ಮಂಡ್ ರಸ್ತೆ, ವನ್ನಾರ್‌ಪೇಟೆ, ಎಂ.ಜಿ.ರಸ್ತೆ, ಹೇಯ್ಸ್ ರಸ್ತೆ, ಕಾನ್ವೆಂಟ್ ರಸ್ತೆ, ಎಸ್.ಎಲ್. ಅಪಾರ್ಟ್‌ಮೆಂಟ್, ರಿಚ್ಮಂಡ್ ಟೌನ್, ನಂಜಪ್ಪ ವೃತ್ತ, ಸ್ಟೇನ್ ಗಾರ್ಡನ್, ರಿಚ್‌ಮಂಡ್ ಪಾರ್ಕ್, ಲಾಂಗ್‌ಫೋರ್ಡ್ ರಸ್ತೆ, ಬ್ರೈಟ್ ಸ್ಟ್ರೀಟ್, ಫುಡ್‌ವರ್ಲ್ಡ್ ರಸ್ತೆ, ಜಾನ್ಸನ್ ಮಾರುಕಟ್ಟೆ, ಅಶೋಕನಗರ, ಮಾರ್ಕಮ್ ರಸ್ತೆ, ಬ್ರಿಗೇಡ್ ರಸ್ತೆ, ವಾಣಿಜ್ಯ ಕಾಲೇಜು, ರಿಚ್ಮಂಡ್ ವೃತ್ತ, ವಿಠಲ ಮಲ್ಯ ರಸ್ತೆ, ಸಿದ್ದಯ್ಯ ರಸ್ತೆ, ವುಡ್‌ಸ್ಟ್ರೀಟ್, ಕ್ಯಾಸಲ್ ಸ್ಟ್ರೀಟ್, ನೀಲಸಂದ್ರ, ಆನೆಪಾಳ್ಯ, ಬಿಎಂಆರ್‌ಸಿಎಲ್ ಸುತ್ತಮುತ್ತಲಿನ ಪ್ರದೇಶಗಳು.

ಸಂಜೆ 5ರವರೆಗೆ ವ್ಯತ್ಯಯ: ಶೋಭಾ ಇಂದ್ರಪ್ರಸ್ಥ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸವಿರುವುದರಿಂದ ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಶೋಭಾ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್, ಗ್ಲೋಬಲ್ ಮಾಲ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.


ಅನಿಲ್ ದೇಶಮುಖ್‌ಗೆ ಗಾಯ

ನಾಗ್ಪುರ (ಪಿಟಿಐ): ನಾಗ್ಪುರ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಮತ್ತು ಎನ್‌ಸಿಪಿ (ಎಸ್‌ಪಿ) ನಾಯಕ ಅನಿಲ್ ದೇಶಮುಖ್ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕಲ್ಲು ತೂರಾಟ ನಡೆದಿದ್ದು, ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ದೇಶಮುಖ್ ಅವರು ನಾರ್ಖೆಡ್‌ನಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡು ಕಾಟೋಲ್‌ಗೆ ಹಿಂದಿರುಗುತ್ತಿದ್ದಾಗ ರಾತ್ರಿ 8ರ ಸುಮಾರಿಗೆ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಟೋಲ್ ಬಳಿಯ ಜಲಾಲ್‌ಖೆಡಾ ರಸ್ತೆಯಲ್ಲಿ ಕಾರು ಸಾಗುತ್ತಿದ್ದ ವೇಳೆ ಕೆಲವು ಅಪರಿಚಿತ ವ್ಯಕ್ತಿಗಳು ಕಲ್ಲು ಎಸೆದಿದ್ದಾರೆ. ಕಲ್ಲೇಟಿನಿಂದ ಗಾಯಗೊಂಡ ದೇಶಮುಖ್ ಅವರನ್ನು ತಕ್ಷಣವೇ ಕಾಟೋಲ್ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಹೇಳಿದ್ದಾರೆ.

ನಾಗ್ಪುರ ಗ್ರಾಮಾಂತರ ಎಸ್‌ಪಿ ಹರ್ಷ್ ಪೊದ್ದಾರ್ ಅವರು ಈ ಘಟನೆಯನ್ನು ಖಚಿತಪಡಿಸಿದ್ದು, ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ ಎಂದರು. ‘ಘಟನೆ ಬಗ್ಗೆ ತನಿಖೆ ಆರಂಭಿಸಲಾಗಿದೆ. ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಪ್ರಯತ್ನಿಸುತ್ತಿದ್ದಾರೆ’ ಎಂದರು.



ಗಾಯಗೊಂಡಿರುವ ಅನಿಲ್ ದೇಶಮುಖ್ —ಪಿಟಿಐ ಚಿತ್ರ

ಸಾಮಾನ್ಯ ಬಸ್‌ಗಳಲ್ಲಿಯೂ ಅನುಷ್ಠಾನಗೊಳ್ಳಬೇಕಿದೆ ಆ್ಯಪ್ ಆಧಾರಿತ ವ್ಯವಸ್ಥೆ

ಯುಪಿಐ: ಬಿಎಂಟಿಸಿ ಮುಂಚೂಣಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಯುಪಿಐ ಆಧಾರಿತ ಆ್ಯಪ್‌ಗಳ ಮೂಲಕ ಹಣ ಪಾವತಿಸಿಕೊಂಡು ಟಿಕೆಟ್ ನೀಡುವುದರಲ್ಲಿ ಬಿಎಂಟಿಸಿ ಮುಂಚೂಣಿಯಲ್ಲಿದೆ. ಆದರೆ, ದೂರ ಪ್ರಯಾಣದ ಬಸ್‌ಗಳಲ್ಲಿ ಮಾತ್ರ ಈ ವ್ಯವಸ್ಥೆ ಇದ್ದು, ಉಳಿದ ಬಸ್‌ಗಳಲ್ಲಿ ಅನುಷ್ಠಾನಗೊಂಡಿಲ್ಲ.

ಕೋವಿಡ್ ಕಾಲದಲ್ಲಿ ಅಂತರ ಕಾಪಾಡಿಕೊಳ್ಳಬೇಕು ಎಂಬ ನಿಯಮ ಬಂದಾಗ ಬಿಎಂಟಿಸಿ ಬಸ್‌ನಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯನ್ನು 2021ರ ಮೇ ತಿಂಗಳಲ್ಲಿ ಪರಿಚಯಿಸಲಾಗಿತ್ತು. ಆ ವರ್ಷ 8 ತಿಂಗಳಲ್ಲಿ ₹36 ಲಕ್ಷ ವರಮಾನ ಯುಪಿಐ ಆಧಾರಿತವಾಗಿ ಬಂದಿದ್ದರೆ, ಈ ವರ್ಷ 7 ತಿಂಗಳಲ್ಲಿ ₹50 ಕೋಟಿ ದಾಟಿರುವುದು ಯುಪಿಐ ಬಳಕೆಗೆ ಪ್ರಯಾಣಿಕರು ಹೆಚ್ಚು ಒತ್ತು ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

'ಉಳಿದ ನಿಗಮಗಳಲ್ಲಿ ಯುಪಿಐ ವ್ಯವಸ್ಥೆ ಇತ್ತೀಚೆಗೆ ಜಾರಿಯಾಗುತ್ತಿದೆ. ನಾವು ಮೂರೂವರೆ ವರ್ಷಗಳ ಹಿಂದೆಯೇ ಅನುಷ್ಠಾನಕ್ಕೆ ತಂದಿದ್ದೇವೆ. ಈಗ ಪ್ರತಿದಿನ ₹20 ಲಕ್ಷದಿಂದ ₹25 ಲಕ್ಷ ವರೆಗೆ ಯುಪಿಐ ಮೂಲಕ ಬರುತ್ತಿದೆ. ಇದು ಉಳಿದ ನಿಗಮಗಳಿಗಿಂತ ಅಧಿಕ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಾಯೋಗಿಕ ಸಮಸ್ಯೆ: ಬಿಎಂಟಿಸಿಯ ಎಲ್ಲ ಬಸ್‌ಗಳಲ್ಲಿ ಯುಪಿಐ ಬಳಸಬೇಕು ಎಂದು ಅಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಜೊತೆಗೆ ಎಲ್ಲ ನಿರ್ವಾಹಕರಿಗೆ ಯುಪಿಐ ಆಧಾರಿತವಾಗಿ ಕಾರ್ಯನಿರ್ವಹಿಸುವ ಟಿಕೆಟ್ ಮಷಿನ್‌ಗಳನ್ನೂ ಕೂಡ ನೀಡಿದ್ದಾರೆ. ಆದರೆ, ದೇವನಹಳ್ಳಿ, ಬನ್ನೇರುಘಟ್ಟ ಹೀಗೆ ದೂರದ ಊರಿಗೆ ಸಾಗುವ ವೋಲ್ವೊ ಬಸ್‌ಗಳನ್ನು ಹೊರತುಪಡಿಸಿ ಉಳಿದ ಬಸ್‌ಗಳಲ್ಲಿ ಬಳಕೆ ಬಹಳ ಕಡಿಮೆ ಇದೆ.

'ನಗರದಲ್ಲಿ ಸಂಚರಿಸುವ ಸಾಮಾನ್ಯ ಬಸ್‌ಗಳಿಗೆ ಅರ್ಧ ಕಿಲೋಮೀಟರ್‌ಗೆ ಒಮ್ಮೆ ನಿಲುಗಡೆ ಇರುತ್ತದೆ. ಬಸ್ ಹತ್ತಿ ಮುಂದಿನ ನಿಲ್ದಾಣದಲ್ಲಿ ಇಳಿಯುವ ಪ್ರಯಾಣಿಕರಿಗೆ ತಕ್ಷಣ ಟಿಕೆಟ್ ನೀಡಬೇಕು. ಒಂದೆರಡು ಪ್ರಯಾಣಿಕರಾದರೆ ಗೂಗಲ್ ಪೇ/ ಫೋನ್ ಪೇ ಮೂಲಕ ಪಾವತಿ ಮಾಡಿಸಿಕೊಳ್ಳಬಹುದು. ಜನಸಂದಣಿ ಜಾಸ್ತಿ ಇರುವ ಹೊತ್ತಿನಲ್ಲಿ ಅಷ್ಟು ಸಮಯ ಇರುವುದಿಲ್ಲ. ಅವರು ಪಾವತಿ ಮಾಡಿರುವ ಹಣ ಬಂದಿದೆಯೊ? ಇಲ್ಲವೊ? ಎಂದು ನೋಡುವಷ್ಟರಲ್ಲಿ ನಿಲ್ದಾಣ ಬಂದಿರುತ್ತದೆ' ಎಂದು ಬಿಎಂಟಿಸಿ ಬಸ್ ನಿರ್ವಾಹಕರೊಬ್ಬರು ಸಮಸ್ಯೆ ಹೇಳಿಕೊಂಡರು.

'ವೋಲ್ವೊ, ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ದೂರದ ಮಾರ್ಗಗಳಾಗಿರುವುದರಿಂದ ಅಲ್ಲಿ ಯುಪಿಐ ಪಾವತಿ ಬಾರದೇ ಇದ್ದರೆ ಮತ್ತೆ ಕೇಳುವ ಅವಕಾಶ ಇರುತ್ತದೆ. ಇಲ್ಲಿ ಸಮಯವೂ ಕಡಿಮೆ. ನೂಕುನುಗ್ಗಲಲ್ಲಿ ಖಚಿತ ಪಡಿಸಿಕೊಳ್ಳು ವುದೂ ಕಷ್ಟ. ಅದಕ್ಕಾಗಿ ಸಾಮಾನ್ಯ ಬಸ್‌ಗಳಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ' ಎಂದು ವಿವರಿಸಿದರು.

ಪೂರ್ಣ ಪ್ರಮಾಣದಲ್ಲಿ ಜಾರಿಗೆ ಪ್ರಯತ್ನ: ಕೋವಿಡ್ ಕಾಲದಲ್ಲಿ ಎಲ್ಲ ಬಸ್‌ಗಳಲ್ಲಿ ಯುಪಿಐ ಬಳಕೆಯಾಗುತ್ತಿತ್ತು. ಆನಂತರ ಜನ ಸಂಚಾರ ಹೆಚ್ಚಾದ ಮೇಲೆ ಸಾಮಾನ್ಯ ಬಸ್‌ಗಳಲ್ಲಿ ಪ್ರಾಯೋಗಿಕ ಸಮಸ್ಯೆಯಿಂದ ಪೂರ್ಣ ಪ್ರಮಾಣದಲ್ಲಿ ಯುಪಿಐ ಬಳಕೆಯಾಗುತ್ತಿಲ್ಲ. ನೆಟ್‌ವರ್ಕ್ ಸಮಸ್ಯೆ, ಅಧಿಕ ದಟ್ಟಣೆ, ಸಮಯದ ಕೊರತೆ ಇನ್ನಿತರ ಸಮಸ್ಯೆಗಳು ಇದಕ್ಕೆ ಕಾರಣ. ಎಲ್ಲ ನಿಗಮಗಳಲ್ಲಿ ನಗರ ಮತ್ತು ಸ್ಥಳೀಯ ಸಂಚಾರದ ಬಸ್‌ಗಳಿಗೆ ಮಾತ್ರ ಇಂಥ ಸಮಸ್ಯೆಗಳು ಎದುರಾಗುತ್ತಿವೆ. ಅಂತರ್ ನಗರ ಸಂಚಾರದ ಬಸ್‌ಗಳಲ್ಲಿ ಯುಪಿಐ ಅಳವಡಿಕೆ ಸುಲಭ. ಆದರೂ ಬಿಎಂಟಿಸಿಯಲ್ಲಿ ಪೂರ್ಣಪ್ರಮಾಣದಲ್ಲಿ ಯುಪಿಐ ವ್ಯವಸ್ಥೆ ಜಾರಿಗೆ ತರಲು ಪ್ರಯತ್ನಿಸಲಾಗುವುದು' ಎಂದು ಬಿಎಂಟಿಸಿಯ ಸಂಚಾರ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ಬಿಎಂಟಿಸಿಗೆ ಯುಪಿಐ ಮೂಲಕ ಬಂದ ವರಮಾನ



- ₹36.90 ಲಕ್ಷ — 2021ರ ಮೇ ಯಿಂದ ಡಿಸೆಂಬರ್‌ವರೆಗೆ
- ₹11.45 ಕೋಟಿ — 2022ರ ಜನವರಿಯಿಂದ ಡಿಸೆಂಬರ್‌ವರೆಗೆ
- ₹48.25 ಕೋಟಿ — 2023ರ ಜನವರಿಯಿಂದ ಡಿಸೆಂಬರ್‌ವರೆಗೆ
- ₹50.69 ಕೋಟಿ — 2024ರ ಜನವರಿಯಿಂದ ಜುಲೈವರೆಗೆ

ಅಂಕಿ ಅಂಶ

- 485 ಬಿಎಂಟಿಸಿ ವೋಲ್ವೊ ಬಸ್‌ಗಳು
- 1,191 ಎಲೆಕ್ಟ್ರಿಕ್ ಬಸ್‌ಗಳು
- 4,863 ಸಾಮಾನ್ಯ ಬಸ್‌ಗಳು

ಪ್ರತಿ ತಿಂಗಳು ಹೆಚ್ಚಳವಾಗುತ್ತಿದೆ


ರಾಮಚಂದ್ರನ್ ಆರ್.

ಜನರು ಫೋನ್ ಪೇ, ಗೂಗಲ್ ಪೇ ಸಹಿತ ಯುಪಿಐ ಆಧಾರಿತವಾಗಿ ಪಾವತಿ ಮಾಡುವುದಕ್ಕೆ ಒಗ್ಗಿ ಹೋಗಿದ್ದಾರೆ. ಅಂಗಡಿ, ಹೋಟೆಲ್, ಮಾಲ್ ಸಹಿತ ಎಲ್ಲ ಕಡೆ ಬಳಸುತ್ತಿದ್ದಾರೆ. ನೆಟ್‌ವರ್ಕ್ ಇನ್ನಿತರ ಸಮಸ್ಯೆ ಎದುರಾಗದೇ ಇದ್ದರೆ ಬಸ್‌ಗಳಲ್ಲಿಯೂ ಯುಪಿಐ ಮೂಲಕ ಪಾವತಿ ಮಾಡುತ್ತಾರೆ. ಬಿಎಂಟಿಸಿ ಬಸ್‌ಗಳಲ್ಲಿ ಯುಪಿಐ ಆಧಾರಿತ ಟಿಕೆಟ್ ಹಣ ಸಂಗ್ರಹದಲ್ಲಿ ಪ್ರತಿ ತಿಂಗಳು ಹೆಚ್ಚಳವಾಗುತ್ತಿದೆ. ಸಂಸ್ಥೆಯ ಟಿಕೆಟ್ ಆಧಾರಿತ ಒಟ್ಟು ವರಮಾನದಲ್ಲಿ ಶೇ 10ರಷ್ಟು ಯುಪಿಐ ಮೂಲಕವೇ ಬರುತ್ತಿದೆ. ಈ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲು ಪ್ರೋತ್ಸಾಹಿಸುತ್ತೇವೆ

ರಾಮಚಂದ್ರನ್ ಆರ್., ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ

ಚಿಲ್ಲರೆ ಸಮಸ್ಯೆ ಸರಿಪಡಿಸಿ


ಯೋಗೀಶ್

'₹5, ₹10 ಚಿಲ್ಲರೆ ನೀಡುವುದೇ ಸಮಸ್ಯೆಯಾಗಿದೆ. ಅದಕ್ಕಾಗಿ ಬಸ್ ನಿರ್ವಾಹಕರು, ಪ್ರಯಾಣಿಕರ ಮಧ್ಯೆ ಆಗಾಗ ಜಗಳಗಳಾಗುತ್ತಿವೆ. ಇತ್ತೀಚೆಗೆ ಹೆಬ್ಬಾಳ–ಚಂದ್ರಾಪುರ ಬಸ್‌ನಲ್ಲಿ ₹5 ಚಿಲ್ಲರೆಗೆ ಗಲಾಟೆಯಾಗಿ ನಿರ್ವಾಹಕನನ್ನೇ ಅಧಿಕಾರಿಗಳು ಅಮಾನತು ಮಾಡಿದ್ದರು. ಯುಪಿಐ ವ್ಯವಸ್ಥೆಯನ್ನು ಎಲ್ಲ ಬಸ್‌ಗಳಲ್ಲಿ ಜಾರಿಗೆ ತಂದರೆ ಇಂಥ 'ಚಿಲ್ಲರೆ' ಸಮಸ್ಯೆಗಳಿಗೆ ಮುಕ್ತಿ ದೊರೆಯಲಿದೆ' ಎಂದು ಪ್ರಯಾಣಿಕ ಯೋಗೀಶ್ ಒತ್ತಾಯಿಸಿದರು.

'ನೆಲವಾಸಿಗಳಿಗೆ ಸಿಗದ ಮುಖ್ಯಮಂತ್ರಿ ಪರಿಹಾರ ನಿಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಪರಿಹಾರ ನಿಧಿಗೆ ಕರಾವಳಿ-ಮಲೆನಾಡು ಭಾಗದ ನೆಲವಾಸಿಗಳು ಸಲ್ಲಿಸುವ ಅರ್ಜಿ ತಿರಸ್ಕೃತವಾಗುತ್ತಿವೆ. ಬಡವರಿಗೆ ಸಹಾಯ ಸಿಗುತ್ತಿಲ್ಲ ಎಂದು ಮಲೆನಾಡು-ಕರಾವಳಿ ಜನಪರ ಒಕ್ಕೂಟ ಆರೋಪಿಸಿದೆ.

'ಹಳ್ಳಿಗಾಡು ಪ್ರದೇಶಗಳಲ್ಲಿ ಆರೋಗ್ಯ ಸಮಸ್ಯೆಯಾದಾಗ ಜನರು ಸ್ಥಳೀಯ ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿ ಎರಡು ದಿನಗಳ ಬಳಿಕ ಚಿಕಿತ್ಸೆ ಸಿಗುವುದಿಲ್ಲ. ಬೇರೆ ಆಸ್ಪತ್ರೆಗೆಳಿಗೆ ಹೋಗಿ ಎಂದು ಕಳುಹಿಸುತ್ತಾರೆ. ಅಷ್ಟು ಹೊತ್ತಿಗೆ ಅಲ್ಲಿಯೇ ₹5000ದಿಂದ ₹10,000 ಬಿಲ್ ಆಗಿರುತ್ತದೆ. ಅದು ಆಯುಷ್ಮಾನ್‌ನಂಥ ಯೋಜನೆಗಳಿಂದ ಸ್ವಲ್ಪ ಜಮಾ ಆಗುತ್ತದೆ. ಆನಂತರ ಹೆಚ್ಚಿನ ಚಿಕಿತ್ಸೆಗೆ ನಗರದ ಆಸ್ಪತ್ರೆಗಳಿಗೆ ಹೋದಾಗ ಬಿಲ್ ಲಕ್ಷ ರೂಪಾಯಿ ದಾಟಿರುತ್ತದೆ' ಎಂದು ಮಲೆನಾಡು-ಕರಾವಳಿ ಜನಪರ ಒಕ್ಕೂಟದ ಪ್ರಧಾನ ಸಂಚಾಲಕ ಅನಿಲ್ ಹೊಸಕೊಪ್ಪ ತಿಳಿಸಿದ್ದಾರೆ.

'ಹೇಗೋ ಹಣ ಹೊಂದಿಸಿಕೊಂಡು ಆಸ್ಪತ್ರೆಯ ಬಿಲ್ ಕಟ್ಟಿದ ಬಳಿಕ ಮುಖ್ಯಮಂತ್ರಿ ಪರಿಹಾರ ನಿಧಿಗೆ ಅರ್ಜಿ ನೀಡಿದರೆ ನಿಮಗೆ ಈಗಾಗಲೇ ಆಯುಷ್ಮಾನ್ ಅಥವಾ ಬಿಪಿಎಲ್ ಸೌಲಭ್ಯದಿಂದ ₹5000 ಜಮಾ ಆಗಿದೆ. ಹಾಗಾಗಿ ಮತ್ತೆ ಪರಿಹಾರ ನಿಧಿಯಿಂದ ನೆರವು ಕೊಡಲು ಬರುವುದಿಲ್ಲ ಎಂದು ಅಧಿಕಾರಿಗಳು ಅರ್ಜಿಯನ್ನು ತಿರಸ್ಕರಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವೈದ್ಯಕೀಯ ಪರಿಹಾರ ನಿಧಿಗೆ ಹೇಗೆ ಅರ್ಜಿ ಸಲ್ಲಿಸಬೇಕು ಎಂದು ಅಮಾಯಕರಿಗೆ ಗೊತ್ತಿರುವುದಿಲ್ಲ. ಹಾಗಾಗಿ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ವೈದ್ಯಕೀಯ ವೆಚ್ಚವನ್ನು ಭರಿಸಬೇಕು. ಆಯುಷ್ಮಾನ್ ಅಥವಾ ಬಿಪಿಎಲ್ ಸೌಲಭ್ಯದಿಂದ ಜಮಾ ಆಗಿರುವ ಹಣವನ್ನು ಕಡಿತ ಮಾಡಿ ಉಳಿದ ಮೊತ್ತ ನೀಡಬೇಕು. ಇದರಿಂದ ಬಡವರಿಗೆ ಸಹಾಯವಾಗಲಿದೆ ಎಂದು ಆಗ್ರಹಿಸಿದ್ದಾರೆ.

ಬಸ್ ಪಲ್ಟಿ: 30 ಮಂದಿಗೆ ಗಾಯ

ಶಿರಾ: ರಾಷ್ಟ್ರೀಯ ಹೆದ್ದಾರಿ–48ರ ಹೆಗ್ಗನಹಳ್ಳಿ ಗ್ರಾಮದ ಸಮೀಪ ಸೋಮವಾರ ಮುಂಜಾನೆ ಬಸ್‌ವೊಂದು ಪಲ್ಟಿಯಾಗಿ 30 ಮಂದಿ ಗಾಯಗೊಂಡಿದ್ದಾರೆ.

ಬಳ್ಳಾರಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಬಸ್, ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದು ಅಪಘಡ ಸಂಭಿಸಿದೆ. ಬಸ್‌ನಲ್ಲಿದ್ದ 30 ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಗಾಯಗೊಂಡ ಪ್ರಯಾಣಿಕರಿಗೆ ಶಿರಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಅಪಘಾತದಿಂದ ಹೆದ್ದಾರಿಯಲ್ಲಿ ಕೆಲಕಾಲ ವಾಹನ ದಟ್ಟನೆ ಉಂಟಾಗಿ, ವಾಹನಗಳು ಹೆಚ್ಚಾಗಿ ಸಾಲು ಗಟ್ಟಿ ನಿಂತಿದ್ದವು.

ಕಳ್ಳಂಬೆಳ್ಳ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ವಾಹನ ದಟ್ಟಣೆ ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿ.ಕೆ.ನಾಯ್ಡು ಟ್ರೋಫಿ ಕರ್ನಾಟಕಕ್ಕೆ ಜಯ

ಬೆಂಗಳೂರು: ಆಫ್‌ಸ್ಪಿನ್ ಬೌಲರ್ ಕೆ.ಶಶಿಕುಮಾರ್ (90ಕ್ಕೆ7) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ, ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಪಂದ್ಯದಲ್ಲಿ ಚಂಡೀಗಢ ಕ್ರಿಕೆಟ್ ಸಂಸ್ಥೆ ತಂಡವನ್ನು ಸೋಮವಾರ 127 ರನ್‌ಗಳಿಂದ ಸೋಲಿಸಿತು.

ಚಂಡೀಗಢದ ಮಹಾಜನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕದ 429 ರನ್‌ಗಳಿಗೆ ಉತ್ತರವಾಗಿ 271 ರನ್‌ಗಳಿಗೆ ಆಲೌಟ್ ಆಗಿ ಭಾನುವಾರ ಫಾಲೋಆನ್‌ಗೆ ಒಳಗಾಗಿದ್ದ ಚಂಡೀಗಢ ಎರಡನೇ ಇನಿಂಗ್ಸ್‌ನಲ್ಲಿ 250 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಇನಿಂಗ್ಸ್‌ನಲ್ಲಿ 83 ರನ್ ಗಳಿಸಿದ್ದ ದೀಪೇಂದರ್ ಕುಶ್ ಎರಡನೇ ಇನಿಂಗ್ಸ್‌ನಲ್ಲೂ ಮಿಂಚಿ 53 ರನ್ (111ಎ, 4x7) ಗಳಿಸಿದರು. ಈ ಗೆಲುವಿನೊಡನೆ ಕರ್ನಾಟಕ (58 ಪಾಯಿಂಟ್ಸ್) ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಮಹಾರಾಷ್ಟ್ರ (61) ಅಗ್ರಸ್ಥಾನದಲ್ಲಿದೆ.

ನ. 12 ಯಕ್ಷಗಾನ ದಿನ: ಘೋಷಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಕ್ಷಗಾನ ಕಲೆ ಪ್ರದರ್ಶಿಸುವ ಮೇಳಗಳು ತಿರುಗಾಟಕ್ಕೆ ಹೊರಡುವ ನವೆಂಬರ್ 12ರಂದು ಯಕ್ಷಗಾನ ದಿನವೆಂದು ಸರ್ಕಾರ ಘೋಷಿಸಬೇಕು' ಎಂದು ಅರ್ಥಧಾರಿ, ಸಾಹಿತಿ ಮೋಹನ್ ಭಾಸ್ಕರ್ ಹೆಗಡೆ ಒತ್ತಾಯಿಸಿದರು.

ಯಕ್ಷ ಸಿಂಚನ ಟ್ರಸ್ಟ್‌ನ 15ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಯಕ್ಷಗಾನ ಕಲೆ ಕರಾವಳಿ ಮತ್ತು ಮಲೆನಾಡಿಗೆ ಸೀಮಿತವಾಗದೇ ರಾಜ್ಯದಾದ್ಯಂತಪ್ರದರ್ಶನಗೊಳ್ಳುತ್ತಿದೆ.ಯಕ್ಷಗಾನವನ್ನುಕರ್ನಾಟಕದ ಪ್ರಾತಿನಿಧಿಕ ಕಲೆಯೆಂದು ಘೋಷಿಸಬೇಕು. ಭಾರತದ ನೃತ್ಯ ಪ್ರಕಾರಗಳಲ್ಲಿ ವೈವಿಧ್ಯತೆಯನ್ನು ಹೊಂದಿರುವ ಯಕ್ಷಗಾನವನ್ನು ಗುರುತಿಸಬೇಕು. ಇದಕ್ಕಾಗಿ ಸಾಂಸ್ಕೃತಿಕ ಆಂದೋಲನ ರೂಪುಗೊಳ್ಳುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಇದೇ ಸಂದರ್ಭದಲ್ಲಿ ಯಕ್ಷಗುರು ಹಾಗೂ ಭಾಗವತರಾದ ಉಮೇಶ್ ಭಟ್ ಬಾಡ ಅವರಿಗೆ 2024ನೇ ಸಾಲಿನ 'ಸಾಧಕ ಪ್ರಶಸ್ತಿ' ಯನ್ನು ಪ್ರದಾನ ಮಾಡಲಾಯಿತು. ಬೆಂಗಳೂರಿನ ಯಕ್ಷಕಲಾ ಅಕಾಡೆಮಿ ಬಾಲಕಲಾವಿದರು 'ಸುಭದ್ರಾ ಕಲ್ಯಾಣ' ಪ್ರಸಂಗವನ್ನು ಪ್ರಸ್ತುತಪಡಿಸಿದರು. ಯಕ್ಷಸಿಂಚನ ತಂಡದ ಕಲಾವಿದರು 'ಮಾನಿಷಾದ' ಎಂಬ ಯಕ್ಷಗಾನವನ್ನು ಪ್ರದರ್ಶನ ನೀಡಿದರು.


'ಯಕ್ಷಸಿಂಚನ ಟ್ರಸ್ಟ್' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯಕ್ಷಗುರು ಉಮೇಶ್ ಭಟ್ ಬಾಡ ಅವರಿಗೆ 'ಸಾರ್ಥಕ ಸಾಧಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಟ್ರಸ್ಟ್‌ನ ಸದಸ್ಯ ಗುರುರಾಜ ಭಟ್, ಹಿಮ್ಮೇಳ ಕಲಾವಿದ ಎ.ಪಿ. ಪಾಠಕ್, ಸಾಹಿತಿ ಮೋಹನ್ ಹೆಗಡೆ ಮತ್ತು ಯಕ್ಷಗುರು ಕೆ. ಕೃಷ್ಣಮೂರ್ತಿ ತುಂಗ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಗ್ಯಾರಂಟಿ ಭಾರದಿಂದ ಬಿಪಿಎಲ್ ಕಾರ್ಡ್ ರದ್ದು: ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೆ ಫಲಾನುಭವಿಗಳನ್ನೇ ಕಡಿಮೆ ಮಾಡಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಹೊರಟಿದೆ. ಇದರ ಭಾಗವಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ ಎಂದು ಎಎಪಿ ಆರೋಪಿಸಿದೆ.



'ಸುಮಾರು 11 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲು ಸರ್ಕಾರ ಮುಂದಾಗಿದೆ. ಯಾವುದೇ ಪರಿಶೀಲನೆ ನಡೆಸದೆ ಅವೈಜ್ಞಾನಿಕವಾಗಿ ಬಿಪಿಎಲ್ ಕಾರ್ಡ್ ರದ್ದು ಮಾಡಿದರೆ ಬಡವರು, ರೈತರು, ವಿಧವೆಯರು ಸೇರಿದಂತೆ ಅಶಕ್ತರು ತೊಂದರೆಗೆ ಒಳಗಾಗುತ್ತಾರೆ' ಎಂದು ಆಮ್ ಆದ್ಮಿ ಪಕ್ಷದ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ತಿಳಿಸಿದರು.

ಗ್ಯಾರಂಟಿ ಯೋಜನೆ ಜಾರಿಗೆ ವರ್ಷಕ್ಕೆ ₹54 ಸಾವಿರ ಕೋಟಿ ಖರ್ಚಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಇಷ್ಟೊಂದು ಹಣ ಹೊಂದಿಸಲು ಸಾಧ್ಯವಾಗದೆ ಸರ್ಕಾರವು ಬಿಪಿಎಲ್ ಕಾರ್ಡ್ ಸಂಖ್ಯೆ ಕಡಿಮೆ ಮಾಡಲು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ ಎಂದು ಆರೋಪಿಸಿದರು.

'ಯಾವುದೇ ಅಧಿಕಾರಿಗಳು ಮನೆಗಳಿಗೆ ಹೋಗಿ ಪರಿಶೀಲನೆ ಮಾಡಿಲ್ಲ. ಕೂತಲ್ಲೇ ಸಿಕ್ಕ ಸಿಕ್ಕ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುತ್ತಿದ್ದಾರೆ. ದುಡ್ಡು ಕೊಟ್ಟವರಿಗೆ ರೇಷನ್ ಕಾರ್ಡ್ ಮಾಡಿಕೊಡಲಾಗಿದೆ' ಎಂದು ದೂರಿದರು.

'ಅರ್ಹರ ಬಿಪಿಎಲ್ ಕಾರ್ಡ್‌ಗಳು ರದ್ದಾಗದು'

ಚಿಂತಾಮಣಿ: ಸರ್ಕಾರವು ಅರ್ಹರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುತ್ತಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ. ಸಿ ಸುಧಾಕರ್ ಅವರು ತಿಳಿಸಿದರು.

'ಕೆಲವು ಕುಟುಂಬಗಳಲ್ಲಿ ಹಿಂದೆ ಬಿಪಿಎಲ್ ಕಾರ್ಡ್ ಹೊಂದಿದ್ದವರು ಉತ್ತಮ ಆದಾಯ ಗಳಿಸುವ ಉದ್ಯೋಗಗಳಿಗೆ ಸೇರಿ ಆದಾಯ ತೆರಿಗೆ ಪಾವತಿಸುತ್ತಿದ್ದಾರೆ. ಅಂಥವರ ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್‌ಗೆ ಬದಲಿಸಲಾಗುತ್ತದೆ. ಇದೊಂದು ಸಹಜ ಪ್ರಕ್ರಿಯೆ. ಯಾವುದೇ ಸರ್ಕಾರ ಇದ್ದರೂ, ಇದನ್ನೇ ಮಾಡಬೇಕಾಗುತ್ತದೆ. ಕೆಲವು ಪ್ರಕರಣಗಳಲ್ಲಿ ತೊಂದರೆ ಆಗಿರುವ ವಿಷಯವೂ ಸರ್ಕಾರ ಮಟ್ಟದಲ್ಲಿ ಚರ್ಚೆ ಆಗಿದೆ. ಅದನ್ನು ಸರಿಪಡಿಸುತ್ತೇವೆ' ಎಂದರು.

ಅನುಮಾನಾಸ್ಪದವಾಗಿ ಗೃಹಿಣಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗೃಹಿಣಿಯೊಬ್ಬರುಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶ ಮೂಲದ ದೀಪಾ (36) ಮೃತಪಟ್ಟವರು. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಪತಿ ಸುರೇಶ್ ಅವರೊಂದಿಗೆ ವಾಸಿಸುತ್ತಿದ್ದರು.

‘ದೀಪಾ ಅವರು ಗೃಹಿಣಿ. ಇವರ ಪತಿ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ನಾನಾ ಕಾರಣಕ್ಕೆ ಸುರೇಶ್ ಅವರು ಬ್ಯಾಂಕ್ ಹಾಗೂ ಖಾಸಗಿಯವರಿಂದ ದೊಡ್ಡ ಮೊತ್ತದ ಸಾಲ ಪಡೆದಿದ್ದರು ಎನ್ನಲಾಗಿದೆ. ಆರ್ಥಿಕ ಸಮಸ್ಯೆಯಿಂದ ಅವರಿಗೆ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಇದೇ ವಿಚಾರಕ್ಕೆ ದಂಪತಿ ಮಧ್ಯೆ ಜಗಳ ನಡೆಯುತ್ತಿತ್ತು’ ಎಂದು ಪೊಲೀಸರು ಹೇಳಿದರು.

‘ಸೋಮವಾರ ಮಧ್ಯಾಹ್ನವೂ ದಂಪತಿ ಮಧ್ಯೆ ಜೋರು ಗಲಾಟೆ ನಡೆದಿತ್ತು. ಅದಾದ ಕೆಲವೇ ಕ್ಷಣಗಳಲ್ಲಿ ಗೃಹಿಣಿ ಮೃತದೇಹ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂಬುದಾಗಿ ಕಂಡು ಬಂದಿದೆ. ತನಿಖೆ ಬಳಿಕ ಗೃಹಿಣಿಯ ಸಾವಿಗೆ ಕಾರಣ ಗೊತ್ತಾಗಲಿದೆ’ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹31 ಲಕ್ಷ ಮೌಲ್ಯದ ಚಿನ್ನ ಕದ್ದ ಹೋಮ್ ನರ್ಸ್

ಉಡುಪಿ: ಹೋಮ್ ನರ್ಸ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ವ್ಯಕ್ತಿಯೊಬ್ಬರು ₹31 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಿ ಪರಾರಿಯಾಗಿರುವ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಡಗುಬೆಟ್ಟುವಿನ ಪ್ರಸಾದ್ ಎಂಬುವವರು ತಂದೆಯನ್ನು ಆರೈಕೆ ಮಾಡಲು 15 ದಿನಗಳ ಹಿಂದೆ ಪರ್ಕಳದ ದೀಕ್ಷಾ ಹೋಮ್ ಹೆಲ್ತ್‌ಕೇರ್ ಮೂಲಕ ನೇಮಿಸಿದ್ದ ಸಿದ್ದಪ್ಪ ಕೆ. ಕೊಡ್ಲಿ ಎಂಬವರು ಕಳವು ಮಾಡಿದ್ದಾಗಿ ದೂರಿನಲ್ಲಿ ತಿಳಿಸಲಾಗಿದೆ.

ಮಾದಕ ವಸ್ತು ಕಳ್ಳಸಾಗಣೆಯಲ್ಲಿ ಭಾಗಿಯಾದ ಆರೋಪವಿದೆ ಎಂದ ಸೈಬರ್ ಕಳ್ಳರು

ಟೆಕಿಗೆ ಬೆದರಿಸಿ ₹40 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿದೇಶಕ್ಕೆ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡುತ್ತಿರುವುದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಭಾಗಿಯಾದ ಆರೋಪವಿದೆ ಎಂದು ಟೆಕಿಯನ್ನು ಬೆದರಿಸಿ, ₹40 ಲಕ್ಷವನ್ನು ಸೈಬರ್ ಕಳ್ಳರು ಸುಲಿಗೆ ಮಾಡಿದ್ದಾರೆ. ಈ ಸಂಬಂಧ ಪಶ್ಚಿಮ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್.ಆರ್.ನಗರದ ನಿವಾಸಿ ಪ್ರಕೃತಿ ದೂರು ನೀಡಿದ್ದಾರೆ. ದೂರು ಆಧರಿಸಿ, ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ನವೆಂಬರ್ 7ರಂದು ದೂರುದಾರ ಯುವತಿಗೆ ಕರೆ ಮಾಡಿದ್ದ ವಂಚಕನೊಬ್ಬ, ಡಿಎಚ್‌ಎಲ್ ಕೊರಿಯರ್ ಕಂಪನಿಯೊಂದರ ಪ್ರತಿನಿಧಿ ಎಂದು ಪರಿಚಯ ಮಾಡಿಕೊಂಡಿದ್ದ. ಬಳಿಕ, ನಿಮ್ಮ ಹೆಸರಿನಲ್ಲಿ ಮುಂಬೈನಿಂದ ಇರಾನ್‌ಗೆ ಕಳುಹಿಸಿರುವ ಪಾರ್ಸೆಲ್‌ನಲ್ಲಿ ಎಂಡಿಎಂಎ ಸೇರಿದಂತೆ ಮಾದಕ ಪದಾರ್ಥಗಳು ಇವೆ. ನಿಮ್ಮ ವೈಯಕ್ತಿಕ ದಾಖಲಾತಿಗಳು ಮತ್ತು ಮೊಬೈಲ್ ನಂಬರ್ ಕೊರಿಯರ್‌ಗೆ ಲಿಂಕ್ ಆಗಿದೆ ಎಂದು ಬೆದರಿಸಿದ್ದ. ಅಲ್ಲದೇ ಕಸ್ಟಮ್ಸ್ ಅಧಿಕಾರಿಗಳಿಗೆ ಕರೆ ವರ್ಗಾವಣೆ ಮಾಡುತ್ತೇನೆ ಎಂದು ಹೇಳಿದ್ದ. ಪ್ರಕರಣದ ತನಿಖೆ ನಡೆಸಿ, ಆರೋಪದಿಂದ ತಮ್ಮನ್ನು ಮುಕ್ತಗೊಳಿಸುತ್ತೇನೆಂದು ನಂಬಿಸಿದ್ದ’ ಎಂದು ಪೊಲೀಸರು ಹೇಳಿದರು.

‘ನಂತರ, ದೂರುದಾರರ ವೈಯಕ್ತಿಕ ದಾಖಲೆಗಳು, ಕುಟುಂಬ ಸದಸ್ಯರ ವಿವರ, ಬ್ಯಾಂಕ್ ಖಾತೆಯ ವಿವರ ಪಡೆದುಕೊಂಡಿದ್ದ. ಆರೋಪಿಗಳ ಮಾತು ನಿಜವೆಂದು ನಂಬಿದ್ದ ಯುವತಿ ತನ್ನ ಮೂರು ವಿವಿಧ ಬ್ಯಾಂಕ್ ಖಾತೆಗಳಿಂದ ಒಟ್ಟು ₹40.18 ಲಕ್ಷವನ್ನು ವಂಚಕರು ಹೇಳಿದ್ದ ಖಾತೆಗಳಿಗೆ ವರ್ಗಾಯಿಸಿದ್ದರು. ನಂತರ, ವಂಚನೆ ನಡೆದಿರುವುದು ಗೊತ್ತಾಗಿ, ಟೆಕಿ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಮದ್ಯಪಾನ ಮಾಡಿ ವಾಹನ ಚಾಲನೆ: 551 ಪ್ರಕರಣ ದಾಖಲು

ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದವರ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ವಿಭಾಗದ ಪೊಲೀಸರು, ನಿಯಮ ಉಲ್ಲಂಘಿಸಿದ 551 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ನ.11ರಿಂದ 17ರ ವರೆಗೆ ವಾಹನ ಚಾಲಕರು ಹಾಗೂ ಬೈಕ್ ಸವಾರರ ವಿರುದ್ಧ 50 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಒಟ್ಟು 43,751 ವಿವಿಧ ಮಾದರಿಯ ವಾಹನಗಳನ್ನು ತಪಾಸಣೆ ನಡೆಸಲಾಯಿತು ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದ 176 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ₹1.76 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಅಪಘಾತ ಪ್ರಕರಣ ಮಿನಿಬಸ್ ಚಾಲಕನಿಗೆ ಜೈಲು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತ ಪ್ರಕರಣದಲ್ಲಿ ಮಿನಿ ಬಸ್ ಚಾಲಕ ಸುನಿಲ್‌ಕುಮಾರ್(37) ಎಂಬಾತನಿಗೆ ನ್ಯಾಯಾಲಯ ಒಂದು ವರ್ಷ ಮೂರು ತಿಂಗಳು ಜೈಲು ಶಿಕ್ಷೆ ಹಾಗೂ ₹9 ಸಾವಿರ ದಂಡ ವಿಧಿಸಿ, ಆದೇಶಿಸಿದೆ.

ಅಪರಾಧಿ ದಂಡದ ಮೊತ್ತ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿಯಾಗಿ ಎರಡು ತಿಂಗಳು, 10 ದಿನ ಸಾದಾ ಸಜೆ ಅನುಭವಿಸಬೇಕು ಎಂದು ನ್ಯಾಯಾಧೀಶರು ಆದೇಶಿಸಿದ್ದಾರೆ

ಅತಿವೇಗದಿಂದ ಅಪಘಾತ: 2021ರ ಸೆಪ್ಟೆಂಬರ್ 14ರಂದು ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವರ್ತೂರಿನ ಗುಂಜೂರು ಮುಖ್ಯ ರಸ್ತೆಯಲ್ಲಿ ಮಿನಿ ಬಸ್ ಹಾಗೂ ಸ್ಕೂಟರ್ ಮಧ್ಯೆ ಅಪಘಾತ ಸಂಭವಿಸಿತ್ತು.

ಅಪರಾಧ ಸುದ್ದಿ

ಮಿನಿ ಬಸ್ ಚಾಲಕ, ಅತಿವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಸ್ಕೂಟರ್‌ಗೆ ಡಿಕ್ಕಿ ಹೊಡೆಸಿದ್ದ. ಸ್ಕೂಟರ್ ಸವಾರ ಎಂ.ಕಲ್ಯಾಣ್ ಕುಮಾರ್(25) ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಕೋಮಾ ಸ್ಥಿತಿಯಿಂದ ಹೊರಕ್ಕೆ ಬಂದಿರಲಿಲ್ಲ. ಕಲ್ಯಾಣ್ ಕುಮಾರ್ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿ ಮನೆಗೆ ಕರೆದೊಯ್ಯಲಾಗಿತ್ತು. ಮನೆಯಲ್ಲಿ ಆರೋಗ್ಯ ಏರುಪೇರಾಗಿದ್ದರಿಂದ ಮತ್ತೆ ಚಿಕಿತ್ಸೆಗೆ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು.

2021ರ ಡಿಸೆಂಬರ್ 10ರಂದು ಸ್ಕೂಟರ್ ಸವಾರ ಮೃತಪಟ್ಟಿದ್ದರು ಎಂದು ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಪತ್ತೆಗೆ 200 ಕ್ಯಾಮೆರಾಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಗಳರಪಾಳ್ಯ ಮುಖ್ಯ ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಕಾರು ನಿಲುಗಡೆ ಮಾಡದೇ ಪರಾರಿಯಾಗಿದ್ದ ಚಾಲಕ, ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನಿವಾಸಿ ಕಾಜಾ ಮೊಹಿದ್ದೀನ್ ಎಂಬಾತನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನ.13ರಂದು ಮಧ್ಯರಾತ್ರಿ 2ರ ಸುಮಾರಿಗೆ ಕೆಂಪೇಗೌಡ ವೃತ್ತದಲ್ಲಿ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಶಶಿಕುಮಾರ್(20) ಅವರು ಮೃತಪಟ್ಟಿದ್ದರು.



ಕಾಜಾ ಮೊಹಿದ್ದೀನ್

ಬಾಗೇಪಲ್ಲಿಯ ಶಶಿಕುಮಾರ್ ಅವರು ಪೀಣ್ಯದ ಕಾರ್ಖಾನೆಯೊಂದರಲ್ಲಿ ಫ್ಯಾಬ್ರಿಕೇಷನ್ ಕೆಲಸ ಮಾಡುತ್ತಿದ್ದರು. ಅಂದು ರಾತ್ರಿ ಪಾಳಿ ಕೆಲಸ ಮುಗಿಸಿದ್ದ ಶಶಿಕುಮಾರ್ ಮಧ್ಯರಾತ್ರಿ ಸ್ಕೂಟರ್‌ನಲ್ಲಿ ವೇಗವಾಗಿ ಬರುವಾಗ ಎದುರಿನಿಂದ ಬಂದ ಕಾರು ನೋಡಿ ಗಾಬರಿಗೊಂಡು ಆಯತಪ್ಪಿ ಬಿದ್ದಿದ್ದರು. ಆಗ ಶಶಿಕುಮಾರ್ ಮೇಲೆ ಕಾರು ಹರಿಸಿದ್ದ ಚಾಲಕ ಮೊಹಿದ್ದೀನ್ ಸ್ಥಳದಿಂದ ಪರಾರಿ ಆಗಿದ್ದ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಚನ್ನರಾಯಪಟ್ಟಣದಲ್ಲಿ ವಶ: ಅಪಘಾತದ ಬಳಿಕ ಕಾರು ಚಾಲಕ ಚನ್ನರಾಯಪಟ್ಟಣಕ್ಕೆ ತೆರಳಿದ್ದ. ಮಾಹಿತಿ ಕಲೆಹಾಕಿದ ಸಂಚಾರ ವಿಭಾಗದ ಪೊಲೀಸರು, ಚನ್ನರಾಯಪಟ್ಟಣಕ್ಕೆ ತೆರಳಿ ಅಲ್ಲಿ ವಶಕ್ಕೆ ಪಡೆದುಕೊಂಡು ಬಂಧಿಸಿದರು.

‘ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದಾಗ ಕಾರಿನ ನೋಂದಣಿ ಸಂಖ್ಯೆ ಪತ್ತೆ ಆಗಿರಲಿಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯಲ್ಲೂ ಅದು ಸೆರೆ ಆಗಿರಲಿಲ್ಲ. ಕಾರಿನ ಹಿಂಬದಿಯಲ್ಲಿ ಸ್ಟಿಕರ್‌ವೊಂದನ್ನು ಅಂಟಿಸಲಾಗಿತ್ತು. ಕಾರಿನ ಒಂದು ಬಾಗಿಲಿಗೆ ಮಾತ್ರ ಸೇಫ್ಟಿ ಗಾರ್ಡ್ ಇರುವುದು ಪತ್ತೆಯಾಗಿತ್ತು. ನಂತರ, ಕಾರಿನ ಬಲಭಾಗದ ಮುಂದಿನ ಚಕ್ರಕ್ಕೆ ಮಾತ್ರ ವ್ಹೀಲ್ ಕ್ಯಾಪ್ ಇತ್ತು. ಹಿಂಬದಿ ಚಕ್ರಕ್ಕೆ ವ್ಹೀಲ್ ಕ್ಯಾಪ್ ಇರಲಿಲ್ಲ. ಕಾರಿನ ಗ್ಲಾಸಿನ ಮೇಲೆ ಸನ್‌ಗಾರ್ಡ್ ಇತ್ತು. ಇದು ಕೆಲವು ಸಿ.ಸಿ.ಟಿ.ವಿ ದೃಶ್ಯಾವಳಿಗಳಲ್ಲಿ ಸೆರೆಯಾಗಿತ್ತು. ಈ ಸುಳಿವುಗಳನ್ನು ಆಧರಿಸಿ ಕಾರನ್ನು ಪತ್ತೆ ಹಚ್ಚಲಾಯಿತು’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಘಟನೆ ನಡೆದಿದ್ದ ಸ್ಥಳದಿಂದ ಪಾರ್ಲೆಜೀ ಟೋಲ್ ವರೆಗೆ 200ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಯಿತು. ಮಂಜುನಾಥ್ ಅವರಿಗೆ ಸೇರಿದ ಕಾರನ್ನು ಮೊಹಿದ್ದೀನ್ ಓಡಿಸುತ್ತಿದ್ದ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ನಾವು ಯಾರ ಅನ್ನವನ್ನೂ ಕಸಿಯುತ್ತಿಲ್ಲ: ಡಿಕೆಶಿ

ಬೆಂಗಳೂರು: ‘ನಾವು ಯಾರ ಅನ್ನವನ್ನೂ ಕಸಿಯುತ್ತಿಲ್ಲ. ಬಿಜೆಪಿಗೆ ರಾಜಕೀಯ ಮಾಡುವುದು ಬಿಟ್ಟು ಬೇರೇನು ಕೆಲಸ? ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಬಿಪಿಎಲ್ ಕಾರ್ಡ್ ಪರಿಷ್ಕರಣೆ ಮೂಲಕ ಸರ್ಕಾರ ಬಡವರ ಅನ್ನ ಕಸಿಯುತ್ತಿದೆ’ ಎಂಬ ಟೀಕೆ ಬಗ್ಗೆ ಕೇಳಿದಾಗ, ‘ಬಿಜೆಪಿಯವರಿಗೆ ಬೇರೇನು ಕೆಲಸವಿದೆ. ನಮ್ಮ ಕ್ಷೇತ್ರದಲ್ಲಿ ಶೇ 90ರಷ್ಟು, ಹೊಳೆನರಸೀಪುರದಲ್ಲಿ ಶೇ 92 ಬಿಪಿಎಲ್ ಕಾರ್ಡುದಾರರಿದ್ದಾರೆ. ಅವುಗಳನ್ನು ಪರಿಶೀಲನೆ ಮಾಡಬೇಕಲ್ಲವೇ’ ಎಂದರು.

‘ನಿಜವಾದ ಅರ್ಹರಿಗೆ ಬಿಪಿಎಲ್ ಕಾರ್ಡ್ ಸಿಕ್ಕಿದೆಯೇ ಇಲ್ಲವೇ ಎಂದು ನೋಡಬೇಕಾಗಿದೆ. ಕೆಲವು ಮಾನದಂಡಗಳ ಆಧಾರದ ಮೇಲೆ ಕೆಲವು ಬಿಪಿಎಲ್ ಕಾರ್ಡುಗಳು ರದ್ದಾಗಿವೆ’ ಎಂದರು.

ಮಧುಮೇಹ ಜಾಗೃತಿಗೆ ಓಟ



ಬೆಂಗಳೂರು: ಮಧುಮೇಹದ ಬಗ್ಗೆ ಜಾಗೃತಿ ಮೂಡಿಸಲು ವಿಜಯನಗರದಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಜಾಗೃತಿ ಓಟ ನಡೆಯಿತು.

ಬಿಜಿಎಸ್ ಮೈದಾನದಲ್ಲಿ ಜಾಗೃತಿ ಓಟಕ್ಕೆ ಲಯನ್ಸ್ ಗವರ್ನರ್ ಎನ್. ಮೋಹನ್ ಕುಮಾರ್ ಚಾಲನೆ ನೀಡಿ ಮಾತನಾಡಿ, ‘ಇತ್ತೀಚಿನ ದಿನಗಳಲ್ಲಿ ವಯಸ್ಕರಲ್ಲಿ ಮಾತ್ರವಲ್ಲ, ಚಿಕ್ಕ ವಯಸ್ಸಿನವರಲ್ಲಿಯೂ ಮಧುಮೇಹ ಸಾಮಾನ್ಯವಾಗಿಬಿಟ್ಟಿದೆ. ಜಡ ಜೀವನಶೈಲಿ, ಅನಾರೋಗ್ಯಕರ ಆಹಾರ ಪದ್ಧತಿ, ನಿದ್ರೆಯ ಕೊರತೆ, ಒತ್ತಡ ಮುಖ್ಯ ಕಾರಣಗಳಾಗಿವೆ. ಜೊತೆಗೆ ಮಧುಮೇಹ ನಿಯಂತ್ರಣ ಮಾಡುವ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳದಿರುವುದು ಕೂಡ ಕಾರಣ’ ಎಂದು ಹೇಳಿದರು.

‘ಯುವ ಪೀಳಿಗೆ ಮಧುಮೇಹಕ್ಕೆ ತುತ್ತಾಗದಂತೆ ಕಾಪಾಡಿಕೊಳ್ಳಬೇಕಾಗಿದೆ. ಯುವಜನರಲ್ಲಿ ಮಧುಮೇಹದ ಬಗ್ಗೆ ಜಾಗೃತಿ ಮೂಡಿಸಬೇಕಿದೆ’ ಎಂದು ತಿಳಿಸಿದರು.

ಓಟದಲ್ಲಿ ಯುವಕರು, ವೃದ್ಧರು, ಮಹಿಳೆಯರು, ಲಯನ್ಸ್ ಕ್ಲಬ್ ಸದಸ್ಯರು ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ಪದಾಧಿಕಾರಿಗಳಾದ ವೈದ್ಯ ಡಾ. ಕೃಷ್ಣೇಗೌಡ ಎನ್., ಕೆ. ದೇವೇಗೌಡ, ಜಿ. ಮೋಹನ್, ಕೆ. ಈಶ್ವರನ್, ಮನೋಜ್ ಕುಮಾರ್, ಅಶೋಕ್ ಕುಮಾರ್ ಕುಲಕರ್ಣಿ ಪಾಲ್ಗೊಂಡಿದ್ದರು.

ಚಿತ್ರಾವಳಿ







1. 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಆಯೋಜಿಸಿದ್ದ ಉಚಿತ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಶಾಸಕ ರವಿಸುಬ್ರಮಣ್ಯ, ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್. ವೆಂಕಟೇಶ್, ಬಿಬಿಎಂಪಿ ಮಾಜಿ ಸದಸ್ಯ ಸಂಗಾತಿ ವೆಂಕಟೇಶ, ಸಂಪ್ರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಜಗದೀಶ ಉಪಸ್ಥಿತರಿದ್ದರು
2. ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ಸಭಾಂಗಣದಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವಾಧ್ಯಕ್ಷ ಗುರುನಾಥ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣೂರ,, ವೀರಶೈವ ಮುಖಂಡ ಎಂ.ಎಚ್. ಪಾಟೀಲ್, ಪದಾಧಿಕಾರಿಗಳಾದ ಶರಣಬಸವ ಭಗವತಿ, ಗಿರೀಶ್ ಗಲಿಗಲಿ, ತಿರುಪತಿ ಐಕೂರು, ಲಲಿತಾ ನೀಲಕಂಠ, ಪುಷ್ಪಲತಾ, ಲಕ್ಷ್ಮಿ ಭಾಗವಹಿಸಿದ್ದರು.
3. ಲಗ್ಗೆರೆ ರಸ್ತೆಯ ಸುರಾನಾ ಕಾಲೇಜಿನಲ್ಲಿ ರೋಟರಾಕ್ಟ್ ಜಿಲ್ಲೆ 3192 ಮತ್ತು ರೋಟರಾಕ್ಟ್ ಕ್ಲಬ್ ಆಫ್ ಬೆಂಗಳೂರು ನಾಗಸಂದ್ರ ಆಯೋಜಿಸಿದ್ದ ಕರುನಾಡ ಉತ್ಸವ ಕಾರ್ಯಕ್ರಮದಲ್ಲಿ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಯಿತು. ವೇದಿಕೆಯಲ್ಲಿ ನೃತ್ಯ, ಗಾಯನ ಜರುಗಿತು. ಕ್ಲಬ್‌ನ ಡಿಆರ್‌ಆರ್ ಸೂರ್ಯಕಿರಣ್, ನಾಗಸಂದ್ರ ಕ್ಲಬ್ ಅಧ್ಯಕ್ಷ ರಂಜೀತ್ ದಯಾನಂದ್, ಸಾಹಿತಿಗಳಾದ ಚಿಕ್ಕಹೆಜ್ಜಾಜಿ ಮಹದೇವ್, ಶೇಖರ್ ಗಣಗಲೂರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಇಂದು

‘ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ–2024’: ಅತಿಥಿಗಳು: ಡಾ.ನಾ. ಸೋಮೇಶ್ವರ, ಬಿ.ಸಿ. ಪ್ರಭಾಕರ್, ಎಸ್.ಎನ್. ಮೂರ್ತಿ, ಮಂಜುನಾಥ ಗಂಗಾಧರ, ಕೆ. ಶ್ರೀನಿವಾಸ್, ಪ್ರಾಸ್ತಾವಿಕ ನುಡಿ: ರಮೇಶ ಎಂ.ಎಚ್., ಆಯೋಜನೆ: ನಿರಾತಂಕ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ಶಾಂತಲಾನಗರ, ಅಶೋಕನಗರ, ಬೆಳಿಗ್ಗೆ 9ರಿಂದ

‘ಬಾರ್ಡರ್‌ಲೆಸ್ ಬಿಸಿನೆಸ್ ಆಪರ್ಚುನಿಟೀಸ್’ ಅಂತರರಾಷ್ಟ್ರೀಯ ವಿಚಾರಸಂಕಿರಣ, ಸ್ಟಾರ್ ಅವಾರ್ಡ್ಸ್ ಪ್ರದಾನ: ಉದ್ಘಾಟನೆ: ಶರಣಬಸಪ್ಪ ದರ್ಶನಾಪುರ, ಅತಿಥಿಗಳು: ರಜನೀಶ್, ಕ್ಯಾರಿ ಅರುಣ್, ಸಾರಾ ಗಿಡಿಯಾನ್, ಆಯೋಜನೆ: ಉಬುಂಟು, ಸ್ಥಳ: ತಾಜ್ ವಿವಾಂತ, ಯಶವಂತಪುರ, ಬೆಳಿಗ್ಗೆ 9.30ರಿಂದ

ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರ ಜನ್ಮದಿನಾಚರಣೆ: ಆಯೋಜನೆ: ಕೆಪಿಸಿಸಿ, ಸ್ಥಳ: ಭಾರತ ಜೋಡೊ ಸಭಾಂಗಣ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 9.30

ಶಾಲಾ ಮಕ್ಕಳ ರಂಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭ: ಸಮಾರೋಪ ಭಾಷಣ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ತಾರಾನಾಥ್ ಎಚ್.ಆರ್., ವಿನೋದ ನರಸಿಂಹಮೂರ್ತಿ, ಎಸ್. ಮಹಾದೇವಯ್ಯ, ‘ಕಾರಣಿಕ ಶಿಶು’ ನಾಟಕ ಪ್ರದರ್ಶನ: ರಚನೆ: ಸಿ. ಲಕ್ಷ್ಮಣ್, ನಿರ್ದೇಶನ: ಸೂರ್ಯಕುಮಾರಿ, ಸಂಗೀತ: ಮಲ್ಲಿಕಾರ್ಜುನ್ ಗೌಡ, ರಂಗ ಸಜ್ಜಿಕೆ: ವಿಕಾಸ್ ಬಿ.ಎಸ್., ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಅಲ್ಲಮ ಕಲಾಶಾಲೆ, ಕನ್ನಲ್ಲಿ, ಕೊಡಿಗೇಹಳ್ಳಿ ಅಂಚೆ, ಬೆಂಗಳೂರು ಉತ್ತರ ವಲಯ–1, ಬೆಳಿಗ್ಗೆ 10.30

ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು: ಭಜನೆ: ಲಕ್ಷ್ಮಿ ವೆಂಕಟೇಶ್ವರ ಭಜನಾ ಮಂಡಳಿ, ಗೀತಗಾಯನ: ಶ್ರೀನಿವಾಸ್ ಕೆಮ್ಮೂರ್ ತಂಡ, ‘ವಿಷ ಜ್ವಾಲೆ’ ನಾಟಕ ಪ್ರದರ್ಶನ, ಆಯೋಜನೆ: ಅನ್ವೇಷಣೆ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.45ರಿಂದ

ಅತಿವೇಗದ ನಿಯಂತ್ರಣಕ್ಕಾಗಿ ಸಮೂಹ ಮಾಧ್ಯಮ ಅಭಿಯಾನಕ್ಕೆ ಚಾಲನೆ: ರಾಮಲಿಂಗಾರೆಡ್ಡಿ, ಉಪಸ್ಥಿತಿ: ಎನ್.ವಿ. ಪ್ರಸಾದ್, ಕೆ.ವಿ. ಶರತ್‌ಚಂದ್ರ, ಯೋಗೀಶ್ ಎ.ಎಂ., ಎಂ.ಎನ್. ಅನುಚೇತ್, ಜೆ. ಪುರುಷೋತ್ತಮ್, ಸ್ಥಳ: ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ಶಾಂತಿನಗರ, ಬೆಳಿಗ್ಗೆ 11

‘ಜನ ಸಮೂಹದ ಮೇಲೆ ಪುಸ್ತಕಗಳ ಪ್ರಭಾವ–ಸಂವಾದ’: ಭಾಷಣಕಾರರು: ಕೆ.ಎ. ದಯಾನಂದ, ಕೆ.ಎಂ. ವಸುಂಧರಾ, ಅಜಯ್ ಕುಮಾರ್ ಸಿಂಗ್, ಶಶಿಕಲಾ ಎಚ್., ಅಧ್ಯಕ್ಷತೆ: ಬಿ.ಆರ್. ಜಯರಾಮರಾಜೇ ಅರಸ್, ಆಯೋಜನೆ ಮತ್ತು ಸ್ಥಳ: ಸಾಹಿತ್ಯ ಅಕಾಡೆಮಿ, ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 11

ರಾಜ್ಯೋತ್ಸವ ಹಾಗೂ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮ: ಉದ್ಘಾಟನೆ: ಕೆ.ವಿ. ಪ್ರಭಾಕರ್, ಅಭಿನಂದಿಸುವವರು: ಶಿವರಾಜ ತಂಗಡಗಿ, ಪ್ರಾಸ್ತಾವಿಕ ನುಡಿ: ಶಿವಾನಂದ ತಗಡೂರು, ಅಧ್ಯಕ್ಷತೆ: ಆರ್. ಶ್ರೀಧರ, ಅಭಿನಂದಿತರು: ಸನತ್ ಕುಮಾರ್ ಬೆಳಗಲಿ, ಎನ್.ಎಸ್. ಶಂಕರ್, ಎ.ಜಿ. ಕಾರಟಗಿ, ರಾಮಕೃಷ್ಣ ಬಡಶೇಷಿ, ಎಚ್.ಬಿ. ಮದನಗೌಡ, ಎಂ. ಸಿದ್ಧರಾಜು, ವಿಶ್ವನಾಥ್ ಸುವರ್ಣ, ಆರ್.ಜಿ.ಹಳ್ಳಿ ನಾಗರಾಜ್, ಭಾರತಿ ಹೆಗಡೆ, ಮಂಜುನಾಥ ಅದ್ದೆ, ಮಲ್ಲಿಕಾರ್ಜುನ ಹೆಗ್ಗಳಗಿ, ರುದ್ರಪ್ಪ ಅಸಂಗಿ, ಶಾಂತಕುಮಾರಿ, ಪತ್ರಿಕಾ ವಿತರಕ ಲಕ್ಷ್ಮೀನರಸಪ್ಪ, ರಾಜು ಮಳವಳ್ಳಿ, ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 12

ಶಾಂತಾ ನಾಗರಾಜ್ ಅವರು ಸಂಪಾದಿಸಿದ ‘ಏಕಾಂಗಿ ಕವಯತ್ರಿಯ ಪ್ರವಾಸದ ಡೈರಿ 1938’ ಪುಸ್ತಕ ಬಿಡುಗಡೆ: ಡಾ.ನಾ. ಸೋಮೇಶ್ವರ, ಅಧ್ಯಕ್ಷತೆ: ಅನಂತ ಪದ್ಮನಾಭರಾವ್, ಅತಿಥಿ: ಟಿ.ಎಸ್. ಸತ್ಯವತಿ, ಆಯೋಜನೆ: ಯಾಜಿ ಪ್ರಕಾಶನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6



ಡಾ.ನಾ. ಸೋಮೇಶ್ವರ

‘ಕರಾಳ ರಾತ್ರಿ’ ನಾಟಕ ಪ್ರದರ್ಶನ: ರಚನೆ: ಮೋಹನ ಹಬ್ಬು, ನಿರ್ದೇಶನ: ಜಿಜಿ, ಆಯೋಜನೆ: ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗದ್ದಕ್ಕೆ ನೊಂದು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗೆದ್ದಲಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರ ಏಳನೇ ಮಹಡಿಯಿಂದ ಜಿಗಿದು ಪಿಯು ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಗೆದ್ದಲಹಳ್ಳಿಯ ನಿವಾಸಿ ಆದೀವ್(16) ಮೃತಪಟ್ಟ ವಿದ್ಯಾರ್ಥಿ.

‘ನಗರದ ಖಾಸಗಿ ಕಾಲೇಜಿನಲ್ಲಿ ಆದೀವ್ ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ವಿದ್ಯಾರ್ಥಿ ತಂದೆ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ತಾಯಿ ಗೃಹಿಣಿ. 15 ವರ್ಷಗಳಿಂದ ಗೆದ್ದಲಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ನೆಲಸಿದ್ದರು’ ಎಂದು ಪೊಲೀಸರು ಹೇಳಿದರು.


‘ಕಾಲೇಜಿನಲ್ಲಿ ಇತ್ತೀಚೆಗೆ ಕ್ರಿಕೆಟ್ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡಲಾಗಿತ್ತು. ಆದೀವ್ ತಂಡಕ್ಕೆ ಆಯ್ಕೆ ಆಗಿರಲಿಲ್ಲ ಎನ್ನಲಾಗಿದೆ. ಇದರಿಂದ ನೊಂದುಕೊಂಡಿದ್ದ. ಬೇರೆ ಕಾಲೇಜಿಗೆ ಸೇರಿಸುವಂತೆ ಪೋಷಕರ ಬಳಿ ಮನವಿ ಮಾಡಿದ್ದ. ಮುಂದಿನ ವರ್ಷ ಬೇರೆ ಕಾಲೇಜಿಗೆ ಸೇರಿಸುವುದಾಗಿಯೂ ಪೋಷಕರು ಹೇಳಿ ಸಮಾಧಾನಪಡಿಸಿದ್ದರು. ಇದೇ ವಿಚಾರವಾಗಿ ಭಾನುವಾರ ಮಧ್ಯಾಹ್ನ ಮನೆಬಿಟ್ಟು ಹೋಗಿದ್ದ. ಸಂಜೆಯಾದರೂ ಮನೆಗೆ ಬಂದಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಪುತ್ರ ರಾತ್ರಿ ವೇಳೆ ಮನೆಗೆ ಬರಬಹುದು ಎಂದು ಭಾವಿಸಿ ಪೋಷಕರು ಮಲಗಿದ್ದರು. ಬಳಿಕ ಮಧ್ಯರಾತ್ರಿ 1.30ರ ಸುಮಾರಿಗೆ ಮನೆಯಲ್ಲಿ ಎಲ್ಲರೂ ನಿದ್ದೆಗೆ ಜಾರಿದ್ದರು. ಆ ಸಮಯದಲ್ಲಿ ಅಪಾರ್ಟ್‌ಮೆಂಟ್‌ನ 7ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶಬ್ದ ಕೇಳಿ ಫ್ಲ್ಯಾಟ್ ನಿವಾಸಿಗಳು ಬಂದು ನೋಡಿದಾಗ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬ್ರ್ಯಾಂಡ್ ಬೆಂಗಳೂರು ದಾರಿ ಹತ್ತಾರು



ರಾಜ್ಯದ ಮೊದಲ ಘಟಕ • ನಗರದ ಒಣ ತ್ಯಾಜ್ಯ ವಿಲೇವಾರಿಗೆ ಮಾರ್ಗ • ಉಪಚುನಾವಣೆ ಫಲಿತಾಂಶದ ನಂತರ ಉದ್ಘಾಟನೆ?

ಡಬ್ಲ್ಯುಟಿಇ: ವಿದ್ಯುತ್ ಉತ್ಪಾದನೆ, ತ್ಯಾಜ್ಯಕ್ಕೂ ಮುಕ್ತಿ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಒಂದೆಡೆ ನಗರದ ಸ್ವಚ್ಛತೆ ಇನ್ನೊಂದೆಡೆ ವಿದ್ಯುತ್ ಉತ್ಪಾದನೆ. ಹೀಗೆ ಎರಡೆರಡು ಉಪಯೋಗವಿರುವ ಒಣ ಕಸದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರ ಬಿಡದಿಯಲ್ಲಿ ಸಿದ್ಧಗೊಂಡಿದೆ. ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಫಲಿತಾಂಶದ ಬಳಿಕ ಸ್ಥಾವರ ಲೋಕಾರ್ಪಣೆ ಮಾಡಲು ಇಂಧನ ಇಲಾಖೆ ತಯಾರಿ ಮಾಡಿಕೊಂಡಿದೆ.

ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಜಂಟಿಯಾಗಿ ಕಸದಿಂದ ವಿದ್ಯುತ್ ಉತ್ಪಾದಿಸುವ (ವೇಸ್ಟ್ ಟು ಎನರ್ಜಿ–ಡಬ್ಲ್ಯುಟಿಇ) ಯೋಜನೆಯನ್ನು ಕಾರ್ಯರೂಪಕ್ಕೆ ತಂದಿವೆ. ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಯಾಗಬೇಕು. ಒಣ ತ್ಯಾಜ್ಯದ ಸಮಸ್ಯೆಗೆ ಮುಕ್ತಿ ನೀಡಬೇಕೆಂಬ ಬಿಬಿಎಂಪಿಯ ಹಲವು ದಶಕಗಳ ಕನಸು ಈ ಸ್ಥಾವರದ ಮೂಲಕ ನನಸಾಗುತ್ತಿದೆ. ಯೋಜನೆ ಅನುಷ್ಠಾನಕ್ಕೆ ಪಾಲಿಕೆಯೊಂದಿಗೆ ಕೈಜೋಡಿಸಲು ಕೆಲವು ಕಂಪನಿಗಳು ಆಸಕ್ತಿ ತೋರಿದರೂ ಆ ನಂತರ ಹಿಂದೆ ಸರಿದ ಕಾರಣ ಸರ್ಕಾರಿ ಸ್ವಾಮ್ಯದ ಕೆಪಿಸಿಎಲ್ ಸಹಕಾರದಿಂದ ಸ್ಥಾವರ ನಿರ್ಮಾಣವಾಗಿದೆ.

ಮನೆಗಳಿಂದ ಹಸಿ ತ್ಯಾಜ್ಯ, ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬಿಬಿಎಂಪಿ ಸಂಗ್ರಹಿಸುತ್ತಿದೆ. ಹಸಿ ತ್ಯಾಜ್ಯ ಗೊಬ್ಬರವಾಗಿ ರೈತರ ಜಮೀನು ಸೇರುತ್ತಿದೆ. ಆದರೆ, ಒಣ ತ್ಯಾಜ್ಯಕ್ಕೆ ಪರಿಹಾರ ಸಿಗದೇ ಭೂ ಭರ್ತಿಯಲ್ಲಿ ರಾಶಿಯಾಗುತ್ತಿದೆ. ನಗರ ಎದುರಿಸು-ತ್ತಿರುವ ಈ 'ಒಣ ಕಸ'ದ ಸಮಸ್ಯೆಗೆ ಡಬ್ಲ್ಯುಟಿಇ ಪರಿಹಾರ ನೀಡಲಿದೆ.



ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ(ಡಬ್ಲ್ಯುಟಿಇ) ಸ್ಥಾವರ

ಮುಖ್ಯಾಂಶಗಳು

- ಒಣ ತ್ಯಾಜ್ಯ ಸಮಸ್ಯೆಗೆ ಪರಿಹಾರ
- 600 ಟನ್ ತ್ಯಾಜ್ಯ ಭೂಭರ್ತಿ ಪ್ರದೇಶ ಕಡಿತಗೊಳ್ಳುತ್ತದೆ
- ತ್ಯಾಜ್ಯಮುಕ್ತ 'ಸ್ವಚ್ಛ ನಗರ'ದ ಪರಿಕಲ್ಪನೆಗೆ ಪೂರಕ.
- ನಗರ ವ್ಯಾಪ್ತಿಯಲ್ಲಿ ಇನ್ನಷ್ಟು ಘಟಕ ಸ್ಥಾಪನೆಗೆ ಚಿಂತನೆ
- ವಿದ್ಯುತ್ ಉತ್ಪಾದನಾ ಸ್ಥಾವರವು ಕಾರ್ಖಾನೆ ಪರವಾನಗಿ ಪಡೆದಿದೆ
- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಯಾಚರಣೆಗೆ ಅನುಮತಿ
- 2024ರ ಸೆಪ್ಟೆಂಬರ್ 23ರಂದು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ

ಸ್ಥಾವರದ ವಿವರ

15 ಎಕರೆ
ಸ್ಥಾವರದ ಪ್ರದೇಶ

₹ 300 ಕೋಟಿ
ಒಟ್ಟು ವೆಚ್ಚ

600 ಟನ್
ತ್ಯಾಜ್ಯ ಸಂಸ್ಕರಣೆ ಸಾಮರ್ಥ್ಯ

11.5 ಮೆ.ವಾ
ವಿದ್ಯುತ್ ಉತ್ಪಾದನಾ ಸಾಮರ್ಥ್ಯ

ಈಗಾಗಲೇ ಬಿಬಿಎಂಪಿ, ಪ್ರತಿ ವಾರ್ಡ್‌ನಲ್ಲಿ ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ಆರಂಭಿಸಿದೆ. ಆ ಘಟಕಗಳಿಂದ ನೇರವಾಗಿ ಡಬ್ಲ್ಯುಟಿಇಗೆ ಒಣ ತ್ಯಾಜ್ಯ ರವಾನೆಯಾಗಲಿದೆ ಎಂದು ಅಧಿಕಾರಿ-ಯೊಬ್ಬರು ಮಾಹಿತಿ ನೀಡಿದರು.

ತ್ಯಾಜ್ಯ ಮುಕ್ತಿ ಜೊತೆಗೆ ಶಕ್ತಿ: ಬಿಬಿಎಂಪಿ ವ್ಯಾಪ್ತಿಯಲ್ಲಿ ನಿತ್ಯ ಸುಮಾರು 5,800 ಟನ್ ಕಸ ಉತ್ಪತ್ತಿಯಾಗುತ್ತದೆ. ಅದರಲ್ಲಿ ಅಂದಾಜು ಎರಡು ಸಾವಿರ ಟನ್ ಒಣ ಕಸ ಇರುತ್ತದೆ. ಭೂ ಭರ್ತಿಗೆ(ಲ್ಯಾಂಡ್ ಫಿಲ್) ಹೋಗುವ ಕಸ ಈಗ ವಿದ್ಯುತ್ ಉತ್ಪಾದನೆಗೆ ಹೋಗುತ್ತಿದೆ. ಬಯಲಲ್ಲಿ ಸುಡುವ ತ್ಯಾಜ್ಯ, ಸ್ಥಾವರದಲ್ಲಿ ವೈಜ್ಞಾನಿಕವಾಗಿ ವಿಲೇವಾರಿಗೊಳ್ಳುತ್ತಿದೆ. ಇದರಿಂದ ತ್ಯಾಜ್ಯ ಸಮಸ್ಯೆಗೆ ಮುಕ್ತಿಯೂ, ಶಕ್ತಿಯ (ವಿದ್ಯುತ್) ಉತ್ಪಾದನೆಯೂ ಏಕಕಾಲಕ್ಕೆ ಆಗಲಿದೆ.

'ಡಬ್ಲ್ಯುಟಿಇ ನಗರದಲ್ಲಿ ಉತ್ಪತ್ತಿಯಾಗುವ ಒಟ್ಟು ಒಣ ತ್ಯಾಜ್ಯದ ಶೇ 25 ಭಾಗವನ್ನು ಸಂಸ್ಕರಿಸಿ, ವಿದ್ಯುತ್ ಆಗಿ ಪರಿವರ್ತಿಸುವ ಗುರಿ ಇದೆ. ಈಗಾಗಲೇ ಆರು ತಿಂಗಳಿನಿಂದ ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಈ ಪ್ರಕ್ರಿಯೆಗೆ ಬಿಬಿಎಂಪಿ ನಿತ್ಯ 400 ಟನ್ ಒಣ ತ್ಯಾಜ್ಯ ಪೂರೈಸುತ್ತಿದೆ. ಉತ್ಪಾದಿಸುತ್ತಿರುವ ವಿದ್ಯುತ್ ಅನ್ನು ಬೆಸ್ಕಾಂ ಗ್ರಿಡ್‌ಗೆ ಪೂರೈಸಲಾಗುತ್ತಿದೆ' ಎಂದು ಕೆಪಿಸಿಎಲ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಬಿಡದಿಯ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದಲ್ಲಿ(ಡಬ್ಲ್ಯುಟಿಇ) ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಶೀಘ್ರದಲ್ಲೇ ಲೋಕಾರ್ಪಣೆಗೊಳಿಸಲಾಗುವುದು
ಕೆ.ಜೆ.ಜಾರ್ಜ್, ಇಂಧನ ಸಚಿವ



'ಡಬ್ಲ್ಯುಟಿಇ'ಯಿಂದ ಈಗ ಸ್ಥಾವರದಲ್ಲಿ ಒಣ ಕಸ ಸಂಸ್ಕರಣೆಗೊಂಡು ವಿದ್ಯುತ್ ಉತ್ಪಾದನೆಯಾಗುತ್ತಿದೆ. ನಗರದಲ್ಲಿ ಇನ್ನೂ ಮೂರು ಕಡೆ ಇಂಥ ಸ್ಥಾವರ ಸ್ಥಾಪಿಸುವ ಬಗ್ಗೆ ಚಿಂತನೆ ನಡೆದಿದೆ.
ತುಷಾರ್ ಗಿರಿನಾಥ್
ಮುಖ್ಯ ಆಯುಕ್ತರು, ಬಿಬಿಎಂಪಿ



ಒಣ ತ್ಯಾಜ್ಯದ ರಾಶಿ (ಸಾಂದರ್ಭಿಕ ಚಿತ್ರ)

ಬೂದಿ ಮರು ಬಳಕೆ ಸಾಧ್ಯತೆ

'ಡಬ್ಲ್ಯುಟಿಇ ಸ್ಥಾವರದಲ್ಲಿ ಒಣ ತ್ಯಾಜ್ಯ ಸುಟ್ಟನಂತರ ಶೇ 15 ರಿಂದ 20ರಷ್ಟು ಬೂದಿ ಬರುತ್ತದೆ. ಇದನ್ನು ಕಾಂಕ್ರೀಟ್ ಉತ್ಪನ್ನಗಳನ್ನು ತಯಾರಿಸಲು ಮಿಶ್ರ ಮಾಡಬಹುದು. ಜಪಾನ್‌ನಂತಹ ರಾಷ್ಟ್ರಗಳಲ್ಲಿ, ನಮ್ಮ ದೇಶ ಬೇರೆ ರಾಜ್ಯಗಳಲ್ಲಿ ಬೂದಿಯನ್ನು ರಸ್ತೆ ನಿರ್ಮಾಣ ಕಾಮಗಾರಿಗೆ ಬಳಸುತ್ತಿದ್ದಾರೆ. ಇದೂ ಸೇರಿದಂತೆ, ಕಾಂಕ್ರೀಟ್ ಉತ್ಪನ್ನಗಳ ತಯಾರಿಕೆಯಲ್ಲಿ ಬೂದಿ ಬಳಸುವ ಕುರಿತು ಪರಿಶೀಲಿಸುವಂತೆ ಕೆಲವು ಕಂಪನಿಗಳಿಗೆ ಕೇಳಿದ್ದೇವೆ. ಜೊತೆಗೆ, ಈ ಬೂದಿಯ ಗುಣಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ' ಎಂದು ಕೆಪಿಸಿಎಲ್ ಕಾರ್ಯಪಾಲಕ ಎಂಜಿನಿಯರೊಬ್ಬರು ತಿಳಿಸಿದರು.

600 ಟನ್ ಸಂಸ್ಕರಣಾ ಸಾಮರ್ಥ್ಯ: ಬಿಡದಿ ಸ್ಥಾವರದಲ್ಲಿ ನಿತ್ಯ 600 ಟನ್ ಒಣ ತ್ಯಾಜ್ಯ ಸಂಸ್ಕರಿಸಬಹುದು. 11.5 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದೆ. ನಿತ್ಯ 0.27 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು. 'ಪ್ರಾಯೋಗಿಕ ಪ್ರಕ್ರಿಯೆಯಲ್ಲಿ ಒಮ್ಮೊಮ್ಮೆ ತ್ಯಾಜ್ಯದ ಪ್ರಮಾಣ ಕಡಿಮೆಯಾಗಿ ಅಥವಾ ಪೂರ್ಣ ಒಣಗಿದ ತ್ಯಾಜ್ಯ ಲಭ್ಯವಾಗದೇ 5 ರಿಂದ 7 ಮೆಗಾವಾಟ್ ವಿದ್ಯುತ್ ಉತ್ಪತ್ತಿ ಮಾಡಲಾಗಿದೆ. ಬಹಳ ದಿನ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದೇವೆ' ಎಂದು ಸ್ಥಾವರದ ಅಧಿಕಾರಿಗಳು ಮಾಹಿತಿ ನೀಡಿದರು.

'ಸ್ಥಾವರದಲ್ಲಿ ವಿದ್ಯುತ್ ಉತ್ಪಾದನಾ ವೆಚ್ಚ ತುಸು ಹೆಚ್ಚು. ಪ್ರತಿ ಯೂನಿಟ್‌ಗೆ ಸುಮಾರು ₹8 ಖರ್ಚು ಆಗುತ್ತದೆ. ಆದರೆ, ನಗರದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಹಾಯವಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಿಡದಿಯ 15 ಎಕರೆ ಪ್ರದೇಶದಲ್ಲಿರುವ ಡಬ್ಲ್ಯುಟಿಇ ಘಟಕ, ರಾಜ್ಯದ ಮೊದಲ 'ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರ'ವಾಗಿದೆ. ಅಂದಾಜು ₹260 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿದೆ. ಕೆಪಿಸಿಎಲ್ ಮತ್ತು ಬಿಬಿಎಂಪಿ ಜಂಟಿಯಾಗಿ ವೆಚ್ಚ ಭರಿಸಿವೆ. ಘಟಕದ ನಿರ್ವಹಣೆ ಜವಾಬ್ದಾರಿಯನ್ನು ನಿಗಮವೇ ವಹಿಸಿಕೊಂಡಿದೆ. ಜಪಾನ್ ದೇಶದ 'ಹಿಟಾಚಿ' ಕಂಪನಿ ತಂತ್ರಜ್ಞಾನವನ್ನು ನೀಡಿದೆ. 'ಇಸ್ಜೆಕ್ ಕಂಪನಿ' ಸ್ಥಾವರದ ನಿರ್ಮಾಣ ಕಾರ್ಯದಲ್ಲಿ ನೆರವಾಗಿದೆ.

ಡಬ್ಲ್ಯುಟಿಇ ಕಾರ್ಯವೈಖರಿ

ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆಯಾದಂತೆ, ಇಲ್ಲಿಯೂ ಒಣ ತ್ಯಾಜ್ಯ ಉರಿದು, ಶಾಖ ಉತ್ಪತ್ತಿಯಾಗಿ, ಅದರಿಂದ ಕೊಳವೆಗಳಲ್ಲಿ ಹರಿಯುವ ನೀರು ಕಾಯಿಸಿ, ಅದರಿಂದ ಉತ್ಪತ್ತಿ-ಯಾಗುವ ಹಬೆ(ಸ್ಟೀಮ್)ಯನ್ನು ಟರ್ಬೈನ್‌ಗೆ ಕಳುಹಿಸಿ ವಿದ್ಯುತ್ ಉತ್ಪತ್ತಿ ಮಾಡಲಾಗುತ್ತದೆ. ಕಲ್ಲಿದ್ದಲಿನ ಬದಲಿಗೆ ಇಲ್ಲಿ ಒಣ ತ್ಯಾಜ್ಯ ಬಳಸಲಾಗುತ್ತದೆ.

'ಚಾಲನಾ ಪೂರ್ವ ಚಟುವಟಿಕೆಗಳು ಮುಗಿದಿವೆ. ಈ ತಿಂಗಳಾಂತ್ಯಕ್ಕೆ ಸ್ಥಾವರದ ಸಾಮರ್ಥ್ಯ ಪರೀಕ್ಷೆ(ಪಿಜಿ ಟೆಸ್ಟ್) ಪೂರ್ಣಗೊಳ್ಳಲಿದೆ. ನಂತರ ಪೂರ್ಣ ಪ್ರಮಾಣದಲ್ಲಿ ಚಟುವಟಿಕೆ ಆರಂಭವಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.





ನಗರದ ಚರ್ಚ್ ಸ್ಟ್ರೀಟ್ ದುರಸ್ಥಿ ಕೆಲಸ ಭರದಿಂದ ನಡೆಯುತ್ತಿದೆ. –ಪ್ರಜಾವಾಣಿ ಚಿತ್ರ

ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ನವೀಕರಣ ಕಾರ್ಯ

ಚರ್ಚ್‌ಸ್ಟ್ರೀಟ್ ಸೌಂದರ್ಯೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾಂಸ್ಕೃತಿಕ ಪರಂಪರೆಯ ಸಂಭ್ರಮಾಚರಣೆ ಮತ್ತು ಅದರ ವೈಭವ ಹೆಚ್ಚಿಸು-ವುದಕ್ಕೆ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್ ಆಯೋಜಿಸಿರುವ 'ಬಿಎಲ್‌ಆರ್ ಹಬ್ಬ'ಕ್ಕಾಗಿ ಚರ್ಚ್‌ಸ್ಟ್ರೀಟ್ ಅನ್ನು ಸೌಂದರ್ಯೀಕರಣ ಮಾಡಲಾಗುತ್ತಿದೆ. ಬಿಬಿಎಂಪಿ ಸಹಭಾಗಿತ್ವದಲ್ಲಿ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್ ನವೆಂಬರ್ 30ರಿಂದ 'ಬಿಎಲ್‌ಆರ್ ಹಬ್ಬ' ಆಯೋಜಿಸಿದೆ.

'ನಮ್ಮ ಬೆಂಗಳೂರು, ನಮ್ಮ ಕೊಡುಗೆ' ಕಾರ್ಯಕ್ರಮದ ಭಾಗವಾಗಿ ಚರ್ಚ್‌ಸ್ಟ್ರೀಟ್ ಅನ್ನು ದುರಸ್ತಿಗೊಳಿಸಿ, ಸುಂದರಗೊಳಿಸುವ ಕಾಮಗಾರಿ ನಡೆಸಲಾಗುತ್ತಿದೆ. ಬಿಬಿಎಂಪಿ ಜೊತೆಗಿನ ಒಪ್ಪಂದದಂತೆ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಚರ್ಚ್‌ಸ್ಟ್ರೀಟ್ ಸೇರಿದಂತೆ ರಿಚ್ಮಂಡ್ ರಸ್ತೆ ಮತ್ತು ವಿಠ್ಠಲ ಮಲ್ಯ ರಸ್ತೆಗೆ ಹೊಸ ರೂಪ ನೀಡಲಿದೆ. ಈ ನವೀಕರಣ ಯೋಜನೆಯಲ್ಲಿ ರಸ್ತೆ, ಪಾದಚಾರಿ ರಸ್ತೆ ದುರಸ್ತಿ ಮತ್ತು ಹೊಸ ಬೀದಿದೀಪಗಳ ಅಳವಡಿಕೆ, ಕಸ ವಿಲೇವಾರಿ ಸೌಲಭ್ಯ, ಒಳಚರಂಡಿ ಮತ್ತು ಆಲಂಕಾರಿಕ ಹಸಿರು ಹೊದಿಕೆಯ ಸೌಲಭ್ಯಗಳಿವೆ.

'ಬಿಎಲ್‌ಆರ್ ಹಬ್ಬ'

ಒಪ್ಪಂದದಂತೆ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಎರಡು ವರ್ಷ ಕಾಲ ಚರ್ಚ್‌ಸ್ಟ್ರೀಟ್ ಅನ್ನು ನಿರ್ವಹಿಸಲಿದೆ.

'ಉತ್ತಮ ಬೆಂಗಳೂರು ರೂಪಿಸುವಲ್ಲಿ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಬದ್ಧತೆಯು ಚರ್ಚ್‌ಸ್ಟ್ರೀಟ್‌ಗೆ ಹೊಸ ರೂಪ ನೀಡುತ್ತಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವಕ್ಕೆ ಇದು ನಿದರ್ಶನವಾಗಿದೆ.

ಈ ಪ್ರತಿಷ್ಠಿತ ರಸ್ತೆಯನ್ನು ನಮ್ಮ ನಗರದ ಅತ್ಯುತ್ತಮ ಹಾಗೂ ಅತ್ಯಾಕರ್ಷಕ ತಾಣವನ್ನಾಗಿ ಪರಿವರ್ತಿಸಲು ಅನ್‌ಬಾಕ್ಸಿಂಗ್ ಬಿಎಲ್‌ಆರ್ ಮುಂದಾಗಿರುವುದು ಕಂಡು ನಮಗೆ ಸಂತಸವಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು. 'ಬೆಂಗಳೂರಿನ ನಗರ ಪ್ರದೇಶಗಳನ್ನು ಸುಧಾರಿಸಲು ಸಂಸ್ಥೆಯು ಗಮನ ಕೇಂದ್ರೀಕರಿಸಿದೆ.

ಚರ್ಚ್‌ಸ್ಟ್ರೀಟ್ ಅನ್ನು ಸ್ಥಳೀಯರು ಮತ್ತು ದೇಶ ವಿದೇಶಗಳಿಂದ ಭೇಟಿ ನೀಡುವವರಿಗೆ ಸ್ಫೂರ್ತಿದಾಯಕ ಸ್ಥಳವನ್ನಾಗಿಸುವುದು ನಮ್ಮ ಗುರಿಯಾಗಿದೆ' ಎಂದು ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಮಾಹಿತಿ ನೀಡಿದರು.

₹18 ಕೋಟಿ: ಟೆಂಡರ್‌ಶ್ಯೂರ್ ಯೋಜನೆಯಲ್ಲಿ ಚರ್ಚ್‌ಸ್ಟ್ರೀಟ್ ಅನ್ನು ₹18 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಬಿಬಿಎಂಪಿ ಅಭಿವೃದ್ಧಿ ಮಾಡಿತ್ತು. ಹಲವು ಬಾರಿ ಕಲ್ಲುಗಳು ಕಿತ್ತು ಬಿದ್ದು, ವಾಹನ ಸಂಚಾರರು ಆಯತಪ್ಪಿ ಕೆಳಗೆ ಬಿದ್ದಿರುವ ಪ್ರಕರಣಗಳೂ ಸಾಕಷ್ಟಿವೆ. ಬಿಬಿಎಂಪಿ ಆಗಾಗ್ಗೆ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದ ಚರ್ಚ್ ಸ್ಟ್ರೀಟ್ ಅನ್ನು, ಈಗ ಖಾಸಗಿ ಸಹಭಾಗಿತ್ವದಲ್ಲಿ ಸುಂದರೀಕರಿಸಲಾಗುತ್ತಿದೆ.

ಹಿಂದೂಯೇತರ ಸಿಬ್ಬಂದಿ: ಸರ್ಕಾರಕ್ಕೆ ಪತ್ರ – ಟಿಟಿಡಿ ನಿರ್ಧಾರ

ಹೈದರಾಬಾದ್: ತಿರುಮಲದಲ್ಲಿ ಕೆಲಸ ಮಾಡುವ ಹಿಂದೂಯೇತರ ಸಿಬ್ಬಂದಿಯ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಕೋರಿ ಆಂಧ್ರಪ್ರದೇಶ ಸರ್ಕಾರಕ್ಕೆ ಪತ್ರ ಬರೆಯಲು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಮಂಡಳಿ ನಿರ್ಧರಿಸಿದೆ.

ಸೋಮವಾರ ನಡೆದ ಟಿಟಿಡಿಯ ಹೊಸ ಮಂಡಳಿಯ ಮೊದಲ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. 'ತಿರುಮಲದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಹಿಂದೂಗಳೇ ಆಗಿರಬೇಕು. ಟಿಟಿಡಿಯು ಹಿಂದೂ ದತ್ತಿ ಸಂಸ್ಥೆಯಾಗಿರುವುದರಿಂದ ಹಿಂದೂಯೇತರರು ಸಿಬ್ಬಂದಿಯಾಗಿ ಮುಂದುವರಿಯಲು ಅವಕಾಶ ನೀಡುವುದಿಲ್ಲ' ಎಂದು ಟಿಟಿಡಿ ಮಂಡಳಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಬಿ.ಆರ್.ನಾಯ್ಡು ಈ ಹಿಂದೆ ಘೋಷಿಸಿದ್ದರು.

'ಇತರ ಧರ್ಮಕ್ಕೆ ಸೇರಿದ ಸಿಬ್ಬಂದಿಯನ್ನು ಸರ್ಕಾರದ ಇತರ ಇಲಾಖೆಗಳಿಗೆ ನಿಯುಕ್ತಿಗೊಳಿಸುವ ಅಥವಾ ಸ್ವಯಂ ನಿವೃತ್ತಿಗೆ (ವಿಆರ್‌ಎಸ್) ಅವಕಾಶ ಕಲ್ಪಿಸುವ ಕುರಿತು ಸಮಾಲೋಚನೆ ನಡೆಸಲಾಗುವುದು' ಎಂದಿದ್ದರು. ಆದ್ದರಿಂದ ತನ್ನ ಮೊದಲ ಸಭೆಯಲ್ಲೇ ಈ ವಿಷಯದ ಬಗ್ಗೆ ಚರ್ಚೆ ನಡೆಸಿದೆ.

'ತಿರುಮಲದಲ್ಲಿ ಯಾವುದೇ ರೀತಿಯ ರಾಜಕೀಯ ಹೇಳಿಕೆಗಳಿಗೆ ಅವಕಾಶ ನೀಡುವುದಿಲ್ಲ. ಅಂತಹ ವ್ಯಕ್ತಿಗಳು ಮತ್ತು ರಾಜಕೀಯ ಪಕ್ಷಗಳ ಪರ ಪ್ರಚಾರ ಮಾಡುವವರ ವಿರುದ್ಧ ಅಗತ್ಯಬಿದ್ದರೆ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ನಾಯ್ಡು ಹೇಳಿದರು.

ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಜಾತಿಯಿಂದ ಲಕ್ಷಾಂತರ ಜನ ಅಕ್ಷರ ವಂಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ವ್ಯವಸ್ಥೆಯಿಂದ ಲಕ್ಷಾಂತರ ಜನ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಎಲ್ಲರಿಗೂ ಅಕ್ಷರ ಸಂಸ್ಕೃತಿ ದೊರೆತಿದ್ದರೆ ಇಷ್ಟೊಂದು ಅಸಮಾನತೆ ಇರುತ್ತಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು' ಮತ್ತು 'ರಮಣಶ್ರೀ ಪ್ರತಿಷ್ಠಾನ' ಜಂಟಿಯಾಗಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಮೌಢ್ಯ, ಕರ್ಮ ಸಿದ್ಧಾಂತ, ಕಂದಾಚಾರಗಳನ್ನು ಬಿಟ್ಟು ಬಸವಾದಿ ಶರಣರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಬಸವಣ್ಣನವರ ವಚನ ಹೇಳಿ, ಜಾತಿ ಬಗ್ಗೆ ಮಾತನಾಡುತ್ತಾರೆ. ಸಮಾಜದಲ್ಲಿ ಇಂದೂ ಜಾತಿ ವ್ಯವಸ್ಥೆ ಇದ್ದು, ಅದು ಹೋಗಿ ಮಾನವೀಯತೆ-ಯುಳ್ಳ ಸಮಾಜ ನಿರ್ಮಾಣವಾಗಬೇಕು. ವಿದ್ಯಾವಂತರು ಕೂಡ ಪೂರ್ವಜರು ಮಾಡಿದ ಕರ್ಮ, ಹಣೆಬರಹ ಎಂದು ಕರ್ಮಸಿದ್ಧಾಂತಗಳನ್ನು ಮಾತನಾಡುತ್ತಾರೆ' ಎಂದರು.



'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು' ಮತ್ತು 'ರಮಣಶ್ರೀ ಪ್ರತಿಷ್ಠಾನ' ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ರಮಣಶ್ರೀ ಶರಣ ಪ್ರಶಸ್ತಿ – 2024' ಪ್ರದಾನ ಮಾಡಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್, ಕಸಾಪ ಮಾಜಿ ಅಧ್ಯಕ್ಷ ಮನು ಬಳಿಗಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷ ಎಸ್ ಷಡಕ್ಷರಿ, ಸಂಸದ ಬಸವರಾಜ ಬೊಮ್ಮಾಯಿ ಮತ್ತು 'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಅವರು ಬಸವ ಮಂಟಪ ನಿರ್ಮಾಣ ಮಾಡಬೇಕು ಎಂದು ಮನವಿ ಸಲ್ಲಿಸಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿಕೊಡಲಾಗು-ವುದು' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಗೊಂದಲಗಳಿಗೆ ಉತ್ತರ: 'ಇತ್ತೀಚಿನ ದಿನಗಳಲ್ಲಿ ಗೊಂದಲ ಸೃಷ್ಟಿಸುವುದೇ ಒಂದು ಕಾಯಕವಾಗಿದೆ. ಇದಕ್ಕೆಲ್ಲ ಶರಣ ಸಾಹಿತ್ಯದಲ್ಲಿ ಸರಳ ಉತ್ತರ ಇದೆ. ಬಸವ ಸಾಹಿತ್ಯ ಈಗಲೂ ಪ್ರಸ್ತುತ. ಅಸಮಾನತೆ ವಿರುದ್ಧ, ಲಿಂಗಭೇದ, ಮೌಢ್ಯದ ವಿರುದ್ಧ 800 ವರ್ಷಗಳ ಹಿಂದೆ ಹೋರಾಟ ಮಾಡಿದ್ದರು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ಸಮಾಜದಲ್ಲಿ ಜ್ಞಾನದ ಬೆಳವಣಿಗೆ ಆಗಿದೆ. ಜ್ಞಾನದ ಜೊತೆಗೆ ಮೌಲ್ಯಗಳ ಬದಲಾವಣೆ ಆಗಬೇಕು. ನಾಗರಿಕತೆ ಹಾಗೂ ಸಂಸ್ಕೃತಿ ನಡುವೆ ವ್ಯತ್ಯಾಸ ಇದೆ. ನಾವೇನಾಗಿದ್ದೇವೆ ಎಂದು ತಿಳಿದುಕೊಂಡರೆ ಖಂಡಿತವಾಗಿಯೂ ಬಸವಣ್ಣ ಹೇಳಿದಂತೆ ನಡೆಯಬೇಕಾಗುತ್ತದೆ' ಎಂದರು.

ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು' ಭಾಗ-14ರ ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಪರಿಷತ್‌ನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ, ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಮನು ಬಳಿಗಾರ್, 'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಉಪಸ್ಥಿತರಿದ್ದರು.

ಕ್ಷೇಮ ಕುಶಲ



ಮಧುಮೇಹವನ್ನು 'ರಿವರ್ಸ್' ಮಾಡಬಹುದೇ?

ಡಾ. ವಿ. ಲಕ್ಷ್ಮೀನಾರಾಯಣ

'ಟೈಪ್‌'–2 ಮಧುಮೇಹ ಅಲ್ವಾ? ಅದನ್ನು ಆರಾಮವಾಗಿ ರಿವರ್ಸ್ (ಹಿಮ್ಮೆಟ್ಟಿಸುವುದು) ಮಾಡಬಹುದು. ಮತ್ತೆ ಬರೋದೇ ಇಲ್ಲ, ಸಂಪೂರ್ಣ ವಾಸಿಯಾಗುತ್ತದೆ' ಎಂದು ಭರವಸೆ ನೀಡುವ ಆ್ಯಪ್‌ಗಳು, ಸಂಸ್ಥೆಗಳು ಇಂದು ಮಾರುಕಟ್ಟೆಯಲ್ಲಿ ತಲೆಯೆತ್ತಿವೆ. ಗುಣಪಡಿಸಲಾಗದ ಟೈಪ್–1 ಮಧುಮೇಹವನ್ನೂ ವಾಸಿ ಮಾಡುತ್ತೇವೆ ಎಂದು ಆಶ್ವಾಸನೆ ನೀಡುತ್ತಿದ್ದಾರೆ, ಇವರೆಲ್ಲರೂ.

ನಿಜಕ್ಕೂ ಮಧುಮೇಹದ ಹಿಮ್ಮೆಟ್ಟಿಸುವಿಕೆ ಸಾಧ್ಯವೇ ಅಥವಾ ಉಪಶಮನ ಮಾತ್ರ ನಮ್ಮ ಆಯ್ಕೆಯೇ? ಈ ಎರಡರಲ್ಲಿ ಯಾವುದು ನಿಜ? ಇಂಥ ಪ್ರಶ್ನೆಗಳು ಮಧುಮೇಹಿಗಳನ್ನು ಕಾಡುತ್ತಿವೆ. ಇಂದಿನ ಮಾರುಕಟ್ಟೆ ವ್ಯವಸ್ಥೆ ಅಂಥ ಗೊಂದಲವನ್ನು ಸೃಷ್ಟಿಸಿದ್ದು, ಮಧುಮೇಹದಿಂದ ಆರೋಗ್ಯರಕ್ಷಣೆಗಾಗಿ ಅವೈಜ್ಞಾನಿಕ ಹಾದಿಯತ್ತ ಜನರು ಸಾಗುತ್ತಿರುವುದು ಇನ್ನಷ್ಟು ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಬಹುದು.

ಇಂದು, ಶೇ 50ರಷ್ಟು ಮಧುಮೇಹ ಇರುವವರು ಸಮಸ್ಯೆ ಕಂಡುಬಂದ ಹತ್ತು ವರ್ಷಗಳ ಅವಧಿಯಲ್ಲಿ ಇನ್ಸುಲಿನ್ ಅನ್ನು ತೆಗೆದುಕೊಳ್ಳುವ ಹಂತವನ್ನು ತಲುಪುತ್ತಿದ್ದಾರೆ. ದೇಶದ ಶೇ 51.7ರಷ್ಟು ಜನರಲ್ಲಿ ಗುರುತಿಸಲಾಗದೇ ಇರುವ ಮಧುಮೇಹವಿದ್ದು, ಈ ಸಂಖ್ಯೆಯಲ್ಲಿ ನಾವು ಪ್ರಪಂಚದ 2ನೇ ಸ್ಥಾನದಲ್ಲಿದ್ದೇವೆ. ದೇಹದ ಅಗತ್ಯಕ್ಕಿಂತ ಅಧಿಕ ಪ್ರಮಾಣದಲ್ಲಿ ಪಿಷ್ಠ (ಕಾರ್ಬೋಹೈಡ್ರೇಟ್ಸ್) ಪದಾರ್ಥಗಳನ್ನು ಸೇವಿಸುವುದು ಇದಕ್ಕೆ ಪ್ರಮುಖ ಕಾರಣ.



ಹಿಮ್ಮೆಟ್ಟಿಸುವಿಕೆ ಮತ್ತು ಉಪಶಮನ

'ಮಧುಮೇಹದ ಹಿಮ್ಮೆಟ್ಟಿಸುವಿಕೆ' ಎಂಬ ಮಾತು ಇತ್ತೀಚೆಗೆ ಹೆಚ್ಚು ಪ್ರಚಲಿತವಾಗಿದೆ. ಸಮಸ್ಯೆಯಿಂದ ಸಾಕಷ್ಟು ಖರ್ಚು ಮಾಡಿರುವ, ದೀರ್ಘಕಾಲದ ಔಷಧಸೇವನೆಯಿಂದ ಅಡ್ಡಪರಿಣಾಮಗಳನ್ನು ಎದುರಿಸುತ್ತಿರುವವರು ಸಹಜವಾಗಿಯೇ ಈ ಬಗ್ಗೆ ಕುತೂಹಲವನ್ನು ತಾಳುತ್ತಾರೆ. 'ಹಿಮ್ಮೆಟ್ಟಿಸುವಿಕೆ' ಎಂದರೆ ಮತ್ತೆ ಮೊದಲಿನಂತಾಗುವುದು, ಪೂರ್ಣ ವಾಸಿಯಾಗುವುದು ಎಂದರ್ಥ. 'ಉಪಶಮನ' ಎಂದರೆ ಕಾಯಿಲೆಯು ಸುಪ್ತವಾಗಿ ಇರುವಂತೆ ದೇಹವನ್ನು ನಿಯಮಬದ್ಧವಾಗಿ ಇರಿಸಿಕೊಳ್ಳುವುದು. ಅಮೆರಿಕನ್ ಡಯಾಬಿಟಿಸ್ ಸಂಸ್ಥೆ (ಎಡಿಎಸ್) ಈ ರೀತಿ ಉಪಶಮನದಲ್ಲೂ ರಕ್ತದಲ್ಲಿನ ಗ್ಲೂಕೋಸ್ ಅಂಶ, ಸರಾಸರಿ ಅವಧಿಯನ್ನು ಪರಿಗಣಿಸಿ 3 ಹಂತಗಳನ್ನು ಗುರುತಿಸಿದೆ. ಯಾವುದೇ ಔಷಧವಿಲ್ಲದೆ 3 ತಿಂಗಳು ಸಹಜವಾಗಿದ್ದರೆ ಭಾಗಶಃ ಉಪಶಮನ, 1 ವರ್ಷ ಅವಧಿಗೂ ಸಮಸ್ಯೆ ಎದುರಾಗದಿದ್ದರೆ ಸಂಪೂರ್ಣ ಉಪಶಮನ ಹಾಗೂ ಐದು ವರ್ಷಗಳವರೆಗೆ ಯಾವುದೇ ವ್ಯತಿರಿಕ್ತ ಪರಿಣಾಮಗಳು ಕಂಡುಬರದಿದ್ದರೆ ಸುದೀರ್ಘ ಉಪಶಮನ ಎಂದು ಕರೆದಿದೆ. ಇದರರ್ಥ ಮರುಕಳಿಸುವುದಿಲ್ಲ ಎಂದಲ್ಲ, ಪರಿಸ್ಥಿತಿ ಉತ್ತಮ ಸ್ಥಿತಿಯನ್ನು ತಲಪಿದೆ ಎನ್ನಬಹುದು.

ಉಪಶಮನ ಕ್ರಿಯೆಗೆ ಯಾರು ಅರ್ಹರು?

- ರಕ್ತದಲ್ಲಿ ತೀರ ಅತಿಯಾದ ಸಕ್ಕರೆಯ ಪ್ರಮಾಣ ಇಲ್ಲದಿರುವವರು.
- ಅಧಿಕ ತೂಕ ಅಥವಾ ಬಿಎಂಐ ಉಳ್ಳವರು.
- ಶರೀರದಲ್ಲಿ ಇನ್ಸುಲಿನ್ ಸಂಗ್ರಹ ಇರಬೇಕು.
- 8 ವರ್ಷಕ್ಕಿಂತಲೂ ಕಡಿಮೆ ಅವಧಿಯಿಂದ ಮಧುಮೇಹ ಹೊಂದಿರುವವರು.
- ಹೆಚ್ಚು ಉತ್ಸಾಹಪೂರ್ಣರಾಗಿ ಜೀವಿಸುವವರು.
- ಮಧುಮೇಹವನ್ನು ನಿಯಂತ್ರಿಸುವವರ ಗುಂಪಿನಲ್ಲಿ ಗುರುತಿಸಿಕೊಂಡಿರುವವರು.

ಚಿಕಿತ್ಸೆಯ ಬಗ್ಗೆ

ವಾಸ್ತವವೆಂದರೆ, ಇಂದು ಎಷ್ಟೇ ತಂತ್ರಜ್ಞಾನ ಮುಂದುವರೆದಿದ್ದರೂ, ವೈಜ್ಞಾನಿಕ ಆವಿಷ್ಕಾರಗಳು ನಡೆದಿದ್ದರೂ ಮಧುಮೇಹವನ್ನು ಹತೋಟಿಯಲ್ಲಿಡುವ ವಿಚಾರದಲ್ಲಿ ನಿರ್ದಿಷ್ಟ ಮತ್ತು ಸಮಾಧಾನಕರ ಮಾರ್ಗ ಇದುವರೆಗೂ ಸ್ಪಷ್ಟವಾಗಿ ಕಂಡುಬಂದಿಲ್ಲ. ನನ್ನ 25 ವರ್ಷಗಳ ಅನುಭವದಿಂದ ಹೇಳುವುದಾದರೆ, ಔಷಧಗಳನ್ನು ಉಪಯೋಗಿಸುವುದರಿಂದ ಮಧುಮೇಹವು ಹತೋಟಿಯಲ್ಲಿದೆ ಎಂದು ಕಂಡುಬಂದರೂ ಕಾಲಕ್ರಮೇಣ ಹೆಚ್ಚು ಹೆಚ್ಚು ಗುಳಿಗೆಗಳನ್ನು ಉಪಯೋಗಿಸುವ ಸನ್ನಿವೇಶ ಎದುರಾಗುತ್ತದೆ. ಕೊನೆಗೆ ಇನ್ಸುಲಿನ್ ಅನ್ನು ತೆಗೆದುಕೊಳ್ಳುವ ಪ್ರಮೇಯವೂ ಬರುತ್ತದೆ.

ಮಧುಮೇಹವನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸುವ ಪ್ರಯತ್ನಗಳು ನಡೆಯುತ್ತಿವೆಯಾದರೂ, ಹೊಸ ಪುರಾವೆಗಳ ಪ್ರಕಾರ ಟೈಪ್ 2 ಮಧುಮೇಹವನ್ನು ಉಪಶಮನ ಮಾಡಬಹುದು. ಆದರೆ ಅದು ದೀರ್ಘಕಾಲ ಉಪಶಮನದಲ್ಲಿಯೇ ಇರುತ್ತದೆಂಬುದಕ್ಕೂ ಅಂಕಿ–ಅಂಶಗಳಿಲ್ಲ.

(ಲೇಖಕರು ಮಧುಮೇಹತಜ್ಞರು)

ಉಪಶಮನದ ಪ್ರಾಯೋಗಿಕ ವಿಧಾನ

ಕಡಿಮೆ ಕ್ಯಾಲೊರಿಸ್ ಮತ್ತು ಕಡಿಮೆ ಕಾರ್ಬೋಹೈಡ್ರೇಟ್ಸ್ ಆಹಾರವನ್ನು ಸ್ವೀಕರಿಸುವ, ತೂಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಜೀವನಶೈಲಿಯ ನಿರ್ವಹಣೆಯಿಂದ ಮಧುಮೇಹದ ಉಪಶಮನವನ್ನು ಸಾಧಿಸಿಕೊಳ್ಳಬಹುದು ಎಂದು ಪ್ರಾಯೋಗಿಕವಾಗಿ ಅಮೆರಿಕನ್ ಡಯಾಬಿಟಿಸ್ ಸಂಸ್ಥೆ ಹೇಳಿದೆ.

ನಮ್ಮ ದೇಶದಲ್ಲಿಯೂ 'ಚರಕಸಂಹಿತಾ' ಮತ್ತು 'ಸುಶ್ರುತಸಂಹಿತಾ' ಎಂಬ ಪ್ರಾಚೀನ ಆಯುರ್ವೇದ ಗ್ರಂಥಗಳಲ್ಲಿ ದೇಹದಲ್ಲಿನ ರೋಗನಿರೋಧಕ ಮದ್ದುಗಳಿಗೆ ಅಗತ್ಯವಾದ ನಾಲ್ಕು ತತ್ವಗಳನ್ನು ವಿಶ್ಲೇಷಿಸಿಲಾಗಿದೆ. ಆ ತತ್ವಗಳೇ ಇವು:

- **ಆಚಾರ:** ನಾವು ದಿನನಿತ್ಯವೂ ನಡೆದುಕೊಳ್ಳುವ ರೀತಿ–ನೀತಿಗಳು.
- **ಆಹಾರ:** ದೇಹಕ್ಕೆ ಸೂಕ್ತವಾದ, ವಾತಾವರಣಕ್ಕೆ ಅಗತ್ಯವಾದ ಆಹಾರದ ಸೇವನೆ.
- **ವ್ಯಾಯಾಮ:** ದೇಹದ ಎಲ್ಲ ಅಂಗಗಳು ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳುವುದು.
- **ಯೋಗ:** ಮನಸ್ಸನ್ನು ತಲ್ಲಣಗೊಳಿಸದೆ, ಅದನ್ನು ಸದಾ ಸಮತೋಲನದಲ್ಲಿ ಇಟ್ಟುಕೊಳ್ಳುವುದು.

ಸರಿಯಾದ ಜೀವನಶೈಲಿಯನ್ನು ಅನುಸರಿಸಿದರೆ ಟೈಪ್–2 ಮಧುಮೇಹವನ್ನು ಹಿಮ್ಮೆಟ್ಟಿಸಬಹುದು. ಆದರೆ ನಮ್ಮ ಆಚಾರ–ಆಹಾರ–ವಿಹಾರಗಳು ಒಮ್ಮೆ ಏರುಪೇರಾದರೂ ಮತ್ತೆ ಮರುಕಳಿಸುತ್ತದೆ. ಉಪಶಮನವನ್ನು ಸಾಧಿಸಲು ವೈಜ್ಞಾನಿಕ ಮಾರ್ಗಗಳನ್ನೇ ಅನುಸರಿಸಬೇಕು. ಯಾವುದೇ ಚಿಕಿತ್ಸೆಗೂ ಮುನ್ನ ಮಧುಮೇಹವಿರುವ ವ್ಯಕ್ತಿ ಮತ್ತು ಅವನ ಅನುಮತಿ ಅವಶ್ಯ. ಟೈಪ್–1 ಮಧುಮೇಹದವರಿಗೆ ಉಪಶಮನ ಪ್ರಕ್ರಿಯೆ ಅನ್ವಯಿಸುವುದಿಲ್ಲ. ಏಕೆಂದರೆ, ಇನ್ಸುಲಿನ್ ಅನ್ನು ನಿಲ್ಲಿಸುವುದು ಪ್ರಾಣಾಪಾಯಕ್ಕೆ ಕಾರಣವಾಗುತ್ತದೆ.

ರಕ್ತದಲ್ಲೊಬ್ಬ ಉದ್ದಾಲಕ


ಪ್ಲೇಟ್‌ಲೇಟ್‌ಗಳನ್ನು ಜನಪ್ರಿಯಗೊಳಿಸಿದ ಶ್ರೇಯಸ್ಸು ಡೆಂಗಿ ಜ್ವರಕ್ಕೆ ಸಲ್ಲಬೇಕು ಎನ್ನಬಹುದು!

ಡಾ. ಎ. ಪಿ. ಭಟ್

ನೀವು ಆರುಣಿ(ಉದ್ದಾಲಕ)ಯ ಕಥೆಯನ್ನು ಕೇಳಿರಬಹುದು. ಅವನು ಧೌಮ್ಯಮುನಿಯ ಶಿಷ್ಯ. ಅವನು ಒಮ್ಮೆ ಕಾಡಿಗೆ ಕಟ್ಟಿಗೆಯನ್ನು ತರಲು ಹೋಗಿದ್ದಾಗ ಹೊಲದ ಕಾಲುವೆಯ ದಡ ಬಿರಿದು, ನೀರು ಹರಿದು ಪೋಲಾಗುತ್ತಿರುವುದನ್ನು ಕಂಡ. ಪಾಪ! ಆಗ ಅವನ ಬಳಿ ಹಾರೆಯಾಗಲಿ, ಪಿಕ್ಕಾಸಿಯಾಗಲಿ ಇರಲಿಲ್ಲ; ಇದ್ದಿದ್ದರೂ ಅವನು ಸಣ್ಣವನು ಅದನ್ನು ಸರಿಪಡಿಸಿ, ನೀರನ್ನು ನಿಲ್ಲಿಸಲು ಅವನಿಂದ ಆಗುತ್ತಿರಲಿಲ್ಲ. ಆದರೆ ಅವನಿಗೆ ಅಪಾಯ ಅರಿವಾಯಿತು. ಕೂಡಲೇ ಬಿರುಕು ಬಿಟ್ಟ ಕಡೆ ತಾನೇ ನೀರಿಗೆ ಅಡ್ಡ ಮಲಗಿದ. ಇತ್ತ ಬಹಳ ಹೊತ್ತು ಶಿಷ್ಯನನ್ನು ಕಾಣದೆ ಹುಡುಕಿ ಬರುವಾಗ ನೀರಲ್ಲಿ ಮಲಗಿದ್ದ ಇವನನ್ನು ಗುರುಗಳು ಕಂಡರು. ಅವರಿಗೆ ಪರಿಸ್ಥಿತಿ ಅರ್ಥವಾಯಿತು. ಉದ್ದಾಲಕನನ್ನು ಅಲ್ಲಿಂದ ಎಬ್ಬಿಸಿದರು. ಇತರ ಶಿಷ್ಯರು ಮತ್ತು ಅಗತ್ಯ ಸಲಕರಣೆಗಳೊಡನೆ ಬಂದು ಬದುವನ್ನು ಸರಿ, ಹರಿಯುತ್ತಿದ್ದ ನೀರನ್ನು ನಿಲ್ಲಿಸಿದರು. ಇದು ಆ ಕಥೆ.

ನಮ್ಮ ರಕ್ತದಲ್ಲಿ ಪ್ಲೇಟ್‌ಲೇಟ್ ಎಂಬ ಕಣ ಇದೆ. ನಮಗೆ ಗಾಯವಾಗಿ, ಅದರಿಂದ ರಕ್ತನಾಳಗಳು ಭೇದಿಸಲ್ಪಟ್ಟರೆ, ಆ ಕೂಡಲೇ ಅಲ್ಲಿ ತನ್ನ ಸಂಗಡಿಗರೊಂದಿಗೆ ತೆರಳಿ ಅಡ್ಡ ಮಲಗಿ ರಕ್ತಸ್ರಾವವನ್ನು ಕಡಿಮೆ ಮಾಡುವ ಪ್ರಯತ್ನ ಮಾಡುವುದು ಇದರ ಕೆಲಸ. ಸ್ವಲ್ಪ ಹೊತ್ತಿನಲ್ಲಿ ಅವುಗಳ ಸಂದೇಶ ಮಿದುಳಿಗೆ ಹೋಗಿ ತಲುಪಿ, ರಕ್ತಹೆಪ್ಪು ಗಟ್ಟಿಸುವ ಸಾಮಗ್ರಿಗಳು (clotting factors) ಸ್ಥಳಕ್ಕೆ ಧಾವಿಸಿ ಮುಂದಿನ ಕ್ರಮವನ್ನು ಕೈಗೊಳ್ಳುವವು. ಒಂದು ವೇಳೆ ಈ ಕಣಗಳು ನಮ್ಮ ದೇಹದಲ್ಲಿ ಬಹಳ ಕಡಿಮೆ ಆದರೆ ಆಗ ನಮ್ಮಲ್ಲಿ ರಕ್ತಸ್ರಾವ ಆಗಬಹುದು. ನಿಮಗೆ ತಿಳಿದಂತೆ ಡೆಂಗಿ ಜ್ವರದಲ್ಲಿ ಇವುಗಳ ಸಂಖ್ಯೆ ಕಡಿಮೆ ಆಗುವುದು. ಒಂದು ಅರ್ಥದಲ್ಲಿ, ಪ್ಲೇಟ್‌ಲೇಟ್‌ಗಳನ್ನು ಜನಪ್ರಿಯಗೊಳಿಸಿದ ಶ್ರೇಯಸ್ಸು ಡೆಂಗಿ ಜ್ವರಕ್ಕೆ ಸಲ್ಲಬೇಕು ಎನ್ನಬಹುದು! ಈ ಕಣಗಳು ಮೊದಲೇ ನಮ್ಮ ಶರೀರದಲ್ಲಿ ಸದ್ದು ಗದ್ದಲ ಇಲ್ಲದೆ ಕೆಲಸ ಮಾಡುತ್ತಿದ್ದವು; ಯಾರೂ ಆ ಕಡೆಗೆ ಗಮನ ಹರಿಸಿರಲಿಲ್ಲ.

ಡೆಂಗಿ ಜ್ವರದ ರೋಗಿಯ ಸಾಮಾನ್ಯ ರಕ್ತಪರೀಕ್ಷೆಯಲ್ಲಿ ಇವುಗಳ ಸಂಖ್ಯೆ ಕಡಿಮೆ ಆಗುವುದು ಕಂಡುಬಂದಾಗ ಆಗ ಅದು ಸುದ್ದಿ ಆಯಿತು. ಅಂದ ಹಾಗೆ, ಡೆಂಗಿ ಜ್ವರದಲ್ಲಿ ಜನರು ತಿಳಿದುಕೊಂಡಿರುವಂತೆ ಈ ಕಾರಣದಿಂದ ಅಪಾಯ ಕಡಿಮೆ. ಡೆಂಗಿ ಶಾಕ್ ಎಂಬುದೊಂದಿದೆ. ಅದು ಅಪಾಯ ತರುವುದು. ಪ್ಲೇಟ್‌ಲೇಟ್ ಹೆಚ್ಚಿಸಲು ಕಿವಿಹಣ್ಣು, ಪಪ್ಪಾಯಿಹಣ್ಣು ಮತ್ತು ಅದರ ಎಲೆಗಳನ್ನು ತಿನ್ನಬೇಕಿಲ್ಲ. ಡೆಂಗಿ ಕಾಯಿಲೆಯಲ್ಲಿ ತನ್ನಿಂದ ತಾನೇ ಪ್ಲೇಟ್‌ಲೇಟ್‌ಗಳ ಪ್ರಮಾಣ ಸರಿ ಆಗುವುದು. ಯಾವುದೇ ರಕ್ತಸ್ರಾವ ಇಲ್ಲದಿದ್ದರೆ ಮಿಲಿಲೀಟರ್‌ಗೆ ಹತ್ತು ಸಾವಿರಕ್ಕಿಂತ ಪ್ಲೇಟ್‌ಲೇಟ್‌ಗಳ ಸಂಖ್ಯೆ ಕಡಿಮೆ ಇಲ್ಲದಿದ್ದರೆ ಪ್ಲೇಟ್‌ಲೇಟ್‌ಗಳ ಮರುಪೂರಣವನ್ನು ಮಾಡಬಾರದು ಎಂದು ಜಾಗತಿಕ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ ಹೇಳುತ್ತದೆ. ಆರೋಗ್ಯವಂತ ಮನುಷ್ಯನ ರಕ್ತದಲ್ಲಿ ಪ್ಲೇಟ್‌ಲೇಟ್‌ಗಳು ಒಂದು ಮಿಲಿಲೀಟರ್‌ಗೆ 1.5 ಲಕ್ಷದಿಂದ 4.5 ಲಕ್ಷದಷ್ಟು ಇರುವುದು. ಪ್ಲೇಟ್‌ಲೇಟ್‌ಗಳ ಕಣಗಳು ಕೆಂಪು ಮತ್ತು ಬಿಳಿರಕ್ತ ಕಣಗಳಂತೆ ಅಸ್ಥಿಮಜ್ಜೆಯಲ್ಲಿ ಉತ್ಪಾದನೆ ಆಗಿ 7ರಿಂದ 10 ದಿನಗಳ ತಮ್ಮ ಆಯುಸ್ಸು ಮುಗಿದ ಮೇಲೆ ಗುಲ್ಮ(spleen)ದಲ್ಲಿ ನಾಶ ಹೊಂದುವವು. ಡೆಂಗಿ ಅಲ್ಲದೆ ಇತರ ಸೋಂಕುಕಾಯಿಲೆಗಳಾದ ಮಲೇರಿಯಾ, ಟೈಪಸ್ ಸಾಮಾನ್ಯ ವೈರಲ್ ಸೋಂಕು, ಅಸ್ಥಿಮಜ್ಜೆಯನ್ನು ವ್ಯಾಪಿಸುವ ಕಾನ್ಸರ್ ಮತ್ತು ಅದರ ಚಿಕಿತ್ಸೆ, ಮದ್ಯಪಾನ, ವಿಟಮಿನ್ ಬಿ 12 ಕೊರತೆ ಕೂಡ ಪ್ಲೇಟ್‌ಲೇಟ್‌ಗಳ ಕೊರತೆಗೆ ಕಾರಣಗಳಾಗಬಹುದು. 'ಐ ಟಿ ಪಿ' ಎಂಬ ರೋಗದಲ್ಲಿ ಸರಿಯಾಗಿ ಉತ್ಪತ್ತಿ ಆದಂತಹ ಕಣಗಳನ್ನು ದೇಹದ ರೋಗನಿರೋಧಕ ವ್ಯವಸ್ಥೆಯೇ ಗುರಿ ತಪ್ಪಿ ಅತಿಯಾಗಿ ನಶಿಸುವ ಕಾರಣ ಇವುಗಳ ಸಂಖ್ಯೆ ಕಡಿಮೆ ಆಗುವುದು.



ಈ ಕಣಗಳು ಕೆಲವೊಮ್ಮೆ ಶರೀರದಲ್ಲಿ ರೋಗಗಳು ಉಂಟಾಗುವ ಕ್ರಿಯೆಯಲ್ಲಿ ಭಾಗಿಯಾಗುವುದೂ ಇದೆ. ಹೃದಯ ಮತ್ತು ಮಿದುಳಿನ ರಕ್ತನಾಳಗಳಲ್ಲಿ ಕೊಲೆಸ್ಟ್ರಾಲ್ ಶೇಖರಣೆ ಆದಾಗ ಪ್ಲೇಟ್‌ಲೇಟ್‌ಗಳ ಕಣಗಳು ಅಲ್ಲಿ ಶೇಖರವಾಗಿ, ರಕ್ತವು ಹೆಪ್ಪುಗಟ್ಟುವಂತೆ ಮಾಡುತ್ತವೆ. ಇದರಿಂದ ಸ್ಥಳೀಯ ರಕ್ತ ಸರಬರಾಜು ನಿಂತು, ಆ ವ್ಯಕ್ತಿಗೆ ಹೃದಯಾಘಾತ ಮತ್ತು 'ಸ್ಟ್ರೋಕ್' (ಮಿದುಳಿನ ಆಘಾತ) ಸಂಭವಿಸಬಹುದು. ಇಂತಹ ಸಂದರ್ಭದಲ್ಲಿ ಪ್ಲೇಟ್‌ಲೇಟ್‌ಗಳ ನಿರೋಧಕಗಳಾದ ಆಸ್ಪಿರಿನ್‌ನಂತಹ ಔಷಧಗಳನ್ನು ಕೊಡಬೇಕಾಗುತ್ತದೆ. ❖

ಎಸ್ಸೆಸ್ಸೆಲ್ಸಿ– ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ–10 ವೃತ್ತಗಳು


ಅಭ್ಯಾಸ 10.2

3. 'O' ವೃತ್ತಕೇಂದ್ರವಿರುವ ಒಂದು ವೃತ್ತಕ್ಕೆ P ಬಿಂದುವಿನಿಂದ ಎಳೆದ ಸ್ಪರ್ಶಕಗಳಾದ PA ಮತ್ತು PB ಗಳ ನಡುವಿನ ಕೋನ 80^0ಆದರೆ POA ದ ಅಳತೆಯು

A) 50^0 B) 60^0
C) 70^0 D) 80^0

ಉತ್ತರ:– ಎ) 50^0

ವಿವರಣೆ:– ಸಮಸ್ಯೆ ಆಧಾರದ ಮೇಲೆ ರೇಖಾ ನಕ್ಷೆಯನ್ನು ಬರೆಯಿರಿ



ಮೇಲಿನ ರೇಖಾನಕ್ಷೆಯಲ್ಲಿ OA ಮತ್ತು OB ಇವು ತ್ರಿಜ್ಯಗಳಾಗಿವೆ, PA, ಮತ್ತು PB ಸ್ಪರ್ಶಕಗಳಾಗಿವೆ.

i.e., OA ⊥ PA ಮತ್ತು OB ⊥ PB.

ಹೀಗಾಗಿ, ∠OBP = ∠OAP = 90°

ಹೀಗಾಗಿ AOBP,ಚಕ್ರೀಯ ಚತುರ್ಭುಜವಾಗಿದೆ,

ಹೀಗಾಗಿ ∠AOB+∠OAP+∠OBP+∠APB = 360°

∠AOB + 260° = 360°

∠AOB = 100°

△OPB ಮತ್ತು △OPA ದಲ್ಲಿ ಹೀಗಾಗಿ

AP = BP (ಬಾಹ್ಯ ಒಂದೇ ಬಿಂದುವಿನಿಂದ ಎಳೆದ ಸ್ಪರ್ಶಕಗಳು ಸಮವಾಗಿರುತ್ತವೆ)

OA = OB (ವೃತ್ತದ ತ್ರಿಜ್ಯಗಳು)

OP = OP

ತ್ರಿಭುಜಗಳಾದOPB ಮತ್ತು OPA ಒಂದೇ ಸಮನಾಗಿವೆ

∴ △OPB ≅ △OPA

ಹೀಗಾಗಿ ∠POB = ∠POA

∠AOB = ∠POA+∠POB


2 (∠POA) = ∠AOB

ಹೀಗಾಗಿ ಇದರಲ್ಲಿ ಬೆಲೆಯನ್ನು ಹಾಕಿದಾಗ

=∠POA = 100°/2 = 50°

4) ಒಂದು ವೃತ್ತಕ್ಕೆ ವ್ಯಾಸದ ಅಂತ್ಯ ಬಿಂದುವಿನಲ್ಲಿ ಎಳೆದ ಸ್ಪರ್ಶಕಗಳು ಪರಸ್ಪರ ಸಮಾಂತರವಾಗಿವೆ ಎಂದು ಸಾಧಿಸಿ.

ಉತ್ತರ:–



AB ಯು ವೃತ್ತದ ವ್ಯಾಸವಾಗಿದ್ದು PQ ಮತ್ತು RS ಗಳು A ಮತ್ತು B ಬಿಂದುಗಳಲ್ಲಿ ಎಳೆದ ಸ್ಪರ್ಶಕಗಳಾಗಿವೆ.

ತ್ರಿಜ್ಯಗಳು ಸ್ಪರ್ಶಕಕ್ಕೆ ಲಂಬವಾಗಿರುತ್ತವೆ


ಹೀಗಾಗಿ ∠OAP = ∠OAQ = ∠OBR = ∠OBS = 90°

ಮತ್ತು, ∠OBR = ∠OAQ and ∠OBS = ∠OAP

ಹೀಗಾಗಿ PQ ಮತ್ತು RS ಗಳು ಪರಸ್ಪರ ಸಮಾಂತರವಾಗಿವೆ

5) ಸ್ಪರ್ಶ ಬಿಂದುವಿನಲ್ಲಿ ಸ್ಪರ್ಶಕಕ್ಕೆ ಎಳೆದ ಲಂಬವು ವೃತ್ತದ ಕೇಂದ್ರದ ಮೂಲಕ ಹಾದು ಹೋಗುತ್ತದೆ ಎಂದು ಸಾಧಿಸಿ.

ಪರಿಹಾರ:–



ಮೇಲಿನ ವೃತ್ತಕ್ಕೆ O ಕೇಂದ್ರವಾಗಿದೆ. PR ವೃತ್ತ ಸ್ಪರ್ಶಕವಾಗಿದೆ, ಇದು P ಬಿಂದುವಿನಲ್ಲಿ ವೃತ್ತವನ್ನು ಸ್ಪರ್ಶಿಸಿದೆ

QP ಯನ್ನು RP ಗೆ ಲಂಬವಾಗುವಂತೆ ರಚನೆ ಮಾಡಿ

ಆದ್ದರಿಂದ QP ⊥ RP

∠OPR = 90° (radius ⊥ tangent)

, ∠QPR = 90° (ದತ್ತ)


∴ ∠OPR = ∠QPR

ಮೇಲೆ ತಿಳಿಸಿದ ಅಂಶಗಳು ಸಾಧ್ಯವಾಗುವುದು QP ಯು O ಕೇಂದ್ರದ ಮೂಲಕ ಹಾದುಹೋದಾಗ ಮಾತ್ರ ಸಾಧ್ಯ ಆದ್ದರಿಂದ

ಸ್ಪರ್ಶ ಬಿಂದುವಿನಲ್ಲಿ ಸ್ಪರ್ಶಕಕ್ಕೆ ಎಳೆದ ಲಂಬವು ವೃತ್ತದ ಕೇಂದ್ರದ ಮೂಲಕ ಹಾದು ಹೋಗುತ್ತದೆ ಎಂದು ಸಾಧಿಸಲಾಗಿದೆ.

6. ವೃತ್ತ ಕೇಂದ್ರದಿಂದ 5cm ದೂರದಲ್ಲಿರುವ A ಬಿಂದುವಿನಿಂದ ಎಳೆದ ಸ್ಪರ್ಶಕದ ಉದ್ದವು 4 cm ಇದೆ. ವೃತ್ತದ ತ್ರಿಜ್ಯದ ಉದ್ದವನ್ನು ಕಂಡುಹಿಡಿಯಿರಿ.

ಪರಿಹಾರ:– ಸಮಸ್ಯೆಯನ್ನು ಆಧರಿಸಿ ಕೆಳಗಿನಂತೆ ರೇಖಾ ನಕ್ಷೆಯನ್ನು ಬರೆಯಿರಿ.



ಇಲ್ಲಿ AB ಯು ವೃತ್ತ ಸ್ಪರ್ಶಕವಾಗಿದೆ, ಇದು B ಬಿಂದುವಿನಲ್ಲಿ ವೃತ್ತಕ್ಕೆ ಸ್ಪರ್ಶಿಸಿದೆ

(ಮುಂದುವರಿಯುವುದು).

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

MOVING CHARGES AND MAGNETISM

27. How should the voltmeter be connected in the circuit?

Ans:- A voltmeter is always connected in parallel to the circuit.

28. What is the resistance that is to be connected in series to the galvanometer to make it a voltmeter?

Ans:- The resistance is equal to –

$$R = \frac{V}{I_g} - R_G$$

where, R is the resistance connected to the galvanometer in series to it.

R_G is the resistance of a galvanometer,

I_g is the current flowing in the circuit corresponding to which voltmeter gives the full scale deflection.

V volt is the potential difference to be measured by the voltmeter.

29. What is the Effective resistance of the Voltmeter?

Ans:- The Effective resistance of the Voltmeter is given by - $R' = R + R_G$

where, R is the resistance connected to the galvanometer in series to it.

R_G is the resistance of a galvanometer,

Thus voltmeter is a high resistance device.

Multiple choice questions:-

1. A charged particle is moving in a uniform magnetic field, then –

a) its momentum changes but the total energy remains the same.
b) both momentum and the total energy remains the same.
c) both change.
d) total energy changes but the momentum remains same

2. A charged particle is moving in a magnetic field has increased in its velocity, then its radius of the circle

a) Decreases b) Increases
c) Remains the same d) Becomes half

3. An electron having charge e and mass m is moving in a uniform electric field E. Its acceleration will be –

a) $\frac{e^2}{m}$ b) $\frac{Ee^2}{m}$
c) $\frac{Ee}{m}$ d) $\frac{mE}{e}$

4. The expression for magnetic induction inside a solenoid of length L, carrying a current I and having N number of turns is –

a) $\left(\frac{\mu_0}{4\pi}\right)\left(\frac{N}{L}\right) I$
b) $\mu_0 NLI$
c) $\left(\frac{\mu_0}{4\pi}\right) NL\, I$
d) $\mu_0 \left(\frac{N}{L}\right) I$

5. A circular current loop of magnetic moment M is in an arbitrary orientation in an external magnetic field B. The work done to rotate the loop by 30^0 about an axis perpendicular to its plane is -

a) MB b) $\sqrt{3}\frac{MB}{2}$
c) $\frac{MB}{2}$ d) zero

6. An electron is projected with uniform velocity along the axis of a current carrying long solenoid. Which of the following is true?

a) The electron will be accelerated along the axis.
b) The electron path will be circular about the axis.
c) The electron will experience a force at 45^0 to the axis and hence execute a helical path.
d) The electron will continue to move with uniform velocity along the axis of the solenoid.

7. In a cyclotron, a charged particle

a) undergoes acceleration all the time.
b) speeds up between the dees because of the magnetic field.
c) speeds up in a dee.
d) slows down within a dee and speeds up between dees.

8. Under the influence of a uniform magnetic field, a charged particle is moving in a circle of radius R with constant speed *v*. The time period of the motion –

a) depends on *v* and not R
b) depends on both R and *v*
c) is independent of both R and *v*
d) depends on R and not on *v*

9. In a mass spectrometer used for measuring the masses of ions, the ions are initially accelerated by an electric potential V and then made to describe semicircular paths of radius R using a magnetic field B. If V and B are kept constant, the ratio $\left(\frac{\text{Charge on the ion}}{\text{mass of the ion}}\right)$ **will be proportional to –**

a) $\frac{1}{R}$ b) $\frac{1}{R^2}$
c) R^2 d) R

10. A positively charged particle moving due east enters a region of uniform magnetic field directed vertically upward. The particle will

(Contd.....)

ವಿಧಾನಸಭಾ ಕ್ಷೇತ್ರದಾದ್ಯಂತ ಬೆಟ್ಟಿಂಗ್ ಭರಾಟೆ • ಇಬ್ಬರ ಅಭ್ಯರ್ಥಿಗಳ ಪರವೂ 'ಅದೃಷ್ಟ' ಪರೀಕ್ಷೆಗೊಡ್ಡಿದ ಬಾಜಿದಾರರು

ಚನ್ನಪಟ್ಟಣ: ಜಮೀನು, ಕುರಿ, ಕೋಳಿ ಬಾಜಿಗೆ

• ಓದೇಶ ಸಕಲೇಶಪುರ


ರಾಮನಗರ: ಚನ್ನಪಟ್ಟಣ ಉಪ ಚುನಾವಣೆ ಫಲಿತಾಂಶಕ್ಕೆ ಇನ್ನು ನಾಲ್ಕು ದಿನವಷ್ಟೇ (ನ. 23ಕ್ಕೆ ಎಣಿಕೆ) ಬಾಕಿ ಇದ್ದು ಬೆಟ್ಟಿಂಗ್ ಭರಾಟೆ ಜೋರಾಗಿದೆ.

ಸ್ಥಳೀಯವಾಗಿ ಅಷ್ಟೇ ಅಲ್ಲದೆ ಹೊರಗಡೆಯೂ ಹೈವೋಲ್ಟೇಜ್ ಕಣವಾಗಿರುವ ಕ್ಷೇತ್ರದ ಫಲಿತಾಂಶದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಸದ್ಯದ ಬೆಟ್ಟಿಂಗ್ ಟ್ರೆಂಡ್ ಪ್ರಕಾರ ಸ್ಥಳೀಯ ಬುಕ್ಕಿಗಳಿಗೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಹಾಗೂ ಹೊರಗಿನವರಿಗೆ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಫೇವರಿಟ್ ಆಗಿದ್ದಾರೆ.

'ಸಮಬಲದ ಪೈಪೋಟಿಯಲ್ಲಿ ಗೆಲುವಿನ ಅಂದಾಜು ಸವಾಲಾಗಿದೆ' ಎಂಬ ಮಾತುಗಳು ಕೇಳಿ ಬರುತ್ತಿವೆ. ಆದರೂ ಬೆಟ್ಟಿಂಗ್ ಪ್ರಿಯರು ರಾಜಕೀಯ, ಮಾಧ್ಯಮ ಹಾಗೂ ಸಮೀಕ್ಷೆ ಮೂಲಗಳನ್ನು ಆಧರಿಸಿ ಅಭ್ಯರ್ಥಿಗಳ 'ಗೆಲುವಿನ ಅದೃಷ್ಟದ


ನಿಖಿಲ್ ಕುಮಾರಸ್ವಾಮಿ


ಸಿ.ಪಿ. ಯೋಗೇಶ್ವರ್

ಮೇಲೆ ಕೋಟಿವರೆಗೆ ಹೂಡಿಕೆ ಮಾಡುತ್ತಿದ್ದಾರೆ. ಕೆಲವೆಡೆ ಜಮೀನು, ಕುರಿ, ಕೋಳಿ ಮಟ್ಟಕ್ಕೂ ಬಾಜಿ ಕಟ್ಟಲಾಗುತ್ತಿದೆ.

ಲೆಕ್ಕಾಚಾರ ಬದಲು: ಮತದಾನ ನಡೆದ ಮಾರನೇ ದಿನ ಯೋಗೇಶ್ವರ್, 'ಪ್ರಚಾರದ ವೇಳೆ ಸಚಿವ ಜಮೀರ್ ಅಹಮದ್ ಖಾನ್, ಎಚ್.ಡಿ. ಕುಮಾರಸ್ವಾಮಿ ಮತ್ತು ಎಚ್.ಡಿ. ದೇವೇಗೌಡರ ಕುರಿತು ಆಡಿದ ಮಾತುಗಳಿಂದ ಲಾಭದಷ್ಟೇ ನಷ್ಟವೂ ಆಗಿದೆ. ನಿಖಿಲ್ ಮತ್ತು ನನ್ನ ಮಧ್ಯೆ ಸಮಬಲದ ಪೈಪೋಟಿ ಇದ್ದು, ಯಾರೇ ಗೆದ್ದರೂ ಕೂದಲೆಳೆಯಷ್ಟೇ ಅಂತರವಿರಲಿದೆ' ಎಂದಿದ್ದರು.

'ಯೋಗೇಶ್ವರ್ ಈ ಮಾತು ಬೆಟ್ಟಿಂಗ್ ಲೆಕ್ಕಾಚಾರ ಬದಲಿಸಿರುವುದು ನಿಜ. 'ಕೈ' ಅಭ್ಯರ್ಥಿ ಫಲಿತಾಂಶಕ್ಕೆ ಮುಂಚೆಯೇ ಸೋಲು ಒಪ್ಪಿಕೊಂಡಿದ್ದಾರೆ ಎಂಬ ಸಂದೇಶವನ್ನು ಅವರ ಮಾತುಗಳು ಹೊರಗಿನವರಿಗೆ ನೀಡಿವೆ. ಹಾಗಾಗಿ ಮಂಡ್ಯ, ಮೈಸೂರು, ಹಾಸನ, ಬೆಂಗಳೂರು ಸೇರಿದಂತೆ ಹೊರಗಿನ ಹೆಚ್ಚಿನವರು ನಿಖಿಲ್ ಪರ ಬೆಟ್ಟಿಂಗ್ ಕಟ್ಟುತ್ತಿದ್ದಾರೆ' ಎಂದು ಸ್ಥಳೀಯ ರಾಜಕೀಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅತೀವ ವಿಶ್ವಾಸ: 'ಉಪ ಚುನಾವಣೆ ಕುರಿತು ಯೋಗೇಶ್ವರ್ ಮಾತುಗಳಲ್ಲಿರುವ ವಾಸ್ತವ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ, ಹಿಂದಿನ ಚುನಾವಣೆಗಳಲ್ಲೂ ಅವರು ಸೋಲು ಒಪ್ಪಿಕೊಂಡಂತಹ ಮಾತುಗಳನ್ನಾಡಿದ್ದರು. ಅವರ ಬೆಂಬಲಿಗರು ಯೋಗೇಶ್ವರ್ ಗೆಲ್ಲುತ್ತಾರೆಂಬ ಅತೀವ ವಿಶ್ವಾಸದಲ್ಲಿ ಬೆಟ್ಟಿಂಗ್ ಕಟ್ಟುತ್ತಿದ್ದಾರೆ' ಎನ್ನುತ್ತಾರೆ ಬೆಟ್ಟಿಂಗ್ ಪ್ರಿಯರೊಬ್ಬರು.

ಜಾತಿವಾರು ಲೆಕ್ಕಾಚಾರ: ಕ್ಷೇತ್ರದಲ್ಲಿ ಜಾತಿವಾರು ಮತ ಹಂಚಿಕೆಯ ಚರ್ಚೆ ಬಿರುಸುಗೊಂಡಿದೆ. ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ ಜಾತಿವಾರು ಮತ ಹಂಚಿಕೆಯ ಪಟ್ಟಿ ಹರಿದಾಡುತ್ತಿದೆ. ಯಾವ ಬೂತ್, ಮತಗಟ್ಟೆಯಲ್ಲಿ ಯಾರಿಗೆ ಎಷ್ಟು ಮತ ಬಂದಿವೆ ಎಂಬ ಪಟ್ಟಿಗಳು ಹರಿದಾಡುತ್ತಿವೆ. ಇದನ್ನು ಆಧರಿಸಿಯೇ ಅಭ್ಯರ್ಥಿಗಳ ಗೆಲುವನ್ನು ತೀರ್ಮಾನಿಸಿ ಹಲವರು ಬೆಟ್ಟಿಂಗ್ ಕಟ್ಟುತ್ತಿದ್ದಾರೆ ಎನ್ನುತ್ತಾರೆ ಸ್ಥಳೀಯ ರಾಜಕೀಯ ಕಾರ್ಯಕರ್ತರು.

ಬೆಟ್ಟಿಂಗ್‌ನಲ್ಲಿ ತೊಡಗಿರುವ ಕೆಲವರು ಬೆಟ್ ಕಟ್ಟುವ ಮೊದಲು ಮಾಧ್ಯಮ ಪ್ರತಿನಿಧಿಗಳು, ರಾಜಕೀಯ ವಿಶ್ಲೇಷಕರು, ರಾಜಕೀಯ ಕಾರ್ಯಕರ್ತರಿಗೆ ಫೋನಾಯಿಸಿ ಯಾರು ಗೆಲ್ಲಬಹುದು ಎಂಬ ಟಿಪ್ಸ್ ಪಡೆಯುತ್ತಿದ್ದಾರೆ.

ನಿಖಿಲ್ ಪರ ಹೆಚ್ಚಿದ ಟ್ರೆಂಡ್

'ಮತದಾನದ ದಿನ 'ಕೈ' ಅಭ್ಯರ್ಥಿ ಮುಖದಲ್ಲಿ ಅಷ್ಟೊಂದು ಕಳೆ ಇರಲಿಲ್ಲ. ನಂತರದಲ್ಲೂ ಯೋಗೇಶ್ವರ್ ಅವರಲ್ಲಿ ಗೆಲುವಿನ ವಿಶ್ವಾಸ ಎದ್ದು ಕಾಣುತ್ತಿಲ್ಲ. ಆದರೆ, ನಿಖಿಲ್ ಮೊದಲ ದಿನದಿಂದ ಇಲ್ಲಿಯವರೆಗೆ ಗೆದ್ದೇ ಗೆಲ್ಲುತ್ತೇನೆಂಬ ವಿಶ್ವಾಸದಲ್ಲಿದ್ದಾರೆ. ಮಾತುಗಳಲ್ಲೂ ಅದೇ ಭರವಸೆ ಇದೆ. ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಕೆಲವರು ಫಲಿತಾಂಶದ ಕುರಿತು ಹರಿಬಿಟ್ಟಿರುವ ಬಸವ ಭವಿಷ್ಯ, ಗಿಣಿ ಭವಿಷ್ಯದಲ್ಲೂ ನಿಖಿಲ್ ಹೆಸರೇ ಮೊದಲ ಸ್ಥಾನದಲ್ಲಿದೆ. ಕೆಲ ಮತಗಟ್ಟೆ ಸಮೀಕ್ಷೆಯಲ್ಲೂ ನಿಖಿಲ್ ಮುಂದಿದ್ದಾರೆ. ಶಾಸ್ತ್ರ–ಸಮೀಕ್ಷೆ ನಂಬುವವರು ನಿಖಿಲ್ ಪರವಾಗಿಯೇ ಬೆಟ್ಟಿಂಗ್ ಹಾಕುತ್ತಿದ್ದಾರೆ. ಸದ್ಯ ನಿಖಿಲ್ ಅವರೇ ಟ್ರೆಂಡಿಂಗ್‌ನಲ್ಲಿದ್ದಾರೆ' ಎನ್ನುತ್ತಾರೆ ಬುಕ್ಕಿಯೊಬ್ಬರು.

ಮೂವರಿಗೂ ತಲಾ ಒಂದೊಂದು!

ಉಪ ಚುನಾವಣೆ ನಡೆಯುತ್ತಿರುವ ಮೂರು ಕ್ಷೇತ್ರಗಳಲ್ಲಿ ಪ್ರಮುಖ ಮೂರು ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ತಲಾ ಒಂದೊಂದು ಕ್ಷೇತ್ರ ದೊರೆಯಲಿವೆ ಎಂಬ ವಿಶ್ಲೇಷಣೆ ಜೋರಾಗಿದೆ. ಈ ವಿಶ್ಲೇಷಣೆ ಆಧಾರದ ಮೇಲೆಯೂ ಕೆಲವರು ಬೆಟ್ಟಿಂಗ್ ನಡೆಸುತ್ತಿದ್ದಾರೆ.

ಈ ಮೊದಲು ಯಾವ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೋ ಈಗಲೂ ಅದೇ ಪಕ್ಷದ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಇದರ ಆಧಾರದ ಮೇಲೆ ಬೆಟ್ಟಿಂಗ್ ನಡೆಯುತ್ತಿದೆ.

'ನುಸುಳುಕೋರರಿಂದ ಅಕ್ರಮ ಚಟುವಟಿಕೆ'

ರಾಜಮಹಲ್ (ಸಾಹೀಬ್‌ಗಂಜ್) (ಪಿಟಿಐ): ಜೆಎಂಎಂ ಮೈತ್ರಿಕೂಟದ ಆಡಳಿತಾವಧಿಯಲ್ಲಿ ರೋಹಿಂಗ್ಯಾ ಮತ್ತು ಬಾಂಗ್ಲಾದೇಶದ ನುಸುಳುಕೋರರಿಂದ ಜಾರ್ಖಂಡ್ ಅಕ್ರಮ ಚಟುವಟಿಕೆಗಳ ತಾಣವಾಗಿ ಪರಿವರ್ತನೆಯಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.

'ನ.23ರ ಚುನಾವಣಾ ಫಲಿತಾಂಶದ ಬಳಿಕ ಈ ನುಸುಳುಕೋರರನ್ನು ಜಾರ್ಖಂಡ್‌ನಿಂದ ಹೊರಹಾಕಲಾಗುವುದು. ಜನರ ಹಣ ಲೂಟಿ ಮಾಡಿದ ಜೆಎಂಎಂ ನೇತೃತ್ವದ ನಾಯಕರನ್ನು ಲೂಟಿಗೆ ಹೊಣೆ ಮಾಡಲಾಗುವುದು ಎಂದು ಹೇಳಿದರು.

ಸಾಹಿಬ್‌ಗಂಜ್‌ನ ರಾಜಮಹಲ್‌ನಲ್ಲಿ ರ‍್ಯಾಲಿ ನಡೆಸಿದ ಆದಿತ್ಯನಾಥ ಅವರು, 'ಜಾರ್ಖಂಡ್‌ನಲ್ಲಿ ಎನ್‌ಡಿಎ ಸರ್ಕಾರ ರಚನೆಯಾಗುತ್ತಿದ್ದಂತೆ ನುಸುಳುಕೋರರನ್ನು ಓಡಿಸಲಾಗುವುದು' ಎಂದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸಮೃದ್ಧ ಜಾರ್ಖಂಡ್‌ನ ಕನಸು ಕಂಡಿದ್ದರು.

ಜೆಎಂಎಂ–ಆರ್‌ಜೆಡಿ–ಕಾಂಗ್ರೆಸ್ ಮೈತ್ರಿಕೂಟ ಆ ಕನಸು ನನಸಾಗದಂತೆ ಮಾಡುತ್ತಿದೆ. ಸಾಕಷ್ಟು ನೈಸರ್ಗಿಕ ಸಂಪನ್ಮೂಲಗಳಿದ್ದರೂ ಜನರು ಬಡವರಾಗಿಯೇ ಉಳಿದಿದ್ದಾರೆ. ಎನ್‌ಡಿಎ ಸರ್ಕಾರದಲ್ಲಿ ಕನಿಷ್ಠ 1.5 ಲಕ್ಷ ಯುವಜನರಿಗೆ ಉದ್ಯೋಗ ನೀಡಲಾಗುವುದು ಎಂದು ಭರವಸೆ ನೀಡಿದರು.

ಜಾರ್ಖಂಡ್‌ನಲ್ಲಿ ಮೂರನೇ ಎರಡರಷ್ಟು ಬಹುಮತದಿಂದ ಎನ್‌ಡಿಎ ಸರ್ಕಾರ ರಚಿಸಲಿದೆ ಎಂಬುದು ಸದ್ಯದ ಬೆಳವಣಿಗೆಯಿಂದ ತಿಳಿಯುತ್ತಿದೆ ಎಂದು ಹೇಳಿದರು.

'ಬುಲ್ಡೋಜರ್ ಸಿದ್ಧ'

ಜೆಎಂಎಂ ನೇತೃತ್ವದ ಮೈತ್ರಿಕೂಟವು ನೈಸರ್ಗಿಕ ಸಂಪನ್ಮೂಲ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಕೇಂದ್ರದ ಅನುದಾನವನ್ನು ಲೂಟಿ ಮಾಡುವ ಮೂಲಕ 'ದರೋಡೆಯಲ್ಲಿ ನಿರತವಾಗಿದೆ' ಎಂದು ಯೋಗಿ ಆದಿತ್ಯನಾಥ ಹೇಳಿದರು.


ಯೋಗಿ ಆದಿತ್ಯನಾಥ

'ಅಯೋಧ್ಯೆಯ ರಾಮಮಂದಿರದ ನಂತರ ಮಥುರಾದಲ್ಲಿ ಕೃಷ್ಣನ ದೇವಾಲಯ ನಿರ್ಮಿಸುವ ಸಮಯ ಬಂದಿದೆ. ಈಗ ಜೆಎಂಎಂ ನೇತೃತ್ವದ ಸರ್ಕಾರವು ಲೂಟಿ ಮಾಡಿದ ಹಣವನ್ನು ಮರಳಿ ಪಡೆಯಲು ಬುಲ್ಡೋಜರ್ ಸಿದ್ಧವಾಗಿದೆ' ಎಂದರು.

ಜಾಮ್‌ತಾರಾದಲ್ಲಿ ಮಾತನಾಡಿದ ಅವರು, 'ಭೂ ಜಿಹಾದ್' (ಲ್ಯಾಂಡ್ ಜಿಹಾದ್), 'ಲವ್ ಜಿಹಾದ್' ಮಾಡುವ ನುಸುಳುಕೋರರಿಗೆ ಜೆಎಂಎಂ ನೇತೃತ್ವದ ಸರ್ಕಾರ ಬೆಂಬಲ ನೀಡುತ್ತಿದೆ. ಎನ್‌ಡಿಎ ಅಧಿಕಾರಕ್ಕೆ ಬಂದರೆ ಅಂಥ ಅಂತಹ ಶಕ್ತಿಗಳನ್ನು ಬಿಡುವುದಿಲ್ಲ' ಎಂದರು.

ಗುತ್ತಿಗೆಯಲ್ಲಿ ಅಲ್ಪಸಂಖ್ಯಾತರಿಗೆ ಶೇ 4 ಮೀಸಲಾತಿ: ನಡ್ಡಾ

ನವದೆಹಲಿ (ಪಿಟಿಐ): ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡುವಂತಿಲ್ಲ ಎಂದು ಡಾ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಬರೆದಿದ್ದಾರೆ. ಆದರೆ, ಕರ್ನಾಟಕದಲ್ಲಿ ಖಾಸಗಿ ಗುತ್ತಿಗೆದಾರರಿಗೆ ಟೆಂಡರ್ ಒದಗಿಸುವಾಗ ಶೇ 4ರಷ್ಟು ಮೀಸಲಾತಿಯನ್ನು ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ನೀಡುತ್ತಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಹೇಳಿದರು.


ಜೆ.ಪಿ ನಡ್ಡಾ

ನವಿ ಮುಂಬೈನಲ್ಲಿ ಚುನಾವಣಾ ರ‍್ಯಾಲಿ ವೇಳೆ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನದ ವಿಷಯದಲ್ಲಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಇಂದು ರಾಹುಲ್ ಗಾಂಧಿ ಸಂವಿಧಾನದ ಪುಸ್ತಕದೊಂದಿಗೆ ತಿರುಗಾಡುತ್ತಿದ್ದಾರೆ. ಆದರೆ, ಅವರು ಸಂವಿಧಾನವನ್ನೇ ಓದಿಲ್ಲ' ಎಂದರು.

ಎನ್‌ಡಿಎ ಹಾಗೂ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಯು ಮಹಾರಾಷ್ಟ್ರದಲ್ಲಿ ಹೊಸ ಸಂಸ್ಕೃತಿ ಹಾಗೂ ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ರಾಜಕೀಯದ ಹೊಸ ವ್ಯಾಖ್ಯಾನ ಬರೆದಿದೆ. 'ನಾವು ಜನರಿಗೆ ಉತ್ತರದಾಯಿತ್ವದ ಸರ್ಕಾರವನ್ನು ನೀಡುತ್ತಿದ್ದೇವೆ. ನಾವು ಹೇಳಿದ್ದನ್ನು ಮಾಡುವಂಥ ರಾಜಕೀಯ ಮಾಡುತ್ತಿದ್ದೇವೆ. ನಾವು ಹೇಳದೇ ಇರುವುದನ್ನೂ ಮಾಡಿದ್ದೇವೆ' ಎಂದು ನಡ್ಡಾ ಹೇಳಿದರು.

'ಭಾರತದ ಆರ್ಥಿಕತೆಯು ಹತ್ತು ವರ್ಷಗಳ ಹಿಂದೆ 12ನೇ ಅತಿ ದೊಡ್ಡ ಆರ್ಥಿಕತೆ ಎನಿಸಿತ್ತು. ಮೋದಿ ಅವರು ಅದನ್ನೀಗ ಐದನೇ ಸ್ಥಾನಕ್ಕೆ ತಂದಿದ್ದಾರೆ. ನೀವು ಮಹಾರಾಷ್ಟ್ರದಲ್ಲಿ ಮಹಾಯುತಿ ಸರ್ಕಾರವನ್ನು ರಚಿಸಲು ಅನುವು ಮಾಡಿಕೊಟ್ಟರೆ ಭಾರತವು ವಿಶ್ವದಲ್ಲೇ ಮೂರನೇ ಅತಿದೊಡ್ಡ ಆರ್ಥಿಕತೆ ಹೊಂದಿದ ರಾಷ್ಟ್ರವಾಗಲಿದೆ' ಎಂದು ಹೇಳಿದರು.

'ಬಾಳಾಸಾಹೇಬ್ ಠಾಕ್ರೆ ಅವರು ನನ್ನ ಪಕ್ಷವನ್ನು ವಿಸರ್ಜಿಸುತ್ತೇನೆಯೇ ಹೊರತು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದರು. ಆದರೆ, ಇಂದು ಉದ್ಧವ್ ಠಾಕ್ರೆ ಅವರು ಅಧಿಕಾರಕ್ಕಾಗಿ ಕಾಂಗ್ರೆಸ್ ಮಡಿಲಿನಲ್ಲಿದ್ದಾರೆ. ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಬಾಳಾಸಾಹೇಬ್ ಠಾಕ್ರೆ ಅವರ ವಿಚಾರಗಳನ್ನು ಮುಂದುವರೆಸುತ್ತಿದ್ದಾರೆ' ಎಂದು ಹೇಳಿದರು.

ಧಾರಾವಿ ಮರು ಅಭಿವೃದ್ಧಿ ಯೋಜನೆ ಮೂಲಕ ಅದಾನಿಗೆ ರಕ್ಷಣೆ: ಆರೋಪ

'ಏಕ್ ಹೈ ತೋ ಸೇಫ್ ಹೈ'ಗೆ ರಾಹುಲ್ ಲೇವಡಿ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ 'ಏಕ್ ಹೈ ತೋ ಸೇಫ್ ಹೈ' (ಒಗ್ಗಟ್ಟಾಗಿದ್ದರೆ ಸುರಕ್ಷಿತವಾಗಿರುತ್ತೇವೆ) ಘೋಷಣೆ ಮತ್ತು ಅದಾನಿ ಸಮೂಹಕ್ಕೆ ಗುತ್ತಿಗೆ ನೀಡಿರುವ ಧಾರಾವಿ ಮರು ಅಭಿವೃದ್ಧಿ ಯೋಜನೆಯನ್ನು ತುಲನೆ ಮಾಡಿ, ಲೋಕಸಭಾ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಲೇವಡಿ ಮಾಡಿದರು.

ಉದ್ಯಮಿ ಗೌತಮ್ ಅದಾನಿ ಮತ್ತು ಪ್ರಧಾನಿ ಮೋದಿಯವರ ಚಿತ್ರ ಹಾಗೂ 'ಏಕ್ ಹೈ ತೋ ಸೇಫ್ ಹೈ'(ಒಗ್ಗಟ್ಟಾಗಿದ್ದರೆ ಸುರಕ್ಷಿತವಾಗಿರುತ್ತೇವೆ) ಘೋಷಣೆ ಇರುವ ಭಿತ್ತಿ ಫಲಕ ಮತ್ತು ಧಾರವಿ ಯೋಜನೆಯ ನಕ್ಷೆ ಇರುವ ಇನ್ನೊಂದು ಭಿತ್ತಿಫಲಕವನ್ನು ರಾಹುಲ್ ಗಾಂಧಿ ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದರು.

'ನವೆಂಬರ್ 20ರಂದು ನಡೆಯಲಿರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯು ಕೋಟ್ಯಧಿಪತಿಗಳು ಮತ್ತು ಬಡಜನರ ನಡುವಿನ ಸ್ಪರ್ಧೆಯಾಗಿದೆ. ಮಹಾ ವಿಕಾಸ್ ಆಘಾಡಿಯು ರೈತರಿಗೆ, ಸಂಕಷ್ಟದಲ್ಲಿರುವವರಿಗೆ ಮತ್ತು ನಿರುದ್ಯೋಗಿಗಳಿಗೆ ಆದ್ಯತೆ ನೀಡಲಿದೆ. ಧಾರವಿ ಮರು ಅಭಿವೃದ್ಧಿ ಯೋಜನೆ ಮೂಲಕ ಅದಾನಿ ಒಂದು ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ಕೊಳ್ಳೆ ಹೊಡೆಯಲು 'ಏಕ್ ಹೈ ತೋ ಸೇಫ್ ಹೈ' ಘೋಷಣೆ ಪ್ರೇರಣೆ ನೀಡುತ್ತದೆ' ಎಂದು ರಾಹುಲ್ ಗಾಂಧಿ ಆರೋಪಿಸಿದರು.

'ನಾವೆಲ್ಲರೂ ಒಗ್ಗಟ್ಟಾಗಿದ್ದರೆ ಸುರಕ್ಷಿತವಾಗಿರುತ್ತೇವೆ ಎಂದು ಮೋದಿ ಹೇಳುತ್ತಾರೆ. ನಿಜವಾಗಿಯೂ ಯಾರು ಸುರಕ್ಷಿತವಾಗಿರುತ್ತಾರೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ' ಎಂದರು.



ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸುದ್ದಿಗೋಷ್ಠಿಯಲ್ಲಿ ಭಿತ್ತಿಫಲಕಗಳನ್ನು ಪ್ರದರ್ಶಿಸಿದರು ಪಿಟಿಐ ಚಿತ್ರ

'ಅದಾನಿ ಅವರ ಹಿತಾಸಕ್ತಿಯನ್ನು ಕಾಪಾಡಲು ಧಾರಾವಿ ಮರು ಅಭಿವೃದ್ಧಿ ಯೋಜನೆಯ ಗುತ್ತಿಗೆ ಪ್ರಕ್ರಿಯೆಯನ್ನು ನಡೆಸಲಾಗಿದೆ. ಕೈಗಾರಿಕೋದ್ಯಮಿಗಳ ಹಿತಾಸಕ್ತಿಗಾಗಿ ಧಾರಾವಿ ನಿವಾಸಿಗಳ ಹಿತಾಸಕ್ತಿಯನ್ನು ಕಡೆಗಣಿಸಲಾಗಿದೆ. ಕೇಂದ್ರ ಸರ್ಕಾರದ ಪರವಾಗಿರುವ ಉದ್ಯಮಿಗಳಿಗೆ ಗುತ್ತಿಗೆಗಳನ್ನು ವರ್ಗಾಯಿಸುವಂತೆ ಇತರ ಉದ್ಯಮಿಗಳಿಗೆ ಕೇಂದ್ರ ತನಿಖಾ ಸಂಸ್ಥೆಗಳು ಒತ್ತಡ ಹೇರುತ್ತಿವೆ' ಎಂದು ಆರೋಪಿಸಿದ್ದಾರೆ.

'ಮಹಾ ವಿಕಾಸ್ ಆಘಾಡಿ ಮತ್ತು ಕಾಂಗ್ರೆಸ್ ಧಾರಾವಿಯ ಬಡಜನರಿಗೆ ಅವರ ಹಕ್ಕಿನ ಭೂಮಿಯನ್ನು ಹಿಂತಿರುಗಿಸುತ್ತದೆ' ಎಂದು ಭರವಸೆ ನೀಡಿದರು.

'ಅದಾನಿ ಪರ ಮಹಾಯುತಿ ಕೆಲಸ'

ನವದೆಹಲಿ: ಚುನಾವಣೆ ಘೋಷಣೆಯಾದ ಬಳಿಕ ಮಹಾಯುತಿ ಸರ್ಕಾರವು ಅದಾನಿ ಸಮೂಹಕ್ಕೆ ಯೋಜನೆಗಳ ಗುತ್ತಿಗೆಗೆ ವೇಗವಾಗಿ ಅನುಮತಿ ನೀಡುತ್ತಿದೆ. ಇದನ್ನು ಜನ ಗಮನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಸೋಮವಾರ ಹೇಳಿದೆ.


ಜೈರಾಮ್ ರಮೇಶ್

ಸರ್ಕಾರ ಯಾಕೆ ಅದಾನಿ ಸಮೂಹಕ್ಕೆ ಬೇಗ ಗುತ್ತಿಗೆ ಅನುಮತಿ ನೀಡುತ್ತಿದೆ ಎನ್ನುವುದು ಮಹಾಯುತಿ ಮೈತ್ರಿಕೂಟದ ನಾಯಕರ ಇತ್ತೀಚಿನ ಹೇಳಿಕೆಗಳಿಂದ ಸ್ಪಷ್ಟವಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಕಡಿಮೆ ಬೆಲೆಯಲ್ಲಿ ಮಹಾರಾಷ್ಟ್ರಕ್ಕೆ 6,600 ವಾಟ್ ವಿದ್ಯುತ್ ಪೂರೈಸುವ ಯೋಜನೆಯ ಗುತ್ತಿಗೆಯನ್ನು ಸೆ.15ರಂದು 'ಮೊದಾನಿ' ಸಮೂಹ ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಸೆ.30ರಂದು 255 ಎಕರೆ, ಅ.10ರಂದು ಮಧ್‌ನಲ್ಲಿ 140 ಎಕರೆ, ಅ.14ರಂದು 124 ಎಕರೆ ಮೊದಾನಿ ಸಮೂಹಕ್ಕೆ ಹಸ್ತಾಂತರವಾಗಿದೆ ಎಂದು ಹೇಳಿದ್ದಾರೆ.

ಜಾತಿಗಣತಿ ನಿಶ್ಚಿತ

ಮೀಸಲಾಗಿರುವ ಶೇ 50ರ ಮಿತಿಯನ್ನು ರದ್ದುಗೊಳಿಸಲು ಮತ್ತು ಜಾತಿಗಣತಿ ನಡೆಸಲು ಕಾಂಗ್ರೆಸ್ ಬದ್ಧವಾಗಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಜಾತಿಗಣತಿ ನಮ್ಮ ಮುಂದಿರುವ ಗಂಭೀರ ವಿಚಾರ ಮತ್ತು ನಾವು ಅದರ ಅನುಷ್ಠಾನ ನಿಶ್ಚಿತ. ಜಾತಿಗಣತಿ ನಮ್ಮ ಆಧಾರಸ್ತಂಭ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ನೀತಿ ಸಂಹಿತೆ ಉಲ್ಲಂಘನೆ: ಪ್ರತಿಕ್ರಿಯೆಗೆ ಕಾಲಾವಕಾಶ ಕೋರಿದ ಪಕ್ಷಗಳು

ನವದೆಹಲಿ (ಪಿಟಿಐ): ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಬಗ್ಗೆ ಜಾರ್ಖಂಡ್ ಮತ್ತು ಮಹಾರಾಷ್ಟ್ರದಲ್ಲಿ ದಾಖಲಾಗಿರುವ ದೂರಿನ ಬಗ್ಗೆ ಪ್ರತಿಕ್ರಿಯಿಸಲು ಏಳು ದಿನ ಕಾಲಾವಕಾಶ ನೀಡುವಂತೆ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಮನವಿ ಮಾಡಿವೆ.

ನೀತಿ ಸಂಹಿತೆ ಉಲ್ಲಂಘನೆ ಮಾಡಿರುವುದಾಗಿ ಆರೋಪಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ದೂರು ದಾಖಲಿಸಿದ್ದವು. ಈ ಆರೋಪಗಳ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಚುನಾವಣಾ ಆಯೋಗವು ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಶನಿವಾರ ನೋಟಿಸ್ ನೀಡಿತ್ತು.

ಸೋಮವಾರ ಮಧ್ಯಾಹ್ನ 1 ಗಂಟೆಯ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಆಯೋಗ ಸೂಚಿಸಿತ್ತು. ಆದರೆ ಎರಡೂ ಪಕ್ಷಗಳು ಹೆಚ್ಚುವರಿ ಕಾಲಾವಕಾಶವನ್ನು ನೀಡುವಂತೆ ಮನವಿ ಮಾಡಿವೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಸುಳ್ಳು ಆರೋಪಗಳ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಿರಾಧಾರ ಆರೋಪ ಮಾಡಿದ್ದಾರೆ ಎಂದು ಬಿಜೆಪಿಯೂ ದೂರು ದಾಖಲಿಸಿತ್ತು.

ತಾರಾ ಪ್ರಚಾರಕರು ಮತ್ತು ನಾಯಕರು ನೀತಿ ಸಂಹಿತೆ ಉಲ್ಲಂಘಿಸುವ ಹೇಳಿಕೆಗಳನ್ನು ನೀಡದಂತೆ ಎಚ್ಚರವಹಿಸುವುದು ಪಕ್ಷದ ಜವಾಬ್ದಾರಿ ಎಂದು ಈ ಹಿಂದೆ ಹೊರಡಿಸಿದ್ದ ಸುತ್ತೋಲೆಯ ಬಗ್ಗೆ ಆಯೋಗವು ಎರಡೂ ಪಕ್ಷಗಳಿಗೆ ನೆನಪಿಸಿದೆ.

‘ಸಿ.ಎಂ, ಸಚಿವರು ಪರಿಷತ್ತಿನ ಅಧ್ಯಕ್ಷರ ಮನೆಗೆ ಬರಬೇಕು’ ಹೇಳಿಕೆಗೆ ತೀವ್ರ ವಿರೋಧ ಎದುರಿಸಿದ ಕಸಾಪ ಅಧ್ಯಕ್ಷ

ಸಚಿವರೆದುರೇ ಜೋಶಿ, ಜಯಪ್ರಕಾಶ ಜಟಾಪಟಿ

ಪ್ರಜಾವಾಣಿ ವಾರ್ತೆ



ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಸಿದ್ಧತೆ ಸಲುವಾಗಿ ಮಂಡ್ಯದಲ್ಲಿ ಸೋಮವಾರ ನಡೆದ ಜಿಲ್ಲಾ ಸಾಹಿತಿಗಳ ಸಭೆಯಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರಿಂದ ಮೈಕ್ ಕಸಿದುಕೊಳ್ಳಲು ಮುಂದಾದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಅವರನ್ನು ಸಚಿವ ಎನ್‌.ಚಲುವರಾಯಸ್ವಾಮಿ ತಡೆದರು

ಮಂಡ್ಯ: ‘ಮುಖ್ಯಮಂತ್ರಿ ಹಾಗೂ ಸಚಿವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮನೆಗೆ ಬರಬೇಕು, ನಾವು ಅವರ ಮನೆಗೆ ಹೋಗುವುದಲ್ಲ’ ಎಂಬ ಮಹೇಶ ಜೋಶಿ ಅವರ ಹೇಳಿಕೆಯು ನಗರದಲ್ಲಿ ಸೋಮವಾರ ನಡೆದ ಜಿಲ್ಲಾ ಸಾಹಿತಿಗಳ ಸಭೆಯಲ್ಲಿ ವಾಗ್ವಾದವನ್ನು ಸೃಷ್ಟಿಸಿತ್ತು.

87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಸಭೆಯಲ್ಲಿ ಮಾತನಾಡಿದ ಜೋಶಿ, ‘ಡಿ.ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಕಸಾಪ ಅಧ್ಯಕ್ಷರ ಮನೆಗೆ ಕಾರು ಕಳುಹಿಸಿ ಕರೆಯಿಸಿಕೊಳ್ಳುತ್ತಿದ್ದರು. ಈಗ ಅಧ್ಯಕ್ಷರು ಮುಖ್ಯಮಂತ್ರಿ ಹಾಗೂ ಸಚಿವರ ಮನೆ ಬಾಗಿಲು ಕಾಯುವುದು ಸರಿಯೇ’ ಎಂದು ಪ್ರಶ್ನಿಸಿದರು.

ಅವರ ಮಾತುಗಳಿಗೆ ನೆರೆದಿದ್ದ ಸಾಹಿತಿಗಳು ಆಕ್ಷೇಪ ವ್ಯಕ್ತಪಡಿಸಿದರು. ಅದರ ಬೆನ್ನಿಗೇ ಪ್ರೊ.ಜಯಪ್ರಕಾಶ ಗೌಡರು ಜೋಶಿಯವರ ಕೈಯಲ್ಲಿದ್ದ ಮೈಕ್ ಅನ್ನು ಕಸಿದುಕೊಳ್ಳಲು ಮುಂದಾದರು. ಕೂಡಲೇ ಮಧ್ಯೆ ಪ್ರವೇಶಿಸಿದ ಸಚಿವ ಎನ್‌.ಚಲುವರಾಯಸ್ವಾಮಿಯವರು ಸಮಾಧಾನ ಪಡಿಸಿ,

> **ಸಿ.ಎಂ, ಸಚಿವರು ನಮ್ಮ ಮನೆಗೆ ಬರಲಿ ಎಂಬುವ ಭಾವನೆ ಬಿಟ್ಟು ಜೋಶಿ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಸಮ್ಮೇಳನ ಯಶಸ್ವಿಗೊಳಿಸುವ ಇಚ್ಛಾಶಕ್ತಿ ಬೆಳೆಸಿಕೊಳ್ಳಬೇಕು**
> **ಪ್ರೊ.ಜಯಪ್ರಕಾಶಗೌಡ,** ಅಧ್ಯಕ್ಷ, ಕರ್ನಾಟಕ ಸಂಘ

ಮತ್ತೆ ಜೋಶಿಯವರಿಗೆ ಮೈಕ್ ಕೊಟ್ಟು ಮಾತನಾಡಲು ಅವಕಾಶ ನೀಡಿದರು.

ನಂತರ ಪ್ರೊ.ಜಯಪ್ರಕಾಶಗೌಡ ಮಾತನಾಡಿ, ‘ವಿಶ್ವೇಶ್ವರಯ್ಯನವರ ಮೊಮ್ಮಗಳ ಹೆಸರನ್ನು ಪ್ರಸ್ತಾಪಿಸುತ್ತೀರಿ, ಮಂಡ್ಯದಲ್ಲಿ ಮೇರು ಸಾಹಿತಿಗಳ ಮೊಮ್ಮಕ್ಕಳಿಲ್ಲವೇ? ಪರಿಷತ್ತಿನ ಅಧ್ಯಕ್ಷ ಸ್ಥಾನ ಸಾಂವಿಧಾನಿಕ ಹುದ್ದೆಯಲ್ಲ, ಅದು ಸಾಹಿತ್ಯ ಪರಿಚಾರಕ ಹುದ್ದೆ. ಪರಿಷತ್ತಿನ ಮಾಜಿ ಅಧ್ಯಕ್ಷ, ಮದ್ದೂರಿನ ದೇಶಹಳ್ಳಿ ಜಿ.ನಾರಾಯಣ ಅವರಂತೆ ಮಾದರಿಯಾಗಿರಬೇಕು. ಅದನ್ನು ಬಿಟ್ಟು, ಅಧ್ಯಕ್ಷರಿಗೆ ಪ್ರತಿಯೊಬ್ಬರೂ ಬೆಲೆ ಕೊಡಬೇಕು, ನೀವೇ ನಮ್ಮ ಬಳಿಗೆ ಬರಬೇಕೆಂಬ ಧೋರಣೆ ಸರಿಯಲ್ಲ’ ಎಂದು ಪ್ರತಿಪಾದಿಸಿದರು.

‘ಸಮ್ಮೇಳನದಲ್ಲಿ ಪ್ರಕಟವಾಗಲಿರುವ 87 ಪುಸ್ತಕಗಳ ಹಿಂಬದಿಯ ಪುಟದಲ್ಲಿ ಪುಸ್ತಕ ಹಾಗೂ ಲೇಖಕರ ಪರಿಚಯವಿರಬೇಕೇ ಹೊರತು, ಪರಿಷತ್ತಿನ ಅಧ್ಯಕ್ಷರ ಪರಿಚಯ, ಭಾವಚಿತ್ರವಲ್ಲ. ಸಮ್ಮೇಳನದ ಪ್ರಚಾರದ ಫ್ಲೆಕ್ಸ್‌, ಬೋರ್ಡ್‌ಗಳಲ್ಲಿ ಸಾಹಿತಿಗಳ, ಸಮ್ಮೇಳನದ ಅಧ್ಯಕ್ಷರ ಭಾವಚಿತ್ರವಿರಬೇಕು. ಬೇರೆ ಯಾರದ್ದೋ ಭಾವಚಿತ್ರಗಳು ವಿಜೃಂಭಿಸುವುದು ಸೂಕ್ತವಲ್ಲ’ ಎಂದರು.

‘ಸಮ್ಮೇಳನಕ್ಕೆ ಲಕ್ಷಲಕ್ಷ ಜನರನ್ನು ಕರೆತರುವುದಾಗಿ ಜೋಶಿ ಹೇಳಿದ್ದಾರೆಂದು ಹೇಳಿಕೆ ನೀಡಿದ್ದಕ್ಕೆ ನನ್ನ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಹೇಳಿರುವುದು ಸರಿಯೇ’ ಎಂದು ಸಾಹಿತಿ ಜಿ.ಟಿ. ವೀರಪ್ಪ ಪ್ರಶ್ನಿಸಿದರು. ನಿವೃತ್ತ ಪ್ರಾಧ್ಯಾಪಕ ಎಸ್‌.ಬಿ.ಶಂಕರಗೌಡರೂ ಅವರಿಗೆ ದನಿಗೂಡಿಸಿದರು.

‘ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆ ವಿಚಾರವು ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಯಾಗಬೇಕು. ಆದರೆ, ಕಸಾಪ ಅಧ್ಯಕ್ಷರು ಸಾರ್ವಜನಿಕವಾಗಿ ಯಾರದ್ದೋ ಹೆಸರುಗಳನ್ನು ಪ್ರಸ್ತಾಪಿಸುತ್ತಿದ್ದಾರೆ’ ಎಂದು ಮತ್ತೊಮ್ಮೆ ಪ್ರೊ.ಜಯಪ್ರಕಾಶಗೌಡ ಅಸಮಾಧಾನ ವ್ಯಕ್ತಪಡಿಸಿದರು.

‘ಹಾವೇರಿ ಮಾದರಿಯಲ್ಲಿ ಸಮ್ಮೇಳನವನ್ನು ಮಾಡುವುದಾಗಿ ಹೇಳುತ್ತೀರಿ. ಹಾಗೆಂದರೇನು ಎಂಬುದನ್ನು ಮೊದಲು ಸ್ಪಷ್ಟಪಡಿಸಿ’ ಎಂದು ಸಾಹಿತಿ ಬೆಳ್ಳೂರು ವೆಂಕಟಪ್ಪ ಪಟ್ಟುಹಿಡಿದರು.

ಈ ಎಲ್ಲ ಆಕ್ಷೇಪಗಳಿಗೆ ಸಮಜಾಯಿಷಿ ನೀಡಲು ಮುಂದಾದ ಮಹೇಶ್ ಜೋಶಿ ಅವರಿಗೆ ಮತ್ತೆ ಪ್ರಶ್ನೆಗಳು ಎದುರಾದವು. ಹೀಗಾಗಿ ಸಭೆಯನ್ನು ಸಚಿವರ ಸೂಚನೆಯಂತೆ ಮೊಟಕುಗೊಳಿಸಲಾಯಿತು.

ಬಿಜೆಪಿ ಸರ್ಕಾರಕ್ಕೆ ಕ್ಲೀನ್‌ಚಿಟ್ ಸಿಕ್ಕಿಲ್ಲ: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಸರ್ಕಾರದ ಅವಧಿಯ ಶೇ 40 ಲಂಚದ ಕುರಿತ ಆರೋಪಕ್ಕೆ ಕ್ಲೀನ್ ಚಿಟ್ ಸಿಕ್ಕಿಲ್ಲ. ಸಾಕ್ಷ್ಯಗಳು ಸಿಗದ ಕಾರಣ ತನಿಖೆ ನಡೆಸಿದರೂ ಆರೋಪ ಸಾಬೀತಾಗಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯ ಕಾಮಗಾರಿಗೆ ಸಂಬಂಧಿಸಿದ ಒಂದು ಪ್ರಕರಣದಲ್ಲಿ ಶೇ 40 ಲಂಚದ ಆರೋಪ ಮಾಡಿದ್ದ ಗುತ್ತಿಗೆದಾರ ಅಂಬಿಕಾಪತಿ ಅವರ ಅಕಾಲಿಕ ನಿಧನದ ಕಾರಣ ಸಾಕ್ಷ್ಯಾಧಾರಗಳ ಕೊರತೆ ಉಂಟಾಯಿತು. ಇದರಿಂದಾಗಿ ಲೋಕಾಯುಕ್ತಕ್ಕೆ ಆರೋಪ ಸಾಬೀತು ಮಾಡಲು ಸಾಧ್ಯವಾಗಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕೋಪಯೋಗಿ, ಆರೋಗ್ಯ, ವಸತಿ, ಉನ್ನತ ಶಿಕ್ಷಣ, ಸಣ್ಣ ನೀರಾವರಿ ಸೇರಿ ಹಲವು ಇಲಾಖೆಗಳಲ್ಲಿನ ಲಂಚ ಮತ್ತು ಕೋಲಾರ



ಪ್ರಿಯಾಂಕ್ ಖರ್ಗೆ

ಜಿಲ್ಲೆಯ ಹಿಂದಿನ ಉಸ್ತುವಾರಿ ಸಚಿವ ಮುನಿರತ್ನ ವಿರುದ್ಧವೂ ಲಂಚದ ಆರೋಪಗಳ ಬಗ್ಗೆ ತನಿಖೆ ನಡೆಸಲೇ ಇಲ್ಲ. ಇದು ಬಿಜೆಪಿಯವರ ಜಾಣ ಕುರುಡುತನವಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯ ಶೇ 40 ಲಂಚದ ಆರೋಪದ ಕುರಿತ ಸಮಗ್ರ ತನಿಖೆಗಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಈ ಆಯೋಗವು ನೀಡುವ ವರದಿಯ ಆಧಾರದ ಮೇಲೆ ಬಿಜೆಪಿ ಸರ್ಕಾರದ ಮೇಲಿನ ಆರೋಪದ ಕುರಿತ ಸತ್ಯಾಸತ್ಯತೆ ಹೊರಬರಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ.

‘ಅರ್ಹರ ಪಡಿತರ ಚೀಟಿ ರದ್ದು ಮಾಡಲ್ಲ’

ಗ್ಯಾರಂಟಿ ಬಗ್ಗೆ ಮಾತನಾಡಲು ಎಚ್‌ಡಿಕೆಗೆ ಯಾವ ನೈತಿಕ ಹಕ್ಕಿದೆ?: ಸಿ.ಎಂ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಅನರ್ಹರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಮಾತ್ರ ರದ್ದು ಮಾಡಲಾಗುವುದು. ಅರ್ಹ ಬಡವರ ಪಡಿತರ ಚೀಟಿಗಳನ್ನು ರದ್ದು ಮಾಡುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ಕನಕ ಜಯಂತಿಯ ದಿನವಾದ ಸೋಮವಾರ, ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ, ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಅನ್ನಭಾಗ್ಯ ಯೋಜನೆಯನ್ನು ಜಾರಿ ಮಾಡಿದ್ದು ಈ ಸಿದ್ದರಾಮಯ್ಯನೇ ಹೊರತು, ಬಿಜೆಪಿ ಅಥವಾ ಜೆಡಿಎಸ್ ಆಗಲಿ ಅಲ್ಲ. 2017 ರಲ್ಲಿ ಒಂದು ರೂಪಾಯಿಗೆ ನೀಡುತ್ತಿದ್ದ ಅಕ್ಕಿಯನ್ನು ನಾವು ಉಚಿತವಾಗಿ ನೀಡಿದೆವು. ಬಿಜೆಪಿ ಅಧಿಕಾರದಲ್ಲಿರುವ ಗುಜರಾತ್, ಮಧ್ಯ ಪ್ರದೇಶ, ಬಿಹಾರ, ಉತ್ತರ ಪ್ರದೇಶ, ಹರಿಯಾಣ ಎಲ್ಲಿಯಾದರೂ ಜಾರಿ ಮಾಡಿದ್ದಾರಾ ಹೇಳಿ’ ಎಂದು ಅವರು ಪ್ರಶ್ನಿಸಿದರು.

‘ಗ್ಯಾರಂಟಿಗಳ ಬಗ್ಗೆ ಮಾತನಾಡಲು ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಯಾವ ನೈತಿಕ ಹಕ್ಕಿದೆ? ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದರೆ’ ಎಂದು ಕೇಳಿದರು.

‘ನಬಾರ್ಡ್‌ ಕಳೆದ ವರ್ಷ ₹5,800 ಕೋಟಿ ಸಾಲ ನೀಡಿತ್ತು. ಈ ವರ್ಷ ₹2,340 ಕೋಟಿ ನೀಡಿದೆ. ಇದು ಅನ್ಯಾಯ ವಲ್ಲವೇ? ಕೇಂದ್ರದ ಸಚಿವರಾದ ಕುಮಾರಸ್ವಾಮಿ ಮತ್ತು ಪ್ರಲ್ಹಾದ ಜೋಶಿ ಕರ್ನಾಟಕದವರಾಗಿ ಏನು ಮಾಡುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಕುಟುಕಿದರು.

‘ನಾನು ಅಧಿಕಾರಕ್ಕೆ ಬಂದ ನಂತರ ₹5 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಮತ್ತು ₹15 ಲಕ್ಷದವರೆಗೆ ಶೇ 3 ರಷ್ಟು ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆ ಮಾಡಿದ್ದೇನೆ. ನಬಾರ್ಡ್‌ ಕೇಂದ್ರ ಹಣಕಾಸು ಮಂತ್ರಿಯವರ ಅಧೀನಕ್ಕೆ ಬರುತ್ತದೆ. ನಿರ್ಮಲಾ ಸೀತಾರಾಮನ್ ಏನು ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

ಹಣವಿಲ್ಲದೆ ಪಡಿತರ ಚೀಟಿ ರದ್ದು: ಬಿ.ವೈ.ವಿಜಯೇಂದ್ರ

‘ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದೇ, ಬೊಕ್ಕಸ ಖಾಲಿ ಆಗಿರುವ ಕಾರಣ 11 ಲಕ್ಷ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

‘ಯಾವುದೇ ಅಭಿವೃದ್ಧಿ ಕೆಲಸಕ್ಕೂ ಹಣವಿಲ್ಲ. ಮತ್ತೊಂದು ಕಡೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಹೀಗಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡುವ ಕುತಂತ್ರ ಬಯಲಾಗಿದೆ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ಹೋಗಿ ನಾವು ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ ಎಂದು ಅಬ್ಬರಿಸುವ ಸಿದ್ದರಾಮಯ್ಯ ಅವರು ಪ್ರಚಾರ ಭಾಷಣ ಮುಗಿಸಿ ಮರಳುವ ಹೊತ್ತಿಗೆ ಅನರ್ಹ ಮಾನದಂಡವನ್ನು ಮುಂದಿಟ್ಟು ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡುತ್ತಿದೆ’ ಎಂದು ದೂರಿದ್ದಾರೆ.



ವಿಜಯೇಂದ್ರ

‘ಅನರ್ಹತೆ ಹೆಸರಿನಲ್ಲಿ ನಿಜವಾದ ಬಿಪಿಎಲ್ ಪಡಿತರ ಚೀಟಿದಾರರ ಹಕ್ಕನ್ನು ಕಿತ್ತುಕೊಳ್ಳುವುದನ್ನು ಬಿಜೆಪಿ ಖಂಡಿಸುತ್ತದೆ. ಅನರ್ಹರನ್ನು ತಡೆಯುವ ಹೆಸರಿನಲ್ಲಿ ಬಿಪಿಎಲ್ ಪಡಿತರಚೀಟಿದಾರರ ಸಂಖ್ಯೆ ಕಡಿಮೆ ಮಾಡಿ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ದುರುದ್ದೇಶ ಈ ಬಿಪಿಎಲ್ ಕಾರ್ಡುದಾರರ ರದ್ದತಿಯ ಹಿಂದೆ ಅಡಗಿದೆ ಎನ್ನುವುದು ರಾಜ್ಯ ಸರ್ಕಾರದ ನೀತಿ– ನಿಲುವುಗಳಿಂದ ಗೊತ್ತಾಗುತ್ತದೆ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ನನ್ನ ಮಾತು ಕೇಳಬೇಕಿತ್ತು: ಸಚಿವ ಸೋಮಣ್ಣ

ಬೆಂಗಳೂರು: ‘ನಾನು ಅವತ್ತೇ ಹೇಳಿದ್ದೆ, ನನ್ನ ಮಾತನ್ನು ಕೇಳಿದ್ದರೆ ಇಷ್ಟೆಲ್ಲ ಆಗುತ್ತಿತ್ತಾ? ಸಣ್ಣ ವಿಷಯಕ್ಕೆ ಇಷ್ಟೆಲ್ಲ ಆಗುತ್ತಿದೆ’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೇಳಿದರು.

‘ರಮಣಶ್ರೀ ಶರಣ ಪ್ರಶಸ್ತಿ’ ಸಮಾರಂಭದಲ್ಲಿ ತಮಗೆ ಎದುರಾದ ಸಿದ್ದರಾಮಯ್ಯ ಅವರ ಜತೆ ನಗುತ್ತಲೇ ಮಾತನಾಡಿದ ಸೋಮಣ್ಣ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ವಿಷಯ ಪ್ರಸ್ತಾಪಿಸಿದರಲ್ಲದೇ, ‘ನನ್ನ ಮಾತು ಕೇಳಿ ಆಗಲೇ ನಿವೇಶನ ವಾಪಾಸು ಮಾಡಿದ್ದರೆ ಈ ರೀತಿ ತೊಂದರೆ ಆಗುತ್ತಿರಲಿಲ್ಲ. ನನ್ನ ಮಾತು ಕೇಳಬೇಕಿತ್ತು’ ಎಂದರು.

‘ಸಿದ್ದರಾಮಯ್ಯ ವಿಚಾರದಲ್ಲಿ ನನ್ನದು ನೇರ ಮಾತು. ಬೇರೆಯವರಂತೆ ಹೆದರಿಸುವುದಾ ಗಲಿ, ಹಿಂದೊಂದು ಮುಂದೊಂದು ಮಾತನಾಡುವುದು ನನಗೆ ಗೊತ್ತಿಲ್ಲ’ ಎಂದೂ ಸೋಮಣ್ಣ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಅದು ಹಾಗಲ್ಲ ಸೋಮಣ್ಣ, ಸುಳ್ಳು ಹೇಳುತ್ತಿದ್ದಾರೆ. ನನ್ನ ಮಾತು ಕೇಳು. ಭೂಸ್ವಾಧೀನ ಕಾಯ್ದೆ ಕುರಿತಂತೆ ಹೇಳು. ವಿಚಾರ ಸರಿಯಾಗಿ ಗೊತ್ತಿಲ್ಲದೇ ಬೇರೇನೋ ವಿಚಾರ ಮಾತನಾಡಬೇಡ’ ಎಂದರು.



ಆಂಧ್ರ: ಮುನ್ಸಿಪಲ್ ಕಾನೂನು ತಿದ್ದುಪಡಿ ಮಸೂದೆ ಅಂಗೀಕಾರ

ಹೈದರಾಬಾದ್: ಎರಡಕ್ಕಿಂತ ಹೆಚ್ಚು ಮಕ್ಕಳು ಇರುವವರೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಒದಗಿಸುವಂತಹ, ‘ಆಂಧ್ರ ಪ್ರದೇಶ ಮುನ್ಸಿಪಲ್ ಕಾನೂನು ತಿದ್ದುಪಡಿ ಕಾಯ್ದೆ 2024’ ಅನ್ನು ಆಂಧ್ರ ಪ್ರದೇಶದಲ್ಲಿ ವಿಧಾನಸಭೆಯು ಸೋಮವಾರ ಅಂಗೀಕರಿಸಿತು.

ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದ್ದ ‘ಆಂಧ್ರ ಪ್ರದೇಶ ಪಂಚಾಯತ್ ರಾಜ್ ಕಾಯ್ದೆ–1994’ಕ್ಕೆ ತಿದ್ದುಪಡಿ ಮಾಡಲಾಗಿದೆ. ಇದೀಗ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರೂ ಸ್ಥಳೀಯ ಚುನಾವಣೆಗೆ ಸ್ಪರ್ಧಿಸಬ ಹುದಾದ ಅವಕಾಶ ದೊರೆಯಲಿದೆ. ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚಳದ ಅಗತ್ಯವನ್ನು ಪ್ರಸ್ತಾಪಿಸಿ ಪೌರಾಡಳಿತ ಸಚಿವ ಪಿ. ನಾರಾಯಣ ಅವರು ಮಸೂದೆಯನ್ನು ಮಂಡಿಸಿದರು.

‘ವಿಧಾನ ಪರಿಷತ್ತಿನ ಒಪ್ಪಿಗೆ ಬಳಿಕ ಸರ್ಕಾರಿ ಆದೇಶವನ್ನು ಹೊರಡಿಸುವ ಮೂಲಕ ಹೊಸ ನಿಯಮ ಜಾರಿಗೆ ಬರಲಿದೆ’ ಎಂದರು.



ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನಕಶ್ರೀ ಪ್ರಶಸ್ತಿಯನ್ನು ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಗೆ ಪ್ರದಾನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎನ್‌. ಮಂಜುಳಾ, ಸಚಿವ ಶಿವರಾಜ ಎಸ್‌. ತಂಗಡಗಿ, ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ಮತ್ತು ತಿಂಥಣಿಯ ಕನಕ ಗುರುಪೀಠದ ಸಿದ್ಧರಾಮಾನಂದಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಶೇ 50 ರಿಯಾಯಿತಿಯಲ್ಲಿ ಪುಸ್ತಕ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿಯಲ್ಲಿರುವ ಎಲ್ಲ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳು ಪ್ರಕಟಿಸುವ ಪುಸ್ತಕಗಳನ್ನು ವಿಶೇಷ ಸಂದರ್ಭಗಳಲ್ಲಿ ಶೇಕಡ 50ರ ರಿಯಾಯಿತಿಯಲ್ಲಿ ಓದುಗರಿಗೆ ಒದಗಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕನಕದಾಸರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು..

ಪ್ರಶಸ್ತಿ ಪ್ರದಾನ: ಕನಕದಾಸರ ಕುರಿತು ವಿಭಿನ್ನ ಒಳ ನೋಟಗಳು ಇರುವ ಕೃತಿಗಳನ್ನು ರಚಿಸಿರುವ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಗೆ 2024ನೇ ಸಾಲಿನ ‘ಕನಕಶ್ರೀ ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು.

‘ಕನಕ ಗೌರವ ಪುರಸ್ಕಾರ’ವನ್ನು ಪುತ್ತೂರಿನ ತಾಳ್ತಜೆ ವಸಂತಕುಮಾರ್ (2021–22), ಹಾವೇರಿಯ ನೀಲಪ್ಪ ಮೈಲಾರಪ್ಪ ಅಂಬಲಿಯವರ (2022–23), ಬೆಂಗಳೂರಿನ ಎಚ್‌.ಎನ್‌. ಮುರಳೀಧರ (2023–24) ಹಾಗೂ ತುಮಕೂರಿನ ಜಿ.ವಿ. ಆನಂದಮೂರ್ತಿ (2024–25) ಅವರಿಗೆ ಪ್ರದಾನ ಮಾಡಲಾಯಿತು. ‘ಕನಕ ಯುವ ಪುರಸ್ಕಾರ’ವನ್ನು ಮೈಸೂರಿನ ಅನಿಲ್ ಕುಮಾರ್ (2021–22), ಚಿಕ್ಕಮಗಳೂರಿನ ಚಿಕ್ಕಮಗಳೂರು ಗಣೇಶ್ (2022–23) ಹಾಗೂ ವಿಜಯನಗರ ಜಿಲ್ಲೆಯ ಉಮೇಶ ಎಂ. (2023–24) ಅವರಿಗೆ ಪ್ರದಾನ ಮಾಡಲಾಯಿತು.

ಶೈಕ್ಷಣಿಕ ವಲಯದಲ್ಲಿ ಭಾರತ– ಅಮೆರಿಕ ಸಹಭಾಗಿತ್ವ ವೃದ್ಧಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶೈಕ್ಷಣಿಕ ವಲಯದಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಸಹಭಾಗಿತ್ವವು ಹೊಸ ಎತ್ತರಕ್ಕೆ ಏರುತ್ತಿದೆ ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಅವರು ಹೇಳಿದ್ದಾರೆ.

ವುಮೆನ್ ಇನ್ ಸ್ಟೆಮ್ ಫೆಲೋಶಿಪ್ (ಸ್ಟೆಮ್– ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಮತ್ತು ವೈದ್ಯಕೀಯ) ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ, ಗುಪ್ತಾ-ಕ್ಲಿನ್ಸ್ಕಿ ಇಂಡಿಯಾ ಸಂಸ್ಥೆ ಮತ್ತು ಮಹಿಳಾ ಆರ್ಥಿಕ ಸಬಲೀಕರಣಕ್ಕಾಗಿ ಕೆಲಸ ಮಾಡುತ್ತಿರುವ ಅಮೆರಿಕ- ಭಾರತದ ಒಕ್ಕೂಟದ ಸಹಭಾಗಿತ್ವದಲ್ಲಿ ಆರಂಭವಾಗುತ್ತಿರುವ ನೂತನ ಯೋಜನೆಯು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ವಿದ್ಯಾರ್ಥಿನಿಯರ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದ್ದಾರೆ.


ಇತ್ತೀಚೆಗೆ ಬಿಡುಗಡೆಯಾದ ಓಪನ್ ಡೋರ್ಸ್‌ ವರದಿಯನ್ನು ಪ್ರಸ್ತಾಪಿಸಿದ ಗಾರ್ಸೆಟ್ಟಿ ಅವರು, ‘2009ರ ಬಳಿಕ ಇದೇ ಮೊದಲ ಬಾರಿಗೆ ಅಮೆರಿಕದಲ್ಲಿ ಇತರ ದೇಶಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾರತದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 2023-2024 ಶೈಕ್ಷಣಿಕ ವರ್ಷದಲ್ಲಿ 3,30,000 ಕ್ಕೂ ಹೆಚ್ಚು ಭಾರತೀಯರು ಅಮೇರಿಕದಲ್ಲಿ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಅಧ್ಯಕ್ಷ ರೊನಾಲ್ಡ್ ಜೆ. ಡೇನಿಯಲ್ಸ್ ಅವರು ಮಾತನಾಡಿ, ಭಾರತೀಯ ಮಹಿಳಾ ವಿಜ್ಞಾನಿಗಳ ಸಂಶೋಧನಾ ಕೌಶಲವನ್ನು ವೃದ್ಧಿಸಲು, ಅವರು ಉತ್ತಮ ಮಾರ್ಗದರ್ಶಕರನ್ನು ಪಡೆಯಲು ಮತ್ತು ಜಾಗತಿಕ ಮಟ್ಟದಲ್ಲಿ ಸಂಪರ್ಕ ಹೆಚ್ಚಿಸಿಕೊಳ್ಳಲು ಸಹಕಾರ ನೀಡುವ ಸಲುವಾಗಿ ವುಮೆನ್ ಇನ್ ಸ್ಟೆಮ್ ಫೆಲೋಶಿಪ್ ಕಾರ್ಯಕ್ರಮವನ್ನು ಆರಂಭಿಸಲಾಗಿದೆ ಎಂದು ಹೇಳಿದ್ದಾರೆ. ಈ ಫೆಲೋಶಿಪ್ ತಮ್ಮ ಮಹಿಳೆ ಯರು ಸಂಶೋಧನೆಯನ್ನು ಪ್ರಾರಂಭಿಸಲು ಅಗತ್ಯವಿರುವ ಬೆಂಬಲ, ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಮಹಿಳೆಯರ ಪ್ರಗತಿಗೆ ಇರುವ ತೊಡಕುಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

‘ಶೇ 40 ಲಂಚ: ಇದೇ 23 ರ ಬಳಿಕ ಮಾತನಾಡುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಸರ್ಕಾರದ ವಿರುದ್ಧ ಮಾಡಿರುವ ಶೇ 40 ಲಂಚದ ಆರೋಪದ ಬಗ್ಗೆ ಇದೇ 23ರ ಬಳಿಕ ಮಾತನಾಡುತ್ತೇನೆ. ಅಲ್ಲಿಯವರೆಗೆ ನಾನು ಮಾತನಾಡುವುದಿಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ವಿಷಯದ ಕುರಿತು ನಮ್ಮ ಪಕ್ಷದ ಅಧ್ಯಕ್ಷರು, ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಉಪ ಚುನಾವಣೆ ಫಲಿತಾಂಶ ಬಂದ ನಂತರ ಯಾವುದು ಸತ್ಯ, ಯಾವುದು ಅಸತ್ಯ ಎನ್ನುವ ಬಗ್ಗೆ ಮಾತನಾಡುತ್ತೇನೆ’ ಎಂದರು. ‘ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರ ಕುರಿತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ನೀಡಿರುವ ಹೇಳಿಕೆ ನಾಗರಿಕ ಸಮಾಜ ಒಪ್ಪುವಂತಹದ್ದಲ್ಲ. ಎಲ್ಲರಿಗೂ ಒಂದು ಗೌರವ ಇದ್ದೇ ಇರುತ್ತದೆ. ಶ್ರೀಮಂತ ಇರಲಿ, ಬಡವ ಇರಲಿ, ಎಲ್ಲರಿಗೂ ಅವರದ್ದೇ ಆದ ಗೌರವ ಇರುತ್ತದೆ. ಯಾರು ಯಾರನ್ನೂ ಖರೀದಿ ಮಾಡಲು ಆಗುವುದಿಲ್ಲ. ಇದರ ಅರಿವು ಇರುವವರು ಯಾರೂ ಹೀಗೆ ಮಾತನಾಡುವುದಿಲ್ಲ’ ಎಂದು ಹೇಳಿದರು.



ಬೆಂಗಳೂರು ಅರಮನೆ ಆವರಣದಲ್ಲಿ ಟೆಕ್ ಶೃಂಗಕ್ಕೆ ನಡೆದಿರುವ ಸಿದ್ಧತೆ –ಪ್ರಜಾವಾಣಿ ಚಿತ್ರ

ಟೆಕ್ ಶೃಂಗಕ್ಕೆ ಇಂದು ಚಾಲನೆ

ಒಂದನೇ ಪುಟದಿಂದ...

ಆಸ್ಟ್ರೇಲಿಯಾ, ಬ್ರಿಟನ್, ಫ್ರಾನ್ಸ್, ಆಸ್ಟ್ರಿಯಾ, ಡೆನ್ಮಾರ್ಕ್, ಫಿನ್ಲೆಂಡ್, ಪೋಲೆಂಡ್, ಜಪಾನ್, ಜರ್ಮನಿ, ಸ್ವಿಟ್ಜರ್ಲೆಂಡ್, ಇಸ್ರೇಲ್ ಮತ್ತು ಅಮೆರಿಕ ಸೇರಿ 15ಕ್ಕೂ ಹೆಚ್ಚು ದೇಶಗಳ ಉನ್ನತ ಮಟ್ಟದ ನಿಯೋಗಗಳು, ಸರ್ಕಾರಿ ಅಧಿಕಾರಿಗಳು, ಉದ್ಯಮದ ಮುಖಂಡರು ಮತ್ತು ನವೋದ್ಯಮಿಗಳು ಭಾಗವಹಿಸಲಿದ್ದಾರೆ. ಒಟ್ಟು 52 ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಐಟಿ, ಡೀಪ್ ಟೆಕ್ ಮತ್ತು ಟ್ರೆಂಡ್ಸ್, ಬಯೋಟೆಕ್, ಹೆಲ್ತ್ ಟೆಕ್, ಸ್ಟಾರ್ಟ್ ಅಪ್ ಎಕೋಸಿಸ್ಟಮ್, ಗ್ಲೋಬಲ್ ಇನೋವೇಷನ್ ಅಲೈಯನ್ಸ್, ಭಾರತ ಮತ್ತು ಯುಎಸ್‌ಎ ಟೆಕ್ ಕಾನ್‌ಕ್ಲೇವ್ ಮತ್ತು ಹೊಸದಾಗಿ ಪರಿಚಯಿಸಲಾದ ಎಲೆಕ್ಟ್ರೋ–ಸೆಮಿಕಾನ್ ಟ್ರ್ಯಾಕ್ ಬಗ್ಗೆ ಸಮ್ಮೇಳನ ನಡೆಯಲಿವೆ. ಗ್ಲೋಬಲ್ ಹಂತ 2ರಲ್ಲಿ ಕೃಷಿ, ಲಾಜಿಸ್ಟಿಕ್ಸ್, ಬಾಹ್ಯಾಕಾಶ, ಶಿಕ್ಷಣದ ಮೇಲೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಪ್ರಭಾವ, ಸೈಬರ್ ಸುರಕ್ಷತೆ ಮತ್ತು ಜಿಸಿಸಿಗಳು ಮತ್ತು ಜಿವಿಸಿಗಳಲ್ಲಿನ ರೂಪಾಂತರಗಳ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ ಎಂದು ಪ್ರಿಯಾಂಕ್ ಹೇಳಿದರು.

ಅಂತರರಾಷ್ಟ್ರೀಯ ಪ್ರದರ್ಶನ ಪೆವಿಲಿಯನ್‌ನಲ್ಲಿ ಆಸ್ಟ್ರೇಲಿಯಾ, ರಷ್ಯಾ, ಜರ್ಮನಿ, ಡೆನ್ಮಾರ್ಕ್, ಕೊರಿಯಾ, ಅಮೆರಿಕ, ಜಪಾನ್, ಬವೇರಿಯಾ, ಇಸ್ರೇಲ್ ಮತ್ತಿತರ ದೇಶಗಳ ತಂತ್ರಜ್ಞಾನಗಳ ಪ್ರದರ್ಶನ ನಡೆಯಲಿವೆ ಎಂದರು.

ಮಕ್ಕಳ ಸಾಹಿತ್ಯ ಕೃತಿಗಳಿಗೆ ಆಹ್ವಾನ

ಬೆಂಗಳೂರು: ಇಂದಿರಾನಗರದ ಎಸ್. ಚನ್ನಪ್ಪ ಪ್ರತಿಷ್ಠಾನವು ಮಕ್ಕಳ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಲು ನಿರ್ಧರಿಸಿದೆ. ಈ ಸಂಬಂಧ 2024ನೇ ಸಾಲಿನಲ್ಲಿ ಪ್ರಕಟಗೊಂಡ ಮಕ್ಕಳ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಿದೆ.

ಆಸಕ್ತರು ಪುಸ್ತಕದ ನಾಲ್ಕು ಪ್ರತಿಗಳನ್ನು ಕಾರ್ಯದರ್ಶಿ, ಎಸ್. ಚನ್ನಪ್ಪ ಪ್ರತಿಷ್ಠಾನ, 333, ಅರ್ಕಾವತಿ ಮೊದಲ ಹಂತ, ಇಂದಿರಾನಗರ, ಬೆಂಗಳೂರು–560038 ಈ ವಿಳಾಸಕ್ಕೆ ಡಿಸೆಂಬರ್ 15ರೊಳಗೆ ಅಂಚೆ ಅಥವಾ ಕೊರಿಯರ್ ಮೂಲಕ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 9880848716

₹100 ಕೋಟಿ ಆಫರ್ ಹೊಸದಲ್ಲ: ಚಲುವರಾಯಸ್ವಾಮಿ

‘ಸರ್ಕಾರ ಬೀಳಿಸಲು ಡಬ್ಬಲ್ ಆಫರ್’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಆಪರೇಷನ್ ಕಮಲ ಮಾಡಿ ಕಾಂಗ್ರೆಸ್ ಸರ್ಕಾರವನ್ನು ಬೀಳಿಸಲು ನಮ್ಮ ಶಾಸಕರಿಗೆ ₹100 ಕೋಟಿ ಆಫರ್ ನೀಡಿರುವುದು ಹೊಸದೇನಲ್ಲ. ಈ ಹಿಂದೆಯೂ ಸರ್ಕಾರ ಬೀಳಿಸಲು ₹50 ಕೋಟಿ ಆಫರ್ ನೀಡಿದ್ದರು. ಈಗ ಅದು ಡಬ್ಬಲ್ ಆಗಿದೆ ಅಷ್ಟೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಬಿ.ಎಸ್‌. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿಯನ್ನಾಗಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರನ್ನು ಆಪರೇಷನ್ ಮಾಡಿದ್ದರು. ಆಗ ಎಷ್ಟು ಹಣ ಕೊಟ್ಟಿದ್ದರೆಂಬ ಮಾಹಿತಿ ಇಲ್ಲ’ ಎಂದರು.

‘ಆಗ ಯಾರೂ ಹಣ ಪಡೆಯದೆ ಬಿಜೆಪಿಗೆ ಹೋಗಿರಲಿಲ್ಲ. ಈಗ ಕಾಂಗ್ರೆಸ್ ಸರ್ಕಾರ ಉಳಿಯಲ್ಲವೆಂದು ಎರಡೂ ಪಕ್ಷದವರು ಹೇಳುತ್ತಿದ್ದಾರೆ. ಉಪ ಚುನಾವಣೆಯಲ್ಲೂ ಸರ್ಕಾರ ಉರುಳಿಸುವ ಮಾತಾಡಿದ್ದಾರೆ ಎಂದಮೇಲೆ ಆಪರೇಷನ್ ಕಮಲ ನಡೆಯುತ್ತಿದೆ ಎಂದೇ ಅರ್ಥ. ನಾವು ಹಗರಣಗಳನ್ನು ಮಾಡಿಲ್ಲ. ಮುಖ್ಯಮಂತ್ರಿ ಸೇರಿದಂತೆ ಹಲವರ ಮೇಲೆ ಆರೋಪ ಮಾಡಿದ್ದಾರೆ. ಒಂದನ್ನೂ ಸಾಬೀತುಪಡಿಸಿಲ್ಲ’ ಎಂದು ದೂರಿದರು.

‘ನಮ್ಮ ಶಾಸಕರನ್ನು ಸಂಪರ್ಕಿಸಿರುವುದು ಸತ್ಯ. ಆಡಿಯೊ, ವಿಡಿಯೊ ಯಾರ ಬಳಿ ಇದೆಯೆಂದು ಅವರು ಬಿಡುಗಡೆ ಮಾಡುತ್ತಾರೆ? ಮಗನ ಚುನಾವಣೆಗಾಗಿ ನೂರಾರು ಕಂಪನಿಗಳಿಂದ

ಶಾಸಕ ಗಣಿಗ ದಾಖಲೆ ಕೊಡಲಿ: ನಿಖಿಲ್

ಹಾಸನ: ‘ಕಾಂಗ್ರೆಸ್ ಶಾಸಕರಿಗೆ ಕೋಟಿಗಟ್ಟಲೆ ಆಫರ್ ಕೊಟ್ಟಿದ್ದಾರೆಂದು ಆರೋಪಿಸಿರುವ ಶಾಸಕ ರವಿ ಗಣಿಗ, ದಾಖಲೆಗಳಿದ್ದರೆ ರಾಜ್ಯದ ಜನತೆಯ ಮುಂದಿಡಲಿ’ ಎಂದು ಚನ್ನಪಟ್ಟಣ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದರು.

ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘136 ಶಾಸಕರಿರುವ ಕಾಂಗ್ರೆಸ್‌ಗೆ, ಸರ್ಕಾರ ರಚಿಸಲು ಬೇಕಾದ ಶಾಸಕರ ಸಂಖ್ಯೆಯ ಮಿತಿ ಮೀರಿ ರಾಜ್ಯದ ಜನ ಶಕ್ತಿ ತುಂಬಿದ್ದಾರೆ. ಅದಕ್ಕೆ ಹಲವು ಕಾರಣಗಳಿವೆ. ಇಂತಹ ಸನ್ನಿವೇಶದಲ್ಲಿ ಸರ್ಕಾರ ಒಡೆಯುವ, ಶಾಸಕರನ್ನು ಖರೀದಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದರು.

‘ಒಂದೂವರೆ ವರ್ಷದಲ್ಲಿ ನಡೆದಿರುವ ಭ್ರಷ್ಟಾಚಾರ, ಹಗರಣ, ದುರಾಡಳಿತದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ. ಲೋಕಸಭಾ ಚುನಾವಣೆ ವೇಳೆ ನಾಲ್ಕು ತಿಂಗಳು ಗ್ಯಾರಂಟಿ ತಡೆ ಹಿಡಿದಿದ್ದರು. ಚುನಾವಣೆ ಬಂದಾಗ ಗೃಹಲಕ್ಷ್ಮಿ ಹಣ ಹಾಕಿದರು. ಮುಂದಿನ ಚುನಾವಣೆಯಲ್ಲಿ ರಾಜ್ಯದ ಜನ ಕಾಂಗ್ರೆಸ್ ಅನ್ನು ತಿರಸ್ಕರಿಸಲಿದ್ದಾರೆ’ ಎಂದರು.



ನಿಖಿಲ್ ಕುಮಾರಸ್ವಾಮಿ

> **ಕಾಂಗ್ರೆಸ್ ಶಾಸಕರ ಖರೀದಿಗೆ ಈಗಲೂ ಬಿಜೆಪಿ ಯತ್ನಿಸುತ್ತಿದೆ. ಈ ಕುರಿತು ದಾಖಲೆ ಸಿಕ್ಕರೆ ಅದರ ಬಗ್ಗೆಯೂ ತನಿಖೆ ಮಾಡುತ್ತೇವೆ**
> **ಜಿ.ಪರಮೇಶ್ವರ,** ಗೃಹ ಸಚಿವ

ಎಚ್‌.ಡಿ. ಕುಮಾರಸ್ವಾಮಿಯವರು ರೋಲ್‌ಕಾಲ್ ಮಾಡಿ ಸಾವಿರಾರು ಕೋಟಿ ಹಣ ಪಡೆದಿದ್ದಾರೆ. ಬಿಜೆಪಿಯ ಶೇ 40 ಕಮಿಷನ್ ಆರೋಪಕ್ಕೆ ತಪ್ಪಿತಸ್ಥರ ತಲೆದಂಡವಾಗಿದೆ. ಚನ್ನಪಟ್ಟಣ, ಶಿಗ್ಗಾವಿ ಉಪಚುನಾವಣೆಯಲ್ಲಿ ಎಷ್ಟು ಖರ್ಚಾಗಿದೆ ಗೊತ್ತಾ? ಜೆಡಿಎಸ್-ಬಿಜೆಪಿಗೆ ಸರಿಸಾಟಿಯಾಗಿ ನಾವು ಓಡೋಕೆ ಆಗಿಲ್ಲ. ಹೀಗಾಗಿ ಗ್ಯಾರಂಟಿ ಯೋಜನೆಗನ್ನು ಮುಂದಿಟ್ಟುಕೊಂಡು ಮತ ಕೇಳಿದ್ದೇವೆ’ ಎಂದರು.

‘ಪ್ರಲ್ಹಾದ ಜೋಶಿಯವರಿಗೆ ತಾಕತ್ತು ಜಾಸ್ತಿ. ನಮಗೆ ಸ್ವಲ್ಪ ಕಡಿಮೆ. ಅವರ ಆರೋಪಗಳಿಗೆ ಮೊದಲು ದಾಖಲೆಗಳನ್ನು ಬಿಡುಗಡೆ ಮಾಡಲಿ. ಕಡಿಮೆ ತಾಕತ್ತಿನ ನಾವು ಆ ಮೇಲೆ ಬಿಡುಗಡೆ ಮಾಡುತ್ತೇವೆ. ಸಮಯ ಬಂದಾಗ ಎಲ್ಲಾ ಬಿಡುಗಡೆಯಾಗುತ್ತದೆ’ ಎಂದರು.

‘ಆಫರ್ ಎಂದವರ ವಿರುದ್ಧ ಭಾರತ ಸರ್ಕಾರದ ಕ್ರಮ’

ಹುಬ್ಬಳ್ಳಿ: ‘ಕಾಂಗ್ರೆಸ್ ಶಾಸಕರಿಗೆ ₹50 ಕೋಟಿ, ₹100 ಕೋಟಿ, ₹500 ಕೋಟಿ ಆಫರ್ ಎಂದೆಲ್ಲ ಯಾರು ಮಾತನಾಡಿದ್ದಾರೋ ಅಂತಹವರ ವಿರುದ್ಧ ಭಾರತ ಸರ್ಕಾರ ಕ್ರಮ ಕೈಗೊಳ್ಳಲಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘₹100 ಕೋಟಿ ಆಫರ್ ಕೊಟ್ಟಿದ್ದಾರೆ ಎಂದು ಬಾಯಿ ಮಾತಿನಲ್ಲಿ ಹೇಳಬೇಡಿ. ಬಿಜೆಪಿಯ ಯಾವ ನಾಯಕರು ಆಫರ್ ಕೊಟ್ಟಿದ್ದಾರೆ ಎನ್ನುವುದಕ್ಕೆ ಮೊದಲು ದಾಖಲೆ ನೀಡಿ ನೋಡೋಣ’ ಎಂದು ಸವಾಲು ಹಾಕಿದರು.

‘ಆಫರ್ ಬಗ್ಗೆ ದಾಖಲೆ ಇದ್ದರೆ ಬಿಡುಗಡೆ ಮಾಡಲು ನಿಮ್ಮನ್ನು ಯಾರೂ ತಡೆದಿಲ್ಲ. ಶಾಸಕ ರವಿ ಗಣಿಗ ಅವತ್ತಿನಿಂದ ಹೇಳುತ್ತಿದ್ದಾರೆ, ಆದರೆ ಇನ್ನೂ ಏಕೆ ದಾಖಲೆ ಬಿಡುಗಡೆ ಮಾಡುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ಜತೆ ಸರ್ಕಾರ ರಚನೆ ಇಷ್ಟವಿರಲಿಲ್ಲ. ಹಿಂದೆ ಬಿಜೆಪಿ ಸರ್ಕಾರ ರಚಿಸುವಾಗ ಇದೇ ಸಿದ್ದರಾಮಯ್ಯ ತಮ್ಮ ಆಪ್ತ ಕಾಂಗ್ರೆಸ್ ಶಾಸಕರನ್ನು ಬಿಜೆಪಿಗೆ ಕಳಿಸಿದ್ದರು’ ಎಂದು ಆರೋಪಿಸಿದರು.

ಅಗತ್ಯ ಬಿದ್ದರೆ ಜಮೀರ್ ವಿರುದ್ಧ ಕ್ರಮ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಚಿವ ಜಮೀರ್ ಅಹಮ್ಮದ್ ಖಾನ್ ಹೇಳಿಕೆ ಉಪಚುನಾವಣೆಯಲ್ಲಿ ಪಕ್ಷಕ್ಕೆ ಹೊರೆಯಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷರೇ ಹೇಳಿದ್ದಾರೆ. ಅಧ್ಯಕ್ಷರು ಪಕ್ಷದ ಶಿಸ್ತುಪಾಲನಾ ಸಮಿತಿಗೆ ವರದಿ ಕೊಟ್ಟರೆ ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಕ್ರಮ ಕೈಗೊಳ್ಳಬಹುದು’ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾನು ಎಐಸಿಸಿ ಶಿಸ್ತುಸಮಿತಿ ಸದಸ್ಯನಾಗಿದ್ದಾಗ, ಪಕ್ಷಕ್ಕೆ ಹಾನಿಯಾಗುವಂಥ ಹೇಳಿಕೆ ಕೊಡುವ ನಾಯಕರು ಎಷ್ಟೇ ದೊಡ್ಡವರಿದ್ದರೂ ನೋಟಿಸ್ ಕೊಟ್ಟು ಕರೆಸುತ್ತಿದ್ದೆವು. ಅಮಾನತು ಸಹ ಮಾಡುತ್ತಿದ್ದೆವು’ ಎಂದರು.

‘ಬಿಜೆಪಿ ವಿರುದ್ಧ ಶೇ 40 ಕಮಿಷನ್ ಆರೋಪಕ್ಕೆ ದಾಖಲೆ ಇಲ್ಲ’ ಎಂದು ಲೋಕಾಯುಕ್ತ ತನಿಖೆಯಲ್ಲಿ ಉಲ್ಲೇಖಿಸಿರುವ ಕುರಿತು ಪ್ರತಿಕ್ರಿಯಿಸಿ, ‘ಕೆಂಪಣ್ಣ ಆಯೋಗ ಬರೆದ ಪತ್ರವನ್ನು ಆಧರಿಸಿ ನಾವು ಹೋರಾಡಿದ್ದೆವು. ನಮಗೆ ಅದೇ ದಾಖಲೆ. ಲೋಕಾಯುಕ್ತ ಪೊಲೀಸರು ಯಾವ ಆಧಾರದಲ್ಲಿ ಸಾಕ್ಷಿ ಇಲ್ಲವೆಂದಿದ್ದಾರೆಂದು ನೋಡಬೇಕು. ಅಗತ್ಯ ಕಂಡರೆ ಮರುತನಿಖೆಗೆ ಸಿದ್ಧರಿದ್ದೇವೆ’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ಕುರಿತು ಯಾವುದೇ ಚರ್ಚೆಯಾಗದಿದ್ದರೂ, ಬಿಜೆಪಿ–ಜೆಡಿಎಸ್‌ನವರು ಆ ಬಗ್ಗೆ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಕಂಡರೆ ಬಿಜೆಪಿಗೆ ಹೊಟ್ಟೆ ಉರಿ. ಹೀಗಾಗಿ ಅವರನ್ನು ಸಿ.ಎಂ. ಸ್ಥಾನದಿಂದ ಇಳಿಸಲು ಡೇಟ್ ಫಿಕ್ಸ್ ಮಾಡುತ್ತಾರೆ. ತಮ್ಮ ಪರ ಜನ ಬೀದಿಗಿಳಿದು ಹೋರಾಡುತ್ತಾರೆ ಎಂದು ಸಿದ್ದರಾಮಯ್ಯ ಹೇಳುವುದು ಸಹಜವಲ್ಲವೇ. ಅವರ ವಿರುದ್ಧ ಸುಮ್ಮನೆ ಆರೋಪಿಸುತ್ತಾರೆಂದರೆ ಜನ ಏನು ಮಾಡುತ್ತಾರೆ ಹೇಳಿ? ಅದನ್ನೇ ಮುಖ್ಯಮಂತ್ರಿ ಹೇಳಿದ್ದಾರೆ’ ಎಂದು ತಿಳಿಸಿದರು.



ಪರಮೇಶ್ವರ

ಸಂಪುಟ ಸಭೆಯಲ್ಲಿ ತೀರ್ಮಾನ: ಕೋವಿಡ್ ಹಗರಣ ಕುರಿತು ಪ್ರತಿಕ್ರಿಯಿಸಿ, ‘ಕೋವಿಡ್ ವೇಳೆ ಮಾತ್ರೆ ಮತ್ತು ಹಾಸಿಗೆಗಳ ಖರೀದಿಯಲ್ಲಿ ಕೋಟ್ಯಂತರ ರೂಪಾಯಿ ಭ್ರಷ್ಟಾಚಾರವಾಗಿದ್ದು, ತನಿಖಾ ವರದಿ ಸರ್ಕಾರದ ಕೈ ಸೇರಿದೆ. ಚೀನಾ ಮೂಲದ ಉತ್ಪನ್ನಗಳಿಗೆ ಭಾರಿ ಬೆಲೆ ನಿಗದಿಪಡಿಸಿ ಅವ್ಯವಹಾರ ಮಾಡಲಾಗಿದೆ. ಹಗರಣವನ್ನು ಎಸ್‌ಐಟಿಗೆ ವಹಿಸಬೇಕೆ ಅಥವಾ ಸಿಬಿಐಗೆ ನೀಡಬೇಕೆ ಎಂಬುದನ್ನು ಸಂಪುಟ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸುತ್ತೇವೆ’ ಎಂದರು.

‘ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು, ಎರಡೆರಡು ಕಾರ್ ಉಳ್ಳವರು ಬಿಪಿಎಲ್ ಕಾರ್ಡ್‌ ಪಡೆದಿದ್ದಾರೆ. ಅಂಥವರು ವಾಪಸು ಕೊಡಬೇಕು. ಸರ್ಕಾರ ಕಾನೂನು ಕ್ರಮ ಕೈಗೊಂಡರೆ ಕಷ್ಟವಾಗುತ್ತದೆ. ಜಿಲ್ಲಾಮಟ್ಟದ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ’ ಎಂದರು.


ಕಾರು ಅಡ್ಡಗಟ್ಟಿ ₹75 ಲಕ್ಷ ದರೋಡೆ ಪ್ರಕರಣಕ್ಕೆ ತಿರುವು


ದೂರುದಾರ ಸೇರಿ ಮೂವರು ವಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹುಕ್ಕೇರಿ ತಾಲ್ಲೂಕಿನ ಹರಗಾಪುರ ಬಳಿ ಇಬ್ಬರು ದುಷ್ಕರ್ಮಿಗಳು ತಮ್ಮ ಕಾರು ಅಡ್ಡಗಟ್ಟಿ, ಗನ್ ತೋರಿಸಿ ₹75 ಲಕ್ಷ ಹಣ ದೋಚಿದ್ದಾರೆ' ಎಂದು ಸಂಕೇಶ್ವರ ಠಾಣೆಯಲ್ಲಿ ದೂರು ದಾಖಲಿಸಿದ್ದ ಪ್ರಕರಣ ಈಗ ಹೊಸ ತಿರುವು ಪಡೆದಿದೆ. ದೂರುದಾರ ಸೇರಿ ಮೂವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಆ ಕಾರಿನಲ್ಲಿ ₹1.01 ಕೋಟಿ ಹಣ ಪತ್ತೆಯಾಗಿದೆ.

'ಕೊಲ್ಹಾಪುರದಿಂದ ಬರುತ್ತಿದ್ದ ಕಾರನ್ನು ನವೆಂಬರ್ 15ರಂದು ಹರಗಾಪುರ ಬಳಿ ಅಡ್ಡಗಟ್ಟಿ ದರೋಡೆ ಮಾಡಲಾಗಿದೆ ಎಂದು ಮಹಾರಾಷ್ಟ್ರದ ಸೂರಜ್ ಹೊನಮಾನೆ ದೂರು ಕೊಟ್ಟಿದ್ದರು. ಆದರೆ, ನೇರ್ಲಿ ಗ್ರಾಮದ ಬಳಿ ಕಾರು ಪತ್ತೆಯಾಗಿದೆ. ದೂರು ಕೊಟ್ಟವರ ಮೇಲೆಯೇ ಸಂಶಯ ಬಂದಿದೆ. ಹಾಗಾಗಿ ಕಾರು ಚಾಲಕ ಆರಿಫ್ ಶೇಖ್, ಅದರಲ್ಲಿ ಪ್ರಯಾಣಿಸುತ್ತಿದ್ದ ದೂರುದಾರ ಸೂರಜ್ ಮತ್ತು ಅಜಯ ಸರಗಾರ ಅವರನ್ನು ವಶಕ್ಕೆ ಪಡೆದಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಭೀಮಾಶಂಕರ ಗುಳೇದ


ಕಾರಿನಲ್ಲಿ ಹಣ ಸಾಗಿಸಲು ಗೇರ್‌ಬಾಕ್ಸ್ ಮತ್ತು ಹ್ಯಾಂಡ್‌ಬ್ರೇಕ್ ಕೆಳಗಿನ ಮೂಲವಿನ್ಯಾಸ ಬದಲಿಸಿ, ಅದರಲ್ಲಿ ಬಾಕ್ಸ್ ರಚಿಸಿರುವುದು

'₹75 ಲಕ್ಷ ಕಳವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿತ್ತು. ಆದರೆ, ಕಾರಿನಲ್ಲಿ ₹1.01 ಕೋಟಿ ಸಿಕ್ಕಿದೆ. ಈ ಬಗ್ಗೆ ದೂರು ಕೊಟ್ಟವರನ್ನು ಕೇಳಿದಾಗ, ವ್ಯಾಪಾರಿಯೊಬ್ಬರು ಕೊಟ್ಟ ಹಣ ಎಣಿಸದೆ ತೆಗೆದುಕೊಂಡು ಬರುತ್ತಿದ್ದೆವು. ₹75 ಲಕ್ಷ ಇರಬಹುದೆಂದು ಭಾವಿಸಿದ್ದೆವು ಎಂದು ಹೇಳಿಕೆ ಕೊಟ್ಟಿದ್ದಾರೆ. ಎಲ್ಲ ಆಯಾಮಗಳಿಂದ ತನಿಖೆ ನಡೆದಿದೆ' ಎಂದು ತಿಳಿಸಿದರು.

'ಕಾರಿನ ಮುಂದಿನ ಎರಡು ಸೀಟುಗಳ ಮಧ್ಯೆ ಇರುವ ಗೇರ್‌ಬಾಕ್ಸ್ ಮತ್ತು ಹ್ಯಾಂಡ್‌ಬ್ರೇಕ್ ಕೆಳಗಿನ ಮೂಲವಿನ್ಯಾಸ ಬದಲಿಸಿ, ಅದರಲ್ಲಿ ಬಾಕ್ಸ್ ರಚಿಸಿದ್ದರು. ಅದರಲ್ಲೇ ಹಣ ತೆಗೆದುಕೊಂಡು ಹೋಗುತ್ತಿದ್ದರು. ಹಾಗಾಗಿ ಮೋಟಾರು ವಾಹನಗಳ ಕಾಯ್ದೆಯಡಿ ಕಾರಿನ ಮಾಲೀಕರ ವಿರುದ್ಧ ಸಹ ದೂರು ದಾಖಲಿಸಿದ್ದೇವೆ' ಎಂದರು.


ಪೊಲೀಸರು ವಶಕ್ಕೆ ಪಡೆದ ಹಣ

'ಮಹಾರಾಷ್ಟ್ರದ ಸಾಂಗ್ಲಿಯ ಭರತ್ ಮಾರಗುಡೆ ಎಂಬ ವ್ಯಾಪಾರಿ ಕೇರಳದಲ್ಲಿ ಹಳೇ ಚಿನ್ನ ಮಾರಾಟ ಮಾಡುತ್ತಾರೆ. ಮಹಾರಾಷ್ಟ್ರದ ಕೊಲ್ಹಾಪುರಕ್ಕೆ ಹಳೆ ಚಿನ್ನ ಕಳುಹಿಸುತ್ತಿದ್ದರು. ಇಲ್ಲಿಂದ ಕೇರಳಕ್ಕೆ ಹಣ ಹೋಗುತ್ತಿತ್ತು. ಈ ಪ್ರಕರಣದಲ್ಲಿ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಸಾಧ್ಯತೆ ಇದೆ. ಕೇರಳ, ಮಹಾರಾಷ್ಟ್ರ ಮತ್ತು ಸ್ಥಳೀಯವಾಗಿಯೂ ಮೂರು ತಂಡಗಳು ತನಿಖೆ ಕೈಗೊಳ್ಳುತ್ತಿವೆ' ಎಂದು ಹೇಳಿದರು.

'₹1 ಕೋಟಿಗೂ ಅಧಿಕ ಹಣ ಪತ್ತೆಯಾದ ಕಾರಣ, ತೆರಿಗೆ ಇಲಾಖೆಗೂ ಈ ಕುರಿತು ಮಾಹಿತಿ ಕೊಟ್ಟಿದ್ದೇವೆ' ಎಂದರು.

'ಎಸ್.ಡಿ.ಎ ಆತ್ಮಹತ್ಯೆಯಲ್ಲ, ಕೊಲೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಇಲ್ಲಿನ ತಹಶೀಲ್ದಾರ್ ಕಚೇರಿ ಎಸ್‌ಡಿಎ ರುದ್ರಣ್ಣ ಯಡವಣ್ಣವರ ಅವರದ್ದು ಆತ್ಮಹತ್ಯೆಯಲ್ಲ, ಕೊಲೆ' ಎಂದು ಬರೆದ ಅನಾಮಧೇಯ ಪತ್ರವೊಂದು ಖಡೇಬಜಾರ್ ಎಸಿಪಿ ಅವರಿಗೆ ಬಂದಿದೆ.

ಆರೋಪಿಗಳಾದ ತಹಶೀಲ್ದಾರ್ ಬಸವರಾಜ ನಾಗರಾಳ, ಎಫ್‌ಡಿಎ ಅಶೋಕ ಕಬ್ಬಲಿಗೇರ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಆಪ್ತ ಸಹಾಯಕ ಸೋಮು ದೊಡವಾಡಿ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರಾದ ಬೆನ್ನಲ್ಲೇ ಈ ಪತ್ರ ಬಂದಿದೆ.

ಬಿಳಿ ಹಾಳೆಯ ಮೇಲೆ ಟೈಪ್ ಮಾಡಿ ಲಕೋಟೆಯಲ್ಲಿ ಹಾಕಿ ಖಡೇಬಜಾರ್ ಠಾಣೆಗೆ ಪೋಸ್ಟ್ ಮಾಡಲಾಗಿದೆ. ಇದರ ಪ್ರತಿಗಳನ್ನು ರಾಜ್ಯಪಾಲರು, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿ, ನಗರ ಪೊಲೀಸ್ ಆಯುಕ್ತರು ಸೇರಿ ಹಲವರಿಗೆ ಪೋಸ್ಟ್ ಮಾಡಲಾಗಿದೆ ಎಂದೂ ಪತ್ರದಲ್ಲಿ ಪಟ್ಟಿ ನೀಡಲಾಗಿದೆ.


ರುದ್ರಣ್ಣ ಯಡವಣ್ಣವರ

ನವೆಂಬರ್ 5ರಂದು ಇಲ್ಲಿನ ತಹಶೀಲ್ದಾರ್ ಟೇಬಲ್ಲಿನ ಮುಂದೆಯೇ ರುದ್ರಣ್ಣ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

'ರುದ್ರಣ್ಣನದು ಆತ್ಮಹತ್ಯೆ ಎಂದು ಬಿಂಬಿಸಲಾಗುತ್ತಿದೆ. ಅವನು ಆತ್ಮಹತ್ಯೆ ಮಾಡಿಕೊಂಡಿಲ್ಲ, ಇದು ಕೊಲೆ. ತಹಶೀಲ್ದಾರ್ ಜೀಪ್‌ನ ಚಾಲಕ ಯಲ್ಲಪ್ಪ ಬಡಸದ ಎಂಬಾತನೇ ಕೊಲೆಯ ಸೂತ್ರದಾರ. ಆ ವಾಹನ ತಪಾಸಣೆ ಮಾಡಿ ಯಲ್ಲಪ್ಪನ ವಿಚಾರಣೆ ಮಾಡಿದರೆ ಕೊಲೆ ರಹಸ್ಯ ಹೊರಬರುತ್ತದೆ. ಯಲ್ಲಪ್ಪನ ಪತ್ನಿ ಅನೈತಿಕ ಸಂಬಂಧ ಇಟ್ಟುಕೊಂಡು, ರುದ್ರಣ್ಣನ ದುಡ್ಡು ಹೊಡೆದಿದ್ದಾಳೆ. ಮೃತರಿಗೆ ನ್ಯಾಯ ಸಿಗಬೇಕು. ಪ್ರಕರಣ ಮುಚ್ಚಿ ಹಾಕಬಾರದು' ಎಂದು ಪತ್ರದಲ್ಲಿ ಬರೆಯಲಾಗಿದೆ.

'ರುದ್ರಣ್ಣ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಎಸಿಪಿಗೆ ಬಂದಿರುವ ಅನಾಮಧೇಯ ಪತ್ರದ ಬಗ್ಗೆ ಪರಿಶೀಲಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ 'ಪ್ರಜಾವಾಣಿ'ಗೆ ತಿಳಿಸಿದರು.

ರೆಸಾರ್ಟ್ ಮಾಲೀಕ ಸೇರಿ ಇಬ್ಬರ ಬಂಧನ

ಉಳ್ಳಾಲ (ದಕ್ಷಿಣ ಕನ್ನಡ): ರೆಸಾರ್ಟ್‌ನ ಈಜುಕೊಳದಲ್ಲಿ ಮೂವರು ಯುವತಿ ಯರು ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ರೆಸಾರ್ಟ್ ಮಾಲೀಕ ಮನೋಹರ್ ವಿ.ಪುತ್ರನ್ ಮತ್ತು ವ್ಯವಸ್ಥಾಪಕ ಭರತ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಸೋಮೇಶ್ವರದ ಪರಿಬೈಲ್ ಬೆಟ್ಟಪ್ಪಾಡಿ ಕ್ರಾಸ್‌ನಲ್ಲಿರುವ ವಾಸ್ಕೊ ರೆಸಾರ್ಟ್‌ನಲ್ಲಿ ತಂಗಿದ್ದ ಮೈಸೂರು ವಿಜಯನಗರದ ನವೀನ್ ಕುಮಾರ್ ಅವರ ಪುತ್ರಿ ಕೀರ್ತನಾ ಎನ್ (21), ಕುರುಬರಹಳ್ಳಿ 4ನೇ ಕ್ರಾಸ್ ನಿವಾಸಿ ಮಲ್ಲೇಶ್ ಅವರ ಪುತ್ರಿ ನಿಶಿತಾ ಎಂ.ಡಿ (21) ಹಾಗೂ ರಾಮಾನುಜ ರಸ್ತೆ 11ನೇ ಕ್ರಾಸ್ ನಿವಾಸಿ ಎಂ.ಎನ್ ಶ್ರೀನಿವಾಸ್ ಅವರ ಪುತ್ರಿ ಪಾರ್ವತಿ ಎಸ್ (20) ಭಾನುವಾರ ಸಾವಿಗೀಡಾಗಿದ್ದರು.

ಮೈಸೂರಿನ ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದ ಇವರು, ಶನಿವಾರ ಇಲ್ಲಿ ಕೊಠಡಿ ಬಾಡಿಗೆಗೆ ಪಡೆದುಕೊಂಡಿದ್ದರು. ಭಾನುವಾರ ವಿಡಿಯೊ ಮಾಡುವುದಕ್ಕಾಗಿ ನೀರಿಗಿಳಿದ್ದರು. ಆಳವಿರುವ ಕಡೆ ತೆರಳಿದಾಗ ಈಜು ಬಾರದೆ ಮುಳುಗಿ ಮೃತಪಟ್ಟಿರಬಹುದೆಂದು ಪೊಲೀಸರು ತಿಳಿಸಿದ್ದರು.

ಈಜುಕೊಳಕ್ಕೆ ಸಿಬ್ಬಂದಿ ನಿಯೋಜಿಸದೆ ಮತ್ತು ನೀರಿನ ಆಳದ ಬಗ್ಗೆ ಮಾಹಿತಿ ಫಲಕ ಅಳವಡಿಸದೆ ಸುರಕ್ಷತಾ ಲೋಪ ಎಸಗಿದ್ದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಡಿಒ ಹುದ್ದೆ ಪರೀಕ್ಷೆ: ಗೊಂದಲ ಸೃಷ್ಟಿಸಿದ ಆರೋಪ

12 ಮಂದಿ ವಿರುದ್ಧ ಪ್ರಕರಣ ದಾಖಲು: ಪರೀಕ್ಷಾರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಕರ್ನಾಟಕ ಲೋಕಸೇವಾ ಆಯೋಗದಿಂದ ಭಾನುವಾರ ಸಿಂಧನೂರಿನ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ನಡೆದ ಪಿಡಿಒ ಹುದ್ದೆಗಳ ಪರೀಕ್ಷೆಯಲ್ಲಿ ಕೆಲ ಪರೀಕ್ಷಾರ್ಥಿಗಳು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಪ್ರತಿಭಟಿಸಿ ಗೊಂದಲ ಸೃಷ್ಟಿಸಿದ ಆರೋಪದ ಮೇಲೆ 12 ಪರೀಕ್ಷಾರ್ಥಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಪಶುಪತಿ ಎಂಬ ಪರೀಕ್ಷಾರ್ಥಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಶ್ನೆ ಪತ್ರಿಕೆಗಳನ್ನು ವಿತರಿಸುವ ಸಮಯದಲ್ಲಿ ಪಶುಪತಿ ಎಂಬ ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯ ಬಂಡಲ್ ಮೊದಲೇ ತೆರೆಯಲಾಗಿದೆ ಎಂದು ಅನುಮಾನ ವ್ಯಕ್ತಪಡಿಸಿ, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಕೂಗಿ ಉಳಿದ ಪರೀಕ್ಷಾರ್ಥಿಗಳನ್ನು ಪ್ರಚೋದಿಸಿದ್ದಾನೆ. ಸಿಂಧನೂರು-ಕುಷ್ಟಗಿ ಮುಖ್ಯ ಹೆದ್ದಾರಿಯಲ್ಲಿ ಕುಳಿತು ವಾಹನ ಸಂಚಾರ ತಡೆದು ಪ್ರತಿಭಟಿಸಿ, ಪರೀಕ್ಷೆ ನಡೆಸಲು ತೊಂದರೆ ನೀಡಿದ್ದಾರೆ. ಪಶುಪತಿಯ ಜೊತೆಗೆ ಸುರಪುರದ ಬಾಬು, ಅಯ್ಯನಗೌಡ, ಅಮಿತ್, ವೆಂಕಟೇಶ್, ರವಿಶಂಕರ್, ವಿಶ್ವಾರಾಧ್ಯ, ಬಸವರಾಜ್, ವೆಂಕಟೇಶ್, ರಾಘವೇಂದ್ರ, ಸಾಬರೆಡ್ಡಿ ಅವರು ಸಹ ಪರೀಕ್ಷಾ ಕೊಠಡಿಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಬಸವರಾಜ್ ತಡಕಲ್ ಅವರು ಶಹರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸ್ ಇನ್‌ಸ್ಪೆಕ್ಟರ್ ದುರುಗಪ್ಪ ಡೊಳ್ಳಿನ್ ತನಿಖೆ ಕೈಗೊಳ್ಳುತ್ತಿದ್ದಾರೆ.

ಇಂದು ಪ್ರತಿಭಟನೆ: ಪಿಡಿಒ ಹುದ್ದೆಗಳ ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ವಿತರಣೆಯಲ್ಲಿ ವಿಳಂಬ, ಸೋರಿಕೆ ಆಗಿದೆ ಎಂಬ ಗೊಂದಲದ ಬಗ್ಗೆ ತನಿಖೆ ನಡೆಸಬೇಕು ಹಾಗೂ ಪ್ರತಿಭಟಿಸಿದ ಪರೀಕ್ಷಾರ್ಥಿಗಳ ವಿರುದ್ಧ ಪ್ರಕರಣ ದಾಖಲಿಸಿರುವುದನ್ನು ಖಂಡಿಸಿ ದಲಿತ ವಿದ್ಯಾರ್ಥಿ ಪರಿಷತ್ ತಾಲ್ಲೂಕು ಘಟಕದಿಂದ ನವೆಂಬರ್ 19ರಂದು ಬೆಳಿಗ್ಗೆ 10.30 ಗಂಟೆಗೆ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ ಜಿಲ್ಲಾ ಘಟಕದ ಸಂಚಾಲಕ ಮೌನೇಶ ಜಾಲವಾಡಗಿ ತಿಳಿಸಿದ್ದಾರೆ.

ಇಬ್ಬರು ಮಕ್ಕಳ ಮೃತದೇಹ ಪತ್ತೆ ತಂದೆಗಾಗಿ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಯಮಕನಮರಡಿ (ಬೆಳಗಾವಿ ಜಿಲ್ಲೆ): ಸಮೀಪದ ಬೆನಕನಹೊಳಿ ಬಳಿ ಘಟಪ್ರಭಾ ನದಿ ಹಿನ್ನೀರಿನ ಪ್ರದೇಶದಲ್ಲಿ ತಂದೆಯೊಂದಿಗೆ ಮೀನುಗಾರಿಕೆಗೆ ಹೋದಾಗ ನೀರುಪಾಲಾಗಿದ್ದ ಇಬ್ಬರು ಮಕ್ಕಳ ಮೃತದೇಹ ಸೋಮವಾರ ಸಂಜೆ ಪತ್ತೆಯಾಗಿವೆ.


ಲಕ್ಷ್ಮಣ ಅಂಬಲಿ


ರಮೇಶ ಅಂಬಲಿ


ಯಲ್ಲಪ್ಪ ಅಂಬಲಿ

ಬೆನಕನಹೊಳಿಯ ರಮೇಶ ಅಂಬಲಿ(15), ಯಲ್ಲಪ್ಪ ಅಂಬಲಿ(13) ಮೃತರು. ಅವರ ತಂದೆ ಲಕ್ಷ್ಮಣ ಅಂಬಲಿ(45) ಪತ್ತೆಗಾಗಿ ಅಗ್ನಿಶಾಮಕ ದಳ ತಂಡ ಹಾಗೂ ಪೊಲೀಸರಿಂದ ಕಾರ್ಯಾಚರಣೆ ಮುಂದುವರಿದಿದೆ.

'ಲಕ್ಷ್ಮಣ ಅವರು ಘಟಪ್ರಭಾ ನದಿ ಸೇತುವೆ ಮೇಲೆ ಭಾನುವಾರ ರಾತ್ರಿ ಬೈಕ್ ನಿಲ್ಲಿಸಿ ತಮ್ಮ ಇಬ್ಬರು ಮಕ್ಕಳೊಂದಿಗೆ ಮೀನುಗಾರಿಕೆಗಾಗಿ ನದಿಗೆ ಇಳಿದಿದ್ದರು. ಆದರೆ, ಸೋಮವಾರ ಬೆಳಿಗ್ಗೆ ವರೆಗೂ ಮನೆಗೆ ಮರಳಿ ಬಂದಿರಲಿಲ್ಲ. ಊರಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಛಾಯಾಗ್ರಾಹಕರಾಗಿದ್ದ ಎಂದು ಕುಟುಂಬದವರು ತಿಳಿಸಿದ್ದಾರೆ. ಅಲ್ಲಿ ವಿಚಾರಿಸಿದಾಗ ಸುಳಿವು ಸಿಗಲಿಲ್ಲ. ಆಗ ಈ ಅವಘಡ ನಡೆದಿರುವುದು ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸುದ್ದಿಗಾರರಿಗೆ ತಿಳಿಸಿದರು.

'ಕುಟುಂಬದ ಸದಸ್ಯರಿಗೆ ಸೂಕ್ತ ಪರಿಹಾರ ನೀಡಲಾಗುವುದು' ಎಂದು ಮೀನುಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬಾಂಗ್ಲಾದೇಶದ ಇಬ್ಬರು ಪ್ರಜೆಗಳು ಪತ್ತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಖಾಸಗಿ ಸಿದ್ಧ ಉಡುಪು ಕಾರ್ಖಾನೆ (ಗಾರ್ಮೆಂಟ್ಸ್) ಮೇಲೆ ದಾಳಿ ನಡೆಸಿದ ಪೊಲೀಸರು ಬಾಂಗ್ಲಾದೇಶ ಮೂಲದ ಇಬ್ಬರನ್ನು ಪತ್ತೆ ಹಚ್ಚಿದ್ದಾರೆ.

ಕೋಟೆ ಠಾಣೆ, ಗ್ರಾಮಾಂತರ ಠಾಣೆ ಪೊಲೀಸರು ವಿವಿಧ ಕಾರ್ಖಾನೆಗಳಲ್ಲಿ ಪರಿಶೀಲನೆ ನಡೆಸಿದಾಗ 15 ಮಂದಿ ಶಂಕಿತ ಬಾಂಗ್ಲಾದೇಶ ಪ್ರಜೆಗಳು ಪತ್ತೆಯಾಗಿದ್ದಾರೆ. ಅವರಲ್ಲಿ ಕೆಲವರು ಪಶ್ಚಿಮ ಬಂಗಾಳದ ಆಧಾರ್ ಕಾರ್ಡ್ ಹೊಂದಿದ್ದಾರೆ. ಆದರೆ ಇಬ್ಬರು ಬಾಂಗ್ಲಾದೇಶದಿಂದ ಬಂದಿರುವುದು ಗೊತ್ತಾಗಿದೆ. ಅವರ ವಿಚಾರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ನೇತೃತ್ವದಲ್ಲಿ ಡಿವೈಎಸ್‌ಪಿ ದಿನಕರ್, ಸರ್ಕಲ್ ಇನ್‌ಸ್ಪೆಕ್ಟರ್ ಗುಡ್ಡಪ್ಪ ಹಾಗೂ ಸಿಬ್ಬಂದಿ ವಿಚಾರಣೆ ನಡೆಸುತ್ತಿದ್ದಾರೆ.

ಚಿರತೆ ದಾಳಿಗೆ ಮಹಿಳೆ ಬಲಿ

ಒಂದನೇ ಪುಟದಿಂದ...

'ಆಗ ಗ್ರಾಮದ 80ಕ್ಕೂ ಹೆಚ್ಚು ಜನರು ಗುಂಪುಕಟ್ಟಿಕೊಂಡು, ಹುಡುಕಾಡಿದೆವು. ರಸ್ತೆಗೆ ಸಮೀಪವೇ ಚಿರತೆ ಗುಟುರು ಹಾಕುವ ಸದ್ದು ಕೇಳಿತು. ಅಲ್ಲೇ ಅವರ ಮೃತದೇಹ ಇತ್ತು' ಎಂದು ಗ್ರಾಮದ ಮುನಿರಂಗಯ್ಯ ವಿವರಿಸಿದರು.

'ಎಲ್ಲರೂ ಗಲಾಟೆ ಮಾಡಿ ಚಿರತೆಯನ್ನು ಓಡಿಸಿದೆವು. ಕರಿಯಮ್ಮ ದೇಹದಲ್ಲಿ ರುಂಡವೇ ಇರಲಿಲ್ಲ. ಪೊಲೀಸರಿಗೆ ಮತ್ತು ಅರಣ್ಯಾಧಿಕಾರಿಗಳಿಗೆ ಕರೆ ಮಾಡಿದೆವು. ಪೊಲೀಸರು, ಅರಣ್ಯ ಕಾವಲುಗಾರರು ಬಂದರು. ರಾತ್ರಿ 10ರ ವೇಳೆಗೆ ಮತ್ತೆ ಹಿಂತಿರುಗಿದ ಚಿರತೆ, ದೇಹವನ್ನು ಮತ್ತಷ್ಟು ದೂರ ಎಳೆದೊಯ್ದಿತು. ಬೆಂಕಿ ಹಚ್ಚಿ, ಗಲಾಟೆ ಮಾಡಿದ್ದರಿಂದ ಬಿಟ್ಟು ಹೋಯಿತು' ಎಂದು ಮಾಹಿತಿ ನೀಡಿದರು.

ಮೃತದೇಹದ ತಲೆಯನ್ನು ಬೇರೆಡೆ ಒಯ್ದು ತಿಂದು ಹಾಕಿದೆ. ಭುಜ, ಎದೆ ಮತ್ತು ಎಡಗೈ ಅನ್ನು ಪೂರ್ಣ ತಿಂದುಹಾಕಿದೆ.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: 'ಈಗಾಗಲೇ ಚಿರತೆ ಗ್ರಾಮದ ಎರಡು ಮೂರು ಮಂದಿ ಮೇಲೆ ದಾಳಿ ಮಾಡಿದೆ. ಈ ಕುರಿತು ಅರಣ್ಯ ಇಲಾಖೆಗೆ ಲಿಖಿತ ದೂರು ನೀಡಿದ್ದರೂ ಕೇವಲ ಬೋನು ತಂದಿಟ್ಟು ನಿರ್ಲಕ್ಷ್ಯ ತೋರಿದ್ದರು. ಅಂದು ಎಚ್ಚೆತ್ತುಕೊಂಡಿದ್ದರೆ ಇಂಥ ಅನಾಹುತ ಆಗುತ್ತಿರಲಿಲ್ಲ' ಎಂದು ಗ್ರಾಮಸ್ಥರು ದೂರಿದರು.

ಹಿಂದಿನ ದಾಳಿಗಳು

- ನವೆಂಬರ್ 19, 2023: ಚಿರತೆ ಕಂಬಾಳುವಿನ ಕಲ್ಪವೇಂದ್ರ ಅವರ ಮನೆಯ ಮುಂದಿನ ಸಾಕು ನಾಯಿಯನ್ನು ಚಿರತೆ ಹೊತ್ತೊಯ್ದಿತ್ತು. ಇದು ಸಿ.ಸಿ. ಟಿ.ವಿಯಲ್ಲಿ ದಾಖಲಾಗಿತ್ತು.
- ಡಿಸೆಂಬರ್ 1, 2023: ಕಂಬಾಳು ಗೊಲ್ಲರಹಟ್ಟಿಯಲ್ಲಿ ಮೃತ ಮಹಿಳೆ ಕರಿಯಮ್ಮ ಅವರ ಅತ್ತಿಗೆ ಅಮ್ಮಯ್ಯಮ್ಮ ಮೇಲೆ ಚಿರತೆ ದಾಳಿ ಮಾಡಿ, ಗಾಯಗೊಳಿಸಿತ್ತು.

ಮೃತ ಮಹಿಳೆಯ ಅತ್ತಿಗೆ ಅಮ್ಮಯ್ಯಮ್ಮ ಮಾತನಾಡಿ, 'ಸೆಪ್ಟೆಂಬರ್‌ನಲ್ಲಿ ನನ್ನ ಮೇಲೂ ಚಿರತೆ ದಾಳಿ ನಡೆಸಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ' ಎಂದು ತಮ್ಮ ಬೆನ್ನಿನಲ್ಲಿರುವ ಗಾಯವನ್ನು ತೋರಿಸಿದರು.

ಈ ವೇಳೆ ಮಾತನಾಡಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೈಯದ್ ನಿಜಾಮುದ್ದೀನ್ 'ಕ್ಯಾಮೆರಾದ ಸಹಾಯದೊಂದಿಗೆ ಕಾರ್ಯಾಚರಣೆ ನಡೆಸಿ ಚಿರತೆಯನ್ನು ಪತ್ತೆ ಹಚ್ಚಿ ಹಿಡಿಯುತ್ತೇವೆ. ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅವರ ನೆರವನ್ನು ಪಡೆಯುತ್ತೇವೆ. ಸರ್ಕಾರದಿಂದ ಮೃತ ಮಹಿಳೆ ಕುಟುಂಬಕ್ಕೆ ₹15 ಲಕ್ಷ ಪರಿಹಾರ ದೊರಕಿಸಿ ಕೊಡುತ್ತೇವೆ' ಎಂದು ಭರವಸೆ ನೀಡಿದರು.

ಚಿಂಚೋಳಿ: ವೃದ್ಧೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಮನೆಯಲ್ಲಿ ಭಾನುವಾರ ರಾತ್ರಿ ಒಂಟಿಯಾಗಿ ಮಲಗಿದ್ದ 75 ವರ್ಷದ ವೃದ್ಧೆಯ ಮೇಲೆ ಯುವಕನೊಬ್ಬ ಹಲ್ಲೆ ಮಾಡಿ, ಅತ್ಯಾಚಾರ ನಡೆಸಿದ್ದಾನೆ.

ಐನೋಳ್ಳಿ ಗ್ರಾಮದ ತಯ್ಯಬ್ ಫಕೀರ್ ಶಹಾ (30) ಅತ್ಯಾಚಾರ ಎಸಗಿದ ಆರೋಪಿ. ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ವೃದ್ಧೆಯ ಒಬ್ಬ ಮಗ ಮೃತಪಟ್ಟಿದ್ದು, ಇನ್ನೊಬ್ಬ ಮಗ ಪತ್ನಿಯೊಂದಿಗೆ ನೆರೆಯ ಚಂದಾಪುರದಲ್ಲಿ ವಾಸವಾಗಿದ್ದಾನೆ. ಮಗಳು ಬೀದರ್‌ನ ಗಂಡನ ಮನೆಯಲ್ಲಿದ್ದಾಳೆ. ವೃದ್ಧೆಯು ತನ್ನ ಮನೆಯಲ್ಲಿ ಒಂಟಿಯಾಗಿ ವಾಸವಿದ್ದು, ಭಾನುವಾರ ರಾತ್ರಿ ಊಟ ಮಾಡಿ ಮಲಗಿದ್ದಳು. ರಾತ್ರಿ ಮನೆಗೆ ನುಗ್ಗಿದ ತಯ್ಯಬ್, ವೃದ್ಧೆಯ ಮೇಲೆ ಹಲ್ಲೆ ಮಾಡಿ ಅತ್ಯಾಚಾರ ಎಸಗಿದ್ದಾನೆ.

ಬಳಿಕ ಆಕೆಯ ಬಳಿ ಇದ್ದ ನಗದು ಮತ್ತು ಕೀಪ್ಯಾಡ್ ಮೊಬೈಲ್ ದೋಚಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃಷ್ಣಮಠ: ಗೀತೋತ್ಸವ ನಾಳೆಯಿಂದ


ಪ್ರಜಾವಾಣಿ ವಾರ್ತೆ

ಉಡುಪಿ: ಪರ್ಯಾಯ ಪುತ್ತಿಗೆ ಮಠದ ವತಿಯಿಂದ ವಿಶ್ವ ಗೀತಾ ಪರ್ಯಾಯ ಅಂಗವಾಗಿ ಇದೇ 20ರಿಂದ ಡಿಸೆಂಬರ್ 29ರ ವರೆಗೆ ಕೃಷ್ಣಮಠದಲ್ಲಿ 'ಗೀತೋತ್ಸವ' ನಡೆಯಲಿದೆ ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಗೀತೋತ್ಸವದಲ್ಲಿ ಭಗವದ್ಗೀತೆಯ ಬಗೆಗಿನ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಕೃಷ್ಣಮಾಸೋತ್ಸವವಾಗಿ ಒಂದು ತಿಂಗಳ ಕಾಲ ಆಚರಿಸಿದಂತೆ, ಭಗವದ್ಗೀತೆ ಬಗ್ಗೆ ಜನಸಾಮಾನ್ಯರಿಗೆ ತಿಳಿಸುವ ಆಶಯದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಗೀತೋತ್ಸವದಲ್ಲಿ ಕೋಟಿ ಗೀತಾಲೇಖನ ಯಜ್ಞ, ಸಹಸ್ರಕಂಠ ಗೀತಾ ಗಾಯನ, ಗೀತಾ ಹರಿಕಥೆ, ಗೀತಾ ಅಂಚೆ ಲಕೋಟೆ ಬಿಡುಗಡೆ, ಶಾಲಾ ವಿದ್ಯಾರ್ಥಿಗಳಿಂದ ಗೀತೋತ್ಸವ, ಕೃಷ್ಣ–ಗೀತಾ ಸಂಗಮ, ಗೀತಾ ಸಾಧಕರಿಗೆ ಸನ್ಮಾನ, ಕಥಾಬಿಂದು ಗೀತಾ ಸಾಹಿತ್ಯೋತ್ಸವ ಸೇರಿದಂತೆ ವಿವಿಧ ಕಾರ್ಯಕ್ರಮ ಜರುಗಲಿವೆ ಎಂದು ತಿಳಿಸಿದರು.

ಧರ್ಮಗ್ರಂಥಗಳ ಮೂಲಕ ಧರ್ಮ ರಕ್ಷಣೆಯ ಆಶಯದೊಂದಿಗೆ ಜಾಗತಿಕ ಮಟ್ಟದಲ್ಲಿ ಆನ್‌ಲೈನ್‌ನಲ್ಲಿ ವಿಶ್ವ ಗೀತಾ ಸ್ಪರ್ಧೆ ಆಯೋಜಿಸಲಾಗುತ್ತಿದೆ. ಇದೇ 20ರಂದು ಈ ಸ್ಪರ್ಧೆಗೆ ಚಾಲನೆ ನೀಡಲಾಗುವುದು. 10ರಿಂದ 18 ವರ್ಷದೊಳಗಿನ ಮಕ್ಕಳ ವಿಭಾಗ ಹಾಗೂ 18ರಿಂದ ಮೇಲ್ಪಟ್ಟವರ ವಿಭಾಗ ಹೀಗೆ ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.


ಸುಗುಣೇಂದ್ರ ತೀರ್ಥ ಸ್ವಾಮೀಜಿ

ಸುಮಾರು 25 ಸಾವಿರ ಮಂದಿ ಸ್ಪರ್ಧೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಪ್ರಥಮ ಬಹುಮಾನ ₹1 ಲಕ್ಷ ಹಾಗೂ ದ್ವಿತೀಯ, ತೃತೀಯ ಹಾಗೂ ಚತುರ್ಥ ಬಹುಮಾನವಾಗಿ ಕ್ರಮವಾಗಿ ₹75 ಸಾವಿರ, ₹50 ಸಾವಿರ ಮತ್ತು ₹25 ಸಾವಿರ ನಗದು ಹಾಗೂ ಪ್ರಮಾಣಪತ್ರ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಆನ್‌ಲೈನ್‌ನಲ್ಲಿ ಪ್ರಮಾಣಪತ್ರ ನೀಡಲಾಗುವುದು ಎಂದು ಸ್ಪರ್ಧೆಯ ಸಂಯೋಜಕ ಪ್ರಮೋದ್ ಸಾಗರ್ ತಿಳಿಸಿದರು.

ಮಠದ ಕಾರ್ಯದರ್ಶಿ ಪ್ರಸನ್ನಾಚಾರ್ಯ ಮಾತನಾಡಿ, ಇದೇ 20ರಂದು ಕಂಚಿ ಕಾಮಕೋಟಿ ಮಠಾಧೀಶ ಶಂಕರಾಚಾರ್ಯ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಅವರು ಗೀತೋತ್ಸವ ಉದ್ಘಾಟಿಸುವರು. ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಅಧ್ಯಕ್ಷತೆ ವಹಿಸುವರು. ಪುತ್ತಿಗೆ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಶ್ರೀಪಾದರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪುತ್ತಿಗೆ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಶ್ರೀಪಾದರು, ಬಿ.ಗೋಪಾಲಾಚಾರ್, ರಮೇಶ ಭಟ್, ಅನಂತಕೃಷ್ಣಪ್ರಸಾದ್ ಉಪಸ್ಥಿತರಿದ್ದರು.

ಕೋವಿಡ್ ಅಕ್ರಮ: ಕ್ರಿಮಿನಲ್ ಪ್ರಕರಣ ದಾಖಲಿಸಲು ಸಚಿವರ ಒಲವು

ಎಸ್‌ಐಟಿ ಮುಖ್ಯಸ್ಥ: ಪರಮೇಶ್ವರಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರದ ತನಿಖೆಗೆ ರಚಿಸಲಾಗುವ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಮುಖ್ಯಸ್ಥರನ್ನು ನೇಮಿಸುವ ಹೊಣೆಯನ್ನು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಹಿಸಿದ್ದಾರೆ.

ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಸಂಪುಟದ ಹಿರಿಯ ಸಚಿವರ ಜೊತೆ ಸೋಮವಾರ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ, ಎಸ್‌ಐಟಿ ರಚನೆ ಮತ್ತು ಅದರ ನೇತೃತ್ವವನ್ನು ಯಾರಿಗೆ ನೀಡಬೇಕೆಂಬ ಕುರಿತು ಸಮಾಲೋಚನೆ ನಡೆಸಿದ್ದಾರೆ.

'ಬಿಜೆಪಿ ಆಡಳಿತ ಅವಧಿಯಲ್ಲಿ ನಡೆದಿರುವ ಕೋವಿಡ್ ಹಗರಣದ ಕುರಿತು ತನಿಖೆ ನಡೆಸಿರುವ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ಆಯೋಗವು ಅಕ್ರಮವನ್ನು ಪತ್ತೆ ಹಚ್ಚಿದೆ. ಈ ವಿಷಯವನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು. ಈ ಹಗರಣಕ್ಕೆ ಸಂಬಂಧಪಟ್ಟಂತೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಭೆಯಲ್ಲಿ ಸಚಿವರು ಒಲವು ವ್ಯಕ್ತಪಡಿಸಿದರು. ಮುಂಬರುವ ದಿನಗಳಲ್ಲಿ ಇನ್ನಷ್ಟು ಆಕ್ರಮಣಕಾರಿಯಾಗಿ ಬಿಂಬಿಸಬೇಕು' ಎಂದು ಸಚಿವರಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

ಮುಖ್ಯಾಂಶಗಳು

- ಬಿಜೆಪಿ ಎದುರಿಸಲು ಸೂಕ್ತ ತಯಾರಿಗೆ ಸಿಎಂ ಸೂಚನೆ
- ವಕ್ಫ್ ಆಸ್ತಿ: ತಿರುಗೇಟು ನೀಡಲು ಸಚಿವರಿಗೆ ನಿರ್ದೇಶನ
- ಬೆಳಗಾವಿ ಅಧಿವೇಶನದಲ್ಲಿ ಪ್ರತಿಪಕ್ಷ ಕಟ್ಟಿಹಾಕಲು ತಂತ್ರ

ಬೆಳಗಾವಿಯಲ್ಲಿ ಡಿ. 9ರಿಂದ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ವಿರೋಧ ಪಕ್ಷಗಳನ್ನು ಸಮರ್ಥವಾಗಿ ಎದುರಿಸುವ ಬಗ್ಗೆಯೂ ಚರ್ಚೆ ನಡೆದಿದೆ. ವಕ್ಫ್ ಆಸ್ತಿ ವಿಚಾರವನ್ನು ಬಿಜೆಪಿ ದೊಡ್ಡದಾಗಿ ಬಿಂಬಿಸುವ ಸಾಧ್ಯತೆ ಇದೆ. ಬಿಜೆಪಿ ಅವಧಿಯಲ್ಲಿಯೇ ವಕ್ಫ್ ಆಸ್ತಿಯನ್ನು ವಶಕ್ಕೆ ಪಡೆದುಕೊಳ್ಳುವಂತೆ ಸೂಚಿಸಲಾಗಿತ್ತು. ಅದೇ ವಿಚಾರ ಪ್ರಸ್ತಾಪಿಸಿ ಬಿಜೆಪಿಯನ್ನು ಕಟ್ಟಿಹಾಕಬೇಕೆಂದು ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದರು ಎಂದೂ ಹೇಳಲಾಗಿದೆ.

ಬಿಪಿಎಲ್ ಕಾರ್ಡ್ ಪರಿಷ್ಕರಣೆ ಬಗ್ಗೆಯೂ ಚರ್ಚೆ ನಡೆಯಿತು. ಈ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿರುವುದಕ್ಕೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ತರಾಟೆಗೆ ತೆಗೆದುಕೊಂಡ ಮುಖ್ಯಮಂತ್ರಿ, ಗೊಂದಲಕ್ಕೆ ಅವಕಾಶ ಇಲ್ಲದಂತೆ ಜನರಿಗೆ ಸ್ಪಷ್ಟ ಮಾಹಿತಿ ನೀಡಬೇಕು. ಅಧಿವೇಶನದಲ್ಲಿ ಬಿಜೆಪಿ ಈ ವಿಚಾರವನ್ನು ಅಸ್ತ್ರವಾಗಿ ಬಳಕೆ ಮಾಡಿಕೊಳ್ಳಬಹುದು. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದೂ ಸಚಿವರಿಗೆ ಸೂಚನೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

ಕಳೆದ ಅಧಿವೇಶನದಲ್ಲಿ ಅನುಮೋದನೆಯಾಗದ ಮಸೂದೆಗಳನ್ನು ಬೆಳಗಾವಿ ಅಧಿವೇಶನದಲ್ಲಿ ಮತ್ತೆ ಮಂಡಿಸಲು ಸಿದ್ಧಪಡಿಸುವಂತೆಯೂ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಕೆ.ಎನ್. ರಾಜಣ್ಣ, ಪ್ರಿಯಾಂಕ್ ಖರ್ಗೆ, ಎಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ ಸಭೆಯಲ್ಲಿದ್ದರು.

'ನಾನು ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷನಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್ ಅವಧಿಯಲ್ಲಿ ಸಾಮಗ್ರಿಗಳ ಖರೀದಿಯಲ್ಲಿ ಲೋಪವಾಗಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷನಲ್ಲ. ಬೇಕಿದ್ದರೆ ತನಿಖೆ ಮಾಡಲಿ' ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ನಾನು ಸಲಹಾ ಸಮಿತಿ ಸದಸ್ಯನಷ್ಟೇ. ನನ್ನಂತೆ ಬಹಳಷ್ಟು ವೈದ್ಯರು ಸಮಿತಿಯಲ್ಲಿದ್ದರು. ನಮ್ಮದ್ದೇನಿದ್ದರೂ ಪರಿಸ್ಥಿತಿಗೆ ಅನುಗುಣವಾಗಿ ಸಲಹೆ ಕೊಡುವುದಷ್ಟೇ. ಆಡಳಿತಾತ್ಮಕವಾಗಿ ಅಥವಾ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವಿರಲಿಲ್ಲ. ಅದು ನಮ್ಮ ಕೆಲಸವೂ ಆಗಿರಲಿಲ್ಲ' ಎಂದರು.


ಡಾ.ಸಿ.ಎನ್. ಮಂಜುನಾಥ್

'ಚನ್ನಪಟ್ಟಣ ಉಪಚುನಾವಣೆ ವಿಚಾರದಲ್ಲಿ, ಯೋಗೇಶ್ವರ್ ಅವರಿಗೆ ಸದ್ಯದ ಪರಿಸ್ಥಿತಿ ಅರ್ಥವಾಗಿ ಸೋಲುವ ರೀತಿ ಮಾತನಾಡಿದ್ದಾರೆ. ಕ್ಷೇತ್ರದ ಒಲವು ಯಾರ ಕಡೆಗಿದೆ ಎಂಬುದು ಜೆಡಿಎಸ್ ಮತ್ತು ಬಿಜೆಪಿಗೆ ಗೊತ್ತಾಗಿದೆ. ನಿಖಿಲ್ ಗೆಲ್ಲುತ್ತಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಚನೆ

ಬಿಜೆಪಿಯು ಕಾಂಗ್ರೆಸ್ ಶಾಸಕರಿಗೆ ಕೋಟಿ ಕೋಟಿ ಆಫರ್ ನೀಡುತ್ತಿದೆ ಎಂಬ ವಿಚಾರವೂ ಸಭೆಯಲ್ಲಿ ಚರ್ಚೆಯಾಗಿದ್ದು, ಜಿಲ್ಲಾ ಮಟ್ಟದಲ್ಲಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದರು ಎಂದು ತಿಳಿದುಬಂದಿದೆ.

'ನಮ್ಮ ಶಾಸಕರು ಬಿಜೆಪಿ ನಾಯಕರ ಸಂಪರ್ಕಕ್ಕೆ ಸಿಗದಂತೆ ನೋಡಿಕೊಳ್ಳಬೇಕು. ಅಂತಹ ಬೆಳವಣಿಗೆಗಳು ಕಂಡುಬಂದರೆ ತಕ್ಷಣ ಗಮನಕ್ಕೆ ತರುವಂತೆಯೂ ಸಚಿವರಿಗೆ ನಿರ್ದೇಶನ ನೀಡಿದರು' ಎಂದು ಗೊತ್ತಾಗಿದೆ.

ರೈಲಿನಲ್ಲಿ ₹63 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಉಡುಪಿ: ಮುಂಬೈನಿಂದ ಉಡುಪಿಗೆ ರೈಲಿನಲ್ಲಿ ಬಂದಿದ್ದ ಕುಟುಂಬವೊಂದರ ₹63 ಲಕ್ಷ ಮೌಲ್ಯದ ಚಿನ್ನಾಭರಣ ರೈಲಿನಲ್ಲಿ ಕಳವಾಗಿರುವ ಬಗ್ಗೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂಬೈನಲ್ಲಿ ನೆಲೆಸಿರುವ ಅವಿನಾಶ್ ಎಂಬುವವರು ಕುಟುಂಬದವರೊಂದಿಗೆ ನ.15ರಂದು ಸಿಎಸ್‌ಟಿ–ಮಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಮುಂಬೈನಿಂದ ಹೊರಟಿದ್ದರು. ಒಡವೆ ಹಾಗೂ ಬಟ್ಟೆಗಳಿದ್ದ ನಾಲ್ಕು ಸೂಟ್‌ಕೇಸ್‌ಗಳನ್ನು ಬೀಗ ಹಾಕದೇ ಜಿಪ್ ಲಾಕ್ ಮಾಡಿ ಸೀಟಿನ ಕೆಳಗೆ ಇಟ್ಟಿದ್ದರು. ನ.16ರಂದು ಉಡುಪಿಯ ಇಂದ್ರಾಳಿ ರೈಲು ನಿಲ್ದಾಣದಲ್ಲಿ ಇಳಿದಿದ್ದರು. ಮನೆಗೆ ಹೋಗಿ ಬ್ಯಾಗ್‌ಗಳನ್ನು ತೆರೆದಾಗ ಎರಡು ಬ್ಯಾಗ್‌ಗಳಲ್ಲಿ ಇಟ್ಟಿದ್ದ ₹63 ಲಕ್ಷ ಬೆಲೆ ಬಾಳುವ 900 ಗ್ರಾಂ ತೂಕದ ಚಿನ್ನದ ಒಡವೆಗಳು ಕಾಣೆಯಾಗಿರುವುದು ಗಮನಕ್ಕೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಒಡವೆಗಳನ್ನು ಪನ್‌ವೆಲ್‌ನಿಂದ ಕಣಕವಲಿ ರೈಲು ನಿಲ್ದಾಣಗಳ ಮಧ್ಯೆ ಕಳವು ಮಾಡಿರಬಹುದು ಎಂದು ದೂರಿನಲ್ಲಿ ತಿಳಿಸಲಾಗಿದೆ. ಸಂಬಂಧಿಯ ಮದುವೆ ಸಮಾರಂಭಕ್ಕಾಗಿ ಇವರು ಮುಂಬೈನಿಂದ ಊರಿಗೆ ಬಂದಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಸುಭಾಷಿತ

ನಿಮಗಾಗುವ ಎಲ್ಲಾ ತೊಂದರೆಗಳನ್ನು ನಿಮ್ಮ ಜೇಬಿನೊಳಗೆ ತುಂಬಿಸಿ. ಆದರೆ, ಆ ಜೇಬಿಗೆ ಒಂದು ತೂತು ಇರುವುದನ್ನು ಖಾತರಿಪಡಿಸಿಕೊಳ್ಳಿ. -ರಾಬರ್ಟ್ ಫ್ರಾಸ್ಟ್

ಮಣಿಪುರ: ಶಾಂತಿ ಸ್ಥಾಪನೆಗೆ ಬೇಕಿದೆ ವಿಶ್ವಾಸ ಮೂಡಿಸುವ ಕೆಲಸ

ಮಣಿಪುರ ಮತ್ತೆ ಪ್ರಕ್ಷುಬ್ಧಗೊಂಡಿದೆ. ಈ ಬಾರಿಯ ಸಂಘರ್ಷವು ಕುಕಿ ಮತ್ತು ಮೈತೇಯಿ ಸಮುದಾಯಗಳಿಗೆ ಸೀಮಿತವಾಗಿ ಉಳಿದಿಲ್ಲ. ಕ್ಷೋಭೆಯು ಅಧಿಕಾರದ ಕೇಂದ್ರಗಳನ್ನು ತಾಕಿದೆ. ಉದ್ರಿಕ್ತ ಜನರ ಗುಂಪುಗಳು ಮಣಿಪುರದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಪೂರ್ವಿಕರ ಮನೆಯ ಮೇಲೆ, ಕೆಲವು ಸಚಿವರು ಹಾಗೂ ಶಾಸಕರಿಗೆ ಸೇರಿದ ಮನೆಗಳ ಮೇಲೆ ದಾಳಿ ನಡೆಸಿವೆ. ರಾಜ್ಯದಲ್ಲಿ ಹಿಂಸಾಚಾರದ ಘಟನೆಗಳು ಈಗ ಮತ್ತೆ ಮತ್ತೆ ನಡೆಯುತ್ತಿವೆ. ಮೈತೇಯಿ ಹಾಗೂ ಕುಕಿ ಸಮುದಾಯಗಳ ನಡುವೆ ದಾಳಿ, ಪ್ರತಿದಾಳಿಗಳು ನಡೆಯುತ್ತಿವೆ. ಹಿಂಸಾಚಾರವು ಅಲ್ಲಿ ದಿನ ಕಳೆದಂತೆ ತೀವ್ರಗೊಳ್ಳುತ್ತಿದೆ. ಈ ತಿಂಗಳ ಆರಂಭದಲ್ಲಿ ಮೈತೇಯಿ ಸಮುದಾಯದ ಶಸ್ತ್ರಸಜ್ಜಿತ ಗುಂಪೊಂದು ಕುಕಿ ಸಮುದಾಯದ ಗ್ರಾಮದ ಮೇಲೆ ದಾಳಿ ನಡೆಸಿದ ನಂತರ ಮತ್ತೆ ಹಿಂಸಾಚಾರ ಆರಂಭವಾಯಿತು. ಆ ಬಳಿಕ ಭದ್ರತಾ ಶಿಬಿರವೊಂದರ ಮೇಲೆ ಕುಕಿ ಸಮುದಾಯದವರು ದಾಳಿ ನಡೆಸಿದರು, ನಂತರದಲ್ಲಿ ಕುಕಿ ಸಮುದಾಯದವರು ಮೈತೇಯಿ ಸಮುದಾಯದ ಮಹಿಳೆಯರು ಹಾಗೂ ಮಕ್ಕಳು ಸೇರಿ ಕೆಲವರನ್ನು ಅಪಹರಿಸಿ ಹತ್ಯೆ ಮಾಡಿದರು. ಮೈತೇಯಿ ಹಾಗೂ ಕುಕಿ ಸಮುದಾಯಗಳಿಗೆ ಸೇರಿದ ಸ್ಥಳಗಳ ನಡುವಿನ ಬಫರ್ ಪ್ರದೇಶದಲ್ಲಿ ಗುಂಡಿನ ಚಕಮಕಿಗಳು ನಡೆದಿವೆ, ಆಧುನಿಕ ಶಸ್ತ್ರಾಸ್ತ್ರಗಳನ್ನು ರಾಜ್ಯದಲ್ಲಿ ಬಳಕೆ ಮಾಡಲಾಗುತ್ತಿದೆ.



ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಮಾತುಕತೆಗೆ ಅವಕಾಶ ಕಲ್ಪಿಸಿ, ವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಲೇಬೇಕಾಗಿದೆ

ರಾಜ್ಯದಲ್ಲಿ ಹಿಂಸಾಚಾರ ವ್ಯಾಪಕವಾಗುತ್ತಿರುವುದು ಹಾಗೂ ಪರಿಸ್ಥಿತಿ ದಿನ ಕಳೆದಂತೆಲ್ಲ ವಿಷಮಗೊಳ್ಳುತ್ತಿರುವುದು ರಾಜಕೀಯ ಪರಿಣಾಮಗಳನ್ನು ಉಂಟುಮಾಡಿದೆ. ಏಳು ಮಂದಿ ಶಾಸಕರ ಬಲ ಹೊಂದಿರುವ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಬಿರೇನ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದಿದೆ. ಬಿಕ್ಕಟ್ಟನ್ನು ಶಮನಗೊಳಿಸುವಲ್ಲಿ ಸರ್ಕಾರವು ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ಎನ್‌ಪಿಪಿ ಆರೋಪಿಸಿದೆ. ಬೆಂಬಲವನ್ನು ಹಿಂಪಡೆದಿರುವುದು ಸರ್ಕಾರದ ಪತನಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಬಿರೇನ್ ಸಿಂಗ್ ಅವರಿಗೆ ಸದನದಲ್ಲಿ ಬಹುಮತ ಇದೆ. ಹೀಗಿದ್ದರೂ ಸರ್ಕಾರದ ಭಾಗವೇ ಆಗಿದ್ದ ಪಕ್ಷವೊಂದು ವಿಶ್ವಾಸ ಕಳೆದುಕೊಂಡಿರುವುದನ್ನು ಅದು ತೋರಿಸುತ್ತದೆ. ಬಿಜೆಪಿಯ ಒಳಗೆ ಕೂಡ ಬಿರೇನ್ ಸಿಂಗ್ ಅವರಿಗೆ ವಿರೋಧ ಇದೆ. ಕುಕಿ ಸಮುದಾಯದ ಕಡೆಯವರು ಸೇರಿದಂತೆ ಕೆಲವು ಶಾಸಕರು ಸರ್ಕಾರದಿಂದ ಅಂತರ ಕಾಯ್ದುಕೊಳ್ಳಲು ಆರಂಭಿಸಿದ್ದಾರೆ. ಮಣಿಪುರ ರಾಜ್ಯದಲ್ಲಿ ಕಳೆದ ವರ್ಷ ಹಿಂಸಾಚಾರ ಶುರುವಾಗಿದ್ದಾಗಲೇ, ಬಿರೇನ್ ಸಿಂಗ್ ಕೂಡ ಈ ಸಮಸ್ಯೆಯ ಒಂದು ಭಾಗ ಎಂಬುದು ಸ್ಪಷ್ಟವಾಗಿತ್ತು. ಆದರೆ ಕೇಂದ್ರ ಸರ್ಕಾರವು ಬಿರೇನ್ ಸಿಂಗ್ ಅವರನ್ನು ರಕ್ಷಿಸುತ್ತ ಬಂದಿದೆ.

ಮಣಿಪುರದ ಪರಿಸ್ಥಿತಿಯ ವಿಚಾರವಾಗಿ ಕೇಂದ್ರ ಸರ್ಕಾರವು ಆರಂಭದಿಂದಲೂ ತಾತ್ಸಾರ ಧೋರಣೆಯನ್ನು ಪ್ರದರ್ಶಿಸಿದೆ, ಸಿನಿಕವಾಗಿ ವರ್ತಿಸಿದೆ ಕೂಡ. ಈಗ ಕೇಂದ್ರವು ರಾಜ್ಯದ ಕೆಲವು ಭಾಗಗಳಲ್ಲಿ ಕರಾಳವಾದ 'ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ'ಯನ್ನು (ಎಎಫ್‌ಎಸ್‌ಪಿಎ) ಜಾರಿಗೆ ತಂದಿದೆ. ಮಣಿಪುರದಲ್ಲಿ ಎಎಫ್‌ಎಸ್‌ಪಿಎ ಬಹಳ ಕುಖ್ಯಾತಿಯನ್ನು ಪಡೆದಿದೆ. ಅದನ್ನು ಅಲ್ಲಿ ಮತ್ತೆ ಹೇರಿರುವುದರಿಂದ ಜನರಲ್ಲಿನ ಅವಿಶ್ವಾಸವು ಇನ್ನಷ್ಟು ಹೆಚ್ಚಾಗುವ ಅಪಾಯವೂ ಇದೆ. ರಾಜ್ಯದಲ್ಲಿ ಶಾಂತಿಯನ್ನು ಮರುಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆದರೆ ಆ ರಾಜ್ಯದಲ್ಲಿನ ಸಮಸ್ಯೆಯನ್ನು ಅಧಿಕಾರಿಗಳು ಅಥವಾ ಸಶಸ್ತ್ರ ಪಡೆಗಳು ಬಗೆಹರಿಸಲು ಆಗುವುದಿಲ್ಲ. ಕರಾಳವಾದ ಕಾನೂನುಗಳ ಮೂಲಕ, ಕರ್ಫ್ಯೂ ಮೂಲಕ ಅಥವಾ ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸುವ ಮೂಲಕವೂ ಅಲ್ಲಿನ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ. ಅಲ್ಲಿನ ಸಮಸ್ಯೆಯನ್ನು ಪರಿಹರಿಸಲು ರಾಜಕೀಯ ಉಪಕ್ರಮವೊಂದರ ಅಗತ್ಯವಿದೆ, ಅದು ಅಲ್ಲಿ ಇನ್ನೂ ಕಾಣುತ್ತಿಲ್ಲ. ಮೈತೇಯಿ ಹಾಗೂ ಕುಕಿ ಸಮುದಾಯಗಳಿಗೆ ಸೇರಿದ ಶಾಸಕರ ಜಂಟಿ ಸಭೆಯು ಅಲ್ಲಿ ಇನ್ನೂ ಆಗಿಲ್ಲ. ಸಂಘರ್ಷ ಆರಂಭವಾದ ನಂತರ ಅಮಿತ್ ಶಾ ಅವರು ಮಣಿಪುರಕ್ಕೆ ಎರಡು ಬಾರಿ ಮಾತ್ರ ಭೇಟಿ ನೀಡಿದ್ದಾರೆ, ಅದರಲ್ಲಿ ಒಂದು ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಭೇಟಿ. ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡಿಲ್ಲ. ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಮಾತುಕತೆಗೆ ಅವಕಾಶ ಕಲ್ಪಿಸಿ, ವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡದೇ ಇದ್ದರೆ, ಮಣಿಪುರದಲ್ಲಿ ಶಾಂತಿಯು ಮರೀಚಿಕೆಯಾಗಿಯೇ ಉಳಿಯಬಹುದು.

ದಿನದ ಟ್ವೀಟ್

ಕನ್ನಡದ ಮುಖ್ಯವಾಹಿನಿಗೆ ಕರೆತರೋಣ



ಆರೋಗ್ಯಕರ ಬದುಕು ರೂಪಿಸಿಕೊಳ್ಳುವುದಕ್ಕೆ ಜನರು ಉತ್ತರ ಭಾರತದಿಂದ ಪಶ್ಚಿಮ ಮತ್ತು ದಕ್ಷಿಣ ಭಾರತಕ್ಕೆ ವಲಸೆ ಬಂದೇ ಬರುತ್ತಾರೆ. ಇದನ್ನು ತಡೆಯುವ ಯಾವ ಕಾನೂನೂ ಭಾರತದಲ್ಲಿ ಬರಲು ಸಾಧ್ಯವಿಲ್ಲ. ಅವರನ್ನೆಲ್ಲ ಕನ್ನಡದ ಮುಖ್ಯವಾಹಿನಿಗೆ ಕರೆದುಕೊಂಡು ಬಂದು, ಅವರನ್ನು ನಮ್ಮೊಳಗೊಬ್ಬರನ್ನಾಗಿ ಮಾಡಿಕೊಳ್ಳಬೇಕು ಅಷ್ಟೇ. ಅಪಾರ್ಟ್‌ಮೆಂಟ್‌ಗಳಲ್ಲಿ, ಗೇಟೆಡ್ ಕಮ್ಯುನಿಟಿಗಳಲ್ಲಿ, ಐ.ಟಿ. ಕಂಪನಿಗಳಲ್ಲಿ ಕರ್ನಾಟಕ ರಾಜ್ಯೋತ್ಸವ, ಕನ್ನಡ ಕಲಿಸುವ ಕಾರ್ಯಕ್ರಮಗಳ ಮೂಲಕ ಅದನ್ನು ಕನ್ನಡಿಗರು ಈಗಾಗಲೇ ಮಾಡುತ್ತಿದ್ದೇವೆ. ಇದನ್ನು ಹೆಚ್ಚಿಸಿಕೊಂಡು ಹೋಗಬೇಕು ಅಷ್ಟೇ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಭಾರತದಲ್ಲಿ ಅಪರಾಧಿಗಳನ್ನು ಸನ್ಮಾನಿಸುವುದರ ಹಿಂದೆ ಇರುವ ಹೊಸ ಮಾಂತ್ರಿಕ ಶಕ್ತಿ ಯಾವುದು? ಮೊರ್ಬಿ ಸೇತುವೆ ಕುಸಿತ ದುರಂತದ ನೆನಪಿದೆಯೇ? 135 ಮಂದಿ ಸಾವಿಗೀಡಾಗಿದ್ದು? ಈ ಪ್ರಕರಣದ ಪ್ರಮುಖ ಆರೋಪಿ, ಜಾಮೀನಿನ ಮೇಲೆ ಬಿಡುಗಡೆ ಆಗಿರುವ ಕೈಗಾರಿಕೋದ್ಯಮಿ ಜಯ್‌ಸುಖ್ ಪಟೇಲ್ ಅವರನ್ನು ಕಾರ್ಯಕ್ರಮವೊಂದರಲ್ಲಿ ಸನ್ಮಾನಿಸಲಾಗಿದೆ.

ಮನೋಜ್ ಅರೋರ, ಲೇಖಕ

25 ವರ್ಷಗಳ ಹಿಂದೆ

ಶುಕ್ರವಾರ, 19-11-1999

• **ಆಶ್ರಯ ಯೋಜನೆ ರದ್ದು ಹೈಕೋರ್ಟ್ ತೀರ್ಪು**

ಬೆಂಗಳೂರು, ನ. 18– ಮನೆ ಇಲ್ಲದವರಿಗೆ ನಿವೇಶನ, ಮನೆ ನೀಡುವ ರಾಜ್ಯದ ಆಶ್ರಯ ಯೋಜನೆಯನ್ನು ಹೈಕೋರ್ಟ್ ಇಂದು ರದ್ದುಗೊಳಿಸಿತು. ರಾಜ್ಯ ಸರ್ಕಾರ ರೂಪಿಸಿರುವ ಆಶ್ರಯ ಯೋಜನೆಯು ಸಂವಿಧಾನದ ಅನ್ವಯ ಕಾರ್ಯಾಂಗಕ್ಕೆ ದತ್ತವಾಗಿರುವ ಅಧಿಕಾರದ ವ್ಯಾಪ್ತಿಯನ್ನು ಮೀರಿದುದಾಗಿದೆ. ಅಲ್ಲದೆ ಈ ಬಗ್ಗೆ ಸುಪ್ರೀಂ ಕೋರ್ಟಿನ ಸ್ಪಷ್ಟ ಆಜ್ಞೆ ಇರುವುದನ್ನೂ ಉಲ್ಲಂಘಿಸಲಾಗಿದೆ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ.

ಸಾರ್ವಜನಿಕ ಆಸ್ತಿಯನ್ನು ಆಶ್ರಯ ಯೋಜನೆ ಎಂದು ಮನಸ್ಸಿಗೆ ಬಂದಂತೆ ವಿತರಿಸುವುದಲ್ಲ. ಭೂಮಿಯನ್ನು ವಿತರಿಸುವಾಗ ಭೂ ಮಂಜೂರಾತಿ ನಿಯಮದ ಪ್ರಕಾರವೇ ಮಾಡಬೇಕು. ಹಂಚಿಕೆಗೆ ನಿರ್ದಿಷ್ಟ ನಿಯಮಾವಳಿ ಪಾಲಿಸದೇ ಹಂಚುವುದು ನಿಯಮಬಾಹಿರ ಎಂದು ಹೇಳಿದೆ.

• **ನಳಿನಿಗೆ ಕ್ಷಮಾದಾನ ಸೋನಿಯಾ ಮನವಿ**

ನವದೆಹಲಿ, ನ. 18 (ಯುಎನ್‌ಐ)– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆಯ ಅಪರಾಧಿಯಾದ ನಳಿನಿಗೆ ನೀಡಲಾಗಿರುವ ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸಿ, ಆಜೀವ ಕಾರಾಗೃಹ ಶಿಕ್ಷೆಗೆ ಬದಲಾಯಿಸುವಂತೆ ಸೋನಿಯಾ ಗಾಂಧಿ ಅವರು ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರನ್ನು ಕೋರಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 19-11-1974

• **'ಕ್ರೂರ ಆಜ್ಞೆ'ಗೆ ವಿರೋಧ ಪಕ್ಷದ ಟೀಕೆ, ಸಭಾತ್ಯಾಗ**

ನವದೆಹಲಿ, ನ. 18– ಕಳ್ಳಸಾಗಣೆ ಆಪಾದನೆಗೆ ಒಳಗಾದವರು ನ್ಯಾಯಾಲಯದ ಮೊರೆ ಹೋಗಲು ಸಾಧ್ಯವಿಲ್ಲದಂತೆ ಮಾಡಲು ಶನಿವಾರ ರಾಷ್ಟ್ರಪತಿ ಹೊರಡಿಸಿದ ಆಜ್ಞೆ 'ಕ್ರೂರ ಮತ್ತು ಜನತಂತ್ರ ವಿರೋಧಿ' ಎಂದು ಸಂಸತ್ತಿನ ಉಭಯ ಸದನಗಳಲ್ಲೂ ಇಂದು ವಿರೋಧ ಪಕ್ಷದವರು ಖಂಡಿಸಿದರು.

'ದುರುದ್ದೇಶದಿಂದ ಕೂಡಿದ' ಈ ಆಜ್ಞೆ ಸಂವಿಧಾನ ವಿರೋಧಿ ಮತ್ತು ರಾಜಕೀಯ ಪ್ರತಿ ಪಕ್ಷದವರ ವಿರುದ್ಧ ಈ ಆಜ್ಞೆಯನ್ನು ಸರ್ಕಾರ ದುರುಪಯೋಗಪಡಿಸಿಕೊಳ್ಳಬಹುದು ಎಂಬ ಭೀತಿ ವ್ಯಕ್ತಪಡಿಸಿದ ವಿರೋಧ ಪಕ್ಷದವರು, ಪ್ರತಿಭಟನಾರ್ಥ ಸಭಾತ್ಯಾಗ ಮಾಡಿದರು. ಸಭಾತ್ಯಾಗದಲ್ಲಿ ಸಿಪಿಐ ಭಾಗವಹಿಸಲಿಲ್ಲ.

• **ಈಗ ಪುರುಷರದೇ ಮೇಲುಗೈ**

ವಿಶ್ವರಾಷ್ಟ್ರ ಸಂಸ್ಥೆ, ನ. 18– ಪ್ರಪಂಚದಲ್ಲಿ ಪುರುಷರ ಸಂಖ್ಯೆ ತೀವ್ರಗತಿಯಿಂದ ಏರಿ ಈಗ ಮಹಿಳೆಯರ ಸಂಖ್ಯೆಯನ್ನು ಒಂದು ಕೋಟಿಯಿಂದ ಮೀರಿಸಿದೆ.

ಈ ಶತಮಾನದ ಉಳಿದ ಕಾಲಕ್ಕೂ ಇದೇ ಪ್ರವೃತ್ತಿ ಇರಬಹುದೆಂದು ವಿಶ್ವರಾಷ್ಟ್ರ ಸಂಸ್ಥೆ ವರದಿ ಮಾಡಿದೆ. 1965ರಲ್ಲಿ 1.165 ಶತಕೋಟಿ ಮಹಿಳೆಯರು ಮತ್ತು 1.137 ಶತಕೋಟಿ ಪುರುಷರು ಇದ್ದರು. ಈಗ ಪರಿಸ್ಥಿತಿ ಹಿಂದುಮುಂದಾಗಿದೆ. 1.998 ಶತಕೋಟಿ ಪುರುಷರೂ, 1.988 ಶತಕೋಟಿ ಮಹಿಳೆಯರೂ ಇದ್ದಾರೆ. ವಿಶ್ವದ ಜನಸಂಖ್ಯೆ 3.986 ಶತಕೋಟಿ.

ಅಮೆರಿಕದ ನೂತನ ಅಧ್ಯಕ್ಷರ ಯೋಜನೆಗಳು ಹಲವರಲ್ಲಿ ಆತಂಕ ಮೂಡಿಸಿವೆ

ಅಂಕೆಗೆ ಸಿಗುವರೇ 'ಸುಂಕದ ಮನುಷ್ಯ'?



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಡೊನಾಲ್ಡ್ ಟ್ರಂಪ್ ಮತ್ತೆ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮೊದಲಿಗಿಂತ ಹೆಚ್ಚು ಪ್ರಬಲರಾಗಿದ್ದಾರೆ. ಹಿಂದಿನ ಬಾರಿ ಅವರು ಅಧ್ಯಕ್ಷರಾಗಿ ಅವಧಿ ಪೂರ್ಣಗೊಳಿಸಿದಾಗ ಇದ್ದುದಕ್ಕಿಂತ ಈಗ ಅಮೆರಿಕದ ಆರ್ಥಿಕತೆ ಹೆಚ್ಚು ಸುಸ್ಥಿತಿಯಲ್ಲಿದೆ. ಬೇರೆ ದೇಶಗಳಿಗೆ ಹೋಲಿಸಿದರೆ ಅಮೆರಿಕವು ಕೋವಿಡ್ ಬಿಕ್ಕಟ್ಟಿನಿಂದ ಬೇಗ ಚೇತರಿಸಿಕೊಂಡಿತು. ಹಣದುಬ್ಬರದ ದರವೂ ಗಣನೀಯವಾಗಿ ತಗ್ಗಿದೆ. ನಿರುದ್ಯೋಗದ ಪ್ರಮಾಣ ಕಡಿಮೆಯಾಗಿದೆ. ಆದರೆ ಆರ್ಥಿಕ ಬೆಳವಣಿಗೆಯ ಫಲ ತಮಗೆ ಸಿಕ್ಕಿಲ್ಲ ಎನ್ನುವ ಹತಾಶೆ ಜನಸಾಮಾನ್ಯರಲ್ಲಿ ವ್ಯಾಪಕವಾಗಿದೆ. ಶ್ರೀಮಂತರ ಸಂಪತ್ತು ತೀವ್ರವಾಗಿ ಹೆಚ್ಚಿರುವುದು ಅವರಲ್ಲಿ ಹತಾಶೆಯನ್ನು ಹೆಚ್ಚಿಸಿದೆ. 2022ರಲ್ಲಿ ಕೆಲಕಾಲ ಕಾಡಿದ್ದ ಅತಿ ಹಣದುಬ್ಬರದ ಪರಿಣಾಮವು ಜನರನ್ನು ಇನ್ನೂ ಕಾಡುತ್ತಿದೆ. ಜನ ನೊಂದಿದ್ದಾರೆ. ಬದಲಾವಣೆ ಬೇಕು ಅನಿಸಿದೆ. ಜನರ ಈ ಹತಾಶೆಯನ್ನು ಗ್ರಹಿಸುವಲ್ಲಿ ಡೆಮಾಕ್ರಟಿಕ್ ಪಕ್ಷ ವಿಫಲವಾಗಿದೆ.

ಜನರ ಅತೃಪ್ತಿಯನ್ನು ಟ್ರಂಪ್ ಸೊಗಸಾಗಿ ಬಳಸಿಕೊಂಡಿದ್ದಾರೆ. ಚುನಾವಣಾ ಪ್ರಚಾರದುದ್ದಕ್ಕೂ 'ನಾಲ್ಕು ವರ್ಷ ಹಿಂದಕ್ಕೆ ಹೋಲಿಸಿದರೆ ಈಗ ನಿಮ್ಮ ಸ್ಥಿತಿಯಲ್ಲಿ ಏನಾದರೂ ಸುಧಾರಣೆಯಾಗಿದೆಯೇ?' ಎಂದು ಕೇಳುತ್ತಾ, ಜನರ ನೋವು ತಮಗೆ ಅರ್ಥವಾಗುತ್ತದೆ ಅನ್ನುವಂತೆ ಬಿಂಬಿಸಿಕೊಂಡಿದ್ದರು. ಜನರ ಸಮಸ್ಯೆಗೆ ವಿದೇಶಿ ವಲಸಿಗರನ್ನು ಕಾರಣವನ್ನಾಗಿ ತೋರಿಸಿದ್ದರು. ಅವರನ್ನು ಹೊರಹಾಕಿ ಅಮೆರಿಕನ್ನರ ಆಸಕ್ತಿಯನ್ನು ಕಾಪಾಡುವುದಾಗಿ ಭರವಸೆ ನೀಡಿದ್ದರು. ಅದು ಕೆಲಸ ಮಾಡಿದೆ. ಡೆಮಾಕ್ರಟಿಕ್ ಪಕ್ಷವನ್ನು ಬೆಂಬಲಿಸುತ್ತಿದ್ದ ಕಾರ್ಮಿಕರು, ಪದವೀಧರರಲ್ಲದವರು ಹಾಗೂ ಸಾಧಾರಣ ಜನ ಈ ಬಾರಿ ಟ್ರಂಪ್ ಕೈಹಿಡಿದಿದ್ದಾರೆ.

ಅಮೆರಿಕದ ಆರ್ಥಿಕ ಬೆಳವಣಿಗೆಯ ವೇಗವನ್ನು ತೀವ್ರಗೊಳಿಸುವುದಕ್ಕೆ ಟ್ರಂಪ್ ಹಲವು ಕ್ರಮಗಳನ್ನು ಮುಂದಿಟ್ಟಿದ್ದಾರೆ. ಮಾರುಕಟ್ಟೆಯ ಮೇಲಿನ ನಿಯಂತ್ರಣವನ್ನು ತೆಗೆಯುವುದು, ಅಮೆರಿಕದ ಉದ್ದಿಮೆಗಳನ್ನು ರಕ್ಷಿಸಲು ಚೀನಾದ ಉತ್ಪನ್ನಗಳ ಮೇಲೆ ಶೇ 60ರಷ್ಟು ಹಾಗೂ ಇತರ ದೇಶಗಳ ಉತ್ಪನ್ನಗಳ ಮೇಲೆ ಶೇ 20ರಷ್ಟು ಆಮದು ಸುಂಕ ಹಾಕುವುದು, ವಲಸಿಗರನ್ನು ಹೊರಗೆ ಹಾಕುವುದು, ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡುವುದು, ಆರೋಗ್ಯ, ಶಿಕ್ಷಣದಂತಹ ಸಾಮಾಜಿಕ ಸೇವೆಗಳನ್ನು ಖಾಸಗೀಕರಣಗೊಳಿಸುವುದು ಇವೆಲ್ಲಾ ಅವರು ಹಮ್ಮಿಕೊಂಡಿರುವ ಯೋಜನೆಗಳು. ವಿತ್ತೀಯ ಹಾಗೂ ಹಣಕಾಸು ನೀತಿಗಳನ್ನು ರೂಪಿಸುವುದಕ್ಕೆ ಹೆಚ್ಚಿನ ಅಧಿಕಾರವನ್ನೂ ಅವರು ಅಪೇಕ್ಷಿಸುತ್ತಿದ್ದಾರೆ. ಬಹುಶಃ ಈ ಪ್ರಕ್ರಿಯೆಯಲ್ಲಿ ಕೇಂದ್ರ ಬ್ಯಾಂಕಿನಂತಹ ಕೆಲವು ಸ್ವಾಯತ್ತ ಸಂಸ್ಥೆಗಳ ಸ್ವಾತಂತ್ರ್ಯ ಮೊಟಕುಗೊಳ್ಳಬಹುದು.

ಟ್ರಂಪ್ ಅವರ ಈ ಯೋಜನೆಗಳಿಂದ ಅಮೆರಿಕದ ಆರ್ಥಿಕತೆ ಮಾತ್ರವಲ್ಲ ಜಗತ್ತಿನ ಆರ್ಥಿಕತೆಯ ಮೇಲೂ ಕೆಟ್ಟ ಪರಿಣಾಮ ಆಗಬಹುದೆನ್ನುವ ಆತಂಕವನ್ನು ಪ್ರಮುಖ ಅರ್ಥಶಾಸ್ತ್ರಜ್ಞರೂ ಸೇರಿದಂತೆ ಹಲವರು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ಸುಂಕ ಅನ್ನುವುದು ವಿದೇಶಿ ಸರಕು ನಮ್ಮ ಗಡಿಯೊಳಗೆ ಬಂದಾಗ ಕಟ್ಟಬೇಕಾದ ತೆರಿಗೆ. ಸುಂಕದಿಂದಾಗಿ ವಿದೇಶಿ ವಸ್ತುಗಳು ದುಬಾರಿಯಾಗುತ್ತವೆ. ದೇಶದಲ್ಲಿ ತಯಾರಾದ ವಸ್ತುಗಳಿಗೆ ಸ್ಪರ್ಧೆ ಕಡಿಮೆಯಾಗುತ್ತದೆ. ಬೇಡಿಕೆ ಹೆಚ್ಚುತ್ತದೆ. ಸ್ಥಳೀಯ ಉದ್ದಿಮೆಗಳು ಬೆಳೆಯುತ್ತವೆ, ಉದ್ಯೋಗ ಸೃಷ್ಟಿಯಾಗುತ್ತದೆ. ಇದು ಆಮದು ಸುಂಕದ ಹಿಂದಿರುವ ಸ್ಥೂಲವಾದ ತರ್ಕ. ಸಾಮಾನ್ಯವಾಗಿ ಸುಂಕವನ್ನು ಕೆಲವು ಆಯ್ದ ಸರಕುಗಳಿಗೆ ಮಾತ್ರ ವಿಧಿಸಲಾಗುತ್ತದೆ. ಆದರೆ ಅಮೆರಿಕಕ್ಕೆ ಆಮದಾಗುವ ಎಲ್ಲ ಉತ್ಪನ್ನಗಳ ಮೇಲೂ ಸುಂಕವನ್ನು ವಿಧಿಸುವುದಾಗಿ ಟ್ರಂಪ್ ಹೇಳಿದ್ದಾರೆ.

ಟ್ರಂಪ್ ಅವರಿಗೆ ಮೊದಲಿನಿಂದಲೂ ಸುಂಕದ ಮೇಲೆ ವ್ಯಾಮೋಹ. ತಮ್ಮನ್ನು 'ಸುಂಕದ ಮನುಷ್ಯ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸುಂಕ ಅವರಿಗೆ ಪ್ರತೀಕಾರದ, ರಾಜಕೀಯದ ಕ್ರಮವಾಗಿದೆ. 'ನಮ್ಮಿಂದ ಮಿಲಿಟರಿ ನೆರವು ಪಡೆದ ಮಿತ್ರ ದೇಶಗಳೇ ವ್ಯಾಪಾರದ ವಿಷಯದಲ್ಲಿ ನಮಗೆ ಮೋಸ ಮಾಡಿವೆ. ನಾವು ಎಲ್ಲರ ಮೇಲೆ ಸುಂಕ ಹಾಕುತ್ತೇವೆ' ಎಂದು ಘೋಷಿಸಿದ್ದಾರೆ. 'ಚೀನಾವು ಇನ್ನೊಮ್ಮೆ ತೈವಾನ್ ಮೇಲೆ ಯುದ್ಧ ಮಾಡಿದರೆ, ಅದರ ಮೇಲೆ ಶೇ 1,000ದಷ್ಟು ಸುಂಕ ಹಾಕುತ್ತೇನೆ' ಎಂದಿದ್ದಾರೆ. ಆದರೆ ಇದರಿಂದ ಕೆಲವು ಸಮಸ್ಯೆಗಳೂ ಆಗಬಹುದು.

ಸುಂಕದ ತಕ್ಷಣದ ಪರಿಣಾಮ ಅಂದರೆ ಬೆಲೆ ಏರಿಕೆ. ಸುಂಕದಿಂದ ವಿದೇಶಿ ಸರಕುಗಳ ಬೆಲೆ ಮಾತ್ರವಲ್ಲ ಅಮೆರಿಕದಲ್ಲಿ ತಯಾರಾದ ವಸ್ತುಗಳ ಬೆಲೆಯೂ ಏರುತ್ತದೆ. 2018ರಲ್ಲಿ ಅಮೆರಿಕದಲ್ಲಿ ವಾಷಿಂಗ್ ಮಷೀನ್ ಮೇಲೆ ಸುಂಕ ಹಾಕಿದಾಗ, ಸ್ಥಳೀಯವಾಗಿ ಉತ್ಪಾದನೆಯಾಗುತ್ತಿದ್ದ ವಾಷಿಂಗ್ ಮಷೀನ್ ಬೆಲೆಯೂ ಹೆಚ್ಚಿತ್ತು. ಅದರೊಂದಿಗೆ ಡ್ರೈಯರ್ ಬೆಲೆಯೂ ಏರಿತ್ತು. ಸಹಜವಾಗಿಯೇ ಹೆಚ್ಚಿನ ಬೆಲೆಯ ಹೊರೆ ಬೀಳುವುದು ಗ್ರಾಹಕರ ಮೇಲೆ. ಜೊತೆಗೆ ಅಮೆರಿಕದಲ್ಲಿ ತಯಾರಾಗುವ ಬಹುತೇಕ ವಸ್ತುಗಳ ಉತ್ಪಾದನೆಯು ವಿದೇಶಿ ಉತ್ಪನ್ನಗಳನ್ನು ಅವಲಂಬಿಸಿದೆ. ಉದಾಹರಣೆಗೆ, ಅಮೆರಿಕ ಇಂದು ಜಗತ್ತಿನಲ್ಲೇ ಅತಿ ಹೆಚ್ಚು ಉಕ್ಕು ಆಮದು ಮಾಡಿಕೊಳ್ಳುತ್ತಿರುವ ದೇಶ. ಉಕ್ಕಿನ ಮೇಲೆ ಸುಂಕ ಹೆಚ್ಚಿಸಿದರೆ ಉಕ್ಕನ್ನು ಬಳಸುವ ಪ್ರತಿ ಸರಕಿನ ಉತ್ಪಾದನಾ ವೆಚ್ಚವೂ ಹೆಚ್ಚುತ್ತದೆ, ಬೆಲೆಯೂ ಹೆಚ್ಚುತ್ತದೆ.



ಅಂತಿಮವಾಗಿ, ಅದರಿಂದ ಬೇಡಿಕೆಗೆ ಹೊಡೆತ ಬೀಳುತ್ತದೆ. ಅಮೆರಿಕ ಏಕಪಕ್ಷೀಯವಾಗಿ ಸುಂಕ ಹಾಕುತ್ತಾ ಹೋದರೆ ಉಳಿದ ದೇಶಗಳು ಸುಮ್ಮನಿರುವುದಿಲ್ಲ. ಪ್ರತಿಯಾಗಿ ಅವೂ ಸುಂಕ ಹಾಕುತ್ತವೆ.

ಹಿಂದೆ ಟ್ರಂಪ್ ಹೀಗೆ ಸುಂಕ ಹಾಕಿದ್ದಕ್ಕೆ ಪ್ರತಿಯಾಗಿ ಚೀನಾವು ಅಮೆರಿಕದ ಕೃಷಿ ಉತ್ಪನ್ನಗಳ ಮೇಲೆ ಸುಂಕ ಹಾಕಿತು. ಜೋಳದಂತಹವುಗಳನ್ನು ಬ್ರೆಜಿಲ್ ಹಾಗೂ ಅರ್ಜೆಂಟೀನಾದಿಂದ ತರಿಸಿಕೊಳ್ಳಲು ಪ್ರಾರಂಭಿಸಿತ್ತು. ಇದರಿಂದ ಅಮೆರಿಕದ ಕೃಷಿ ಕ್ಷೇತ್ರಕ್ಕೆ ನಷ್ಟವಾಯಿತು. ಹಾಗೆಯೇ ವಲಸಿಗರನ್ನು ಹೊರದಬ್ಬುವುದು ಕೂಡ ಸುಲಭವಲ್ಲ. ಅಮೆರಿಕ ಮಾತ್ರವಲ್ಲ ಜಗತ್ತಿನ ಬಹುತೇಕ ದೇಶಗಳ ಆರ್ಥಿಕತೆಗಳೂ ವಲಸಿಗರನ್ನು ಬಹುವಾಗಿ ಅವಲಂಬಿಸಿವೆ. ಅವರನ್ನು ಹೊರಹಾಕಿದರೆ ಎಷ್ಟೋ ಉದ್ದಿಮೆಗಳಲ್ಲಿ ಕೆಲಸಗಾರರ ಕೊರತೆ ಉಂಟಾಗುತ್ತದೆ. ನೋಂದಾಯಿತ ಕಾರ್ಮಿಕರು ಅಗ್ಗದ ಕೂಲಿಗೆ ಕೆಲಸ ಮಾಡುವುದಕ್ಕೆ ತಯಾರಿರುವುದಿಲ್ಲ. ಸ್ವಾಭಾವಿಕವಾಗಿಯೇ ಉತ್ಪಾದನಾ ವೆಚ್ಚವೂ ಹೆಚ್ಚುತ್ತದೆ. ಅಮೆರಿಕದ ಉತ್ಪನ್ನಗಳಿಗೆ ಹೊರ ದೇಶಗಳಲ್ಲಿ ಸ್ಪರ್ಧೆ ಎದುರಿಸುವುದು ಕಷ್ಟವಾಗುತ್ತದೆ. ಚೀನಾದಂಥ ದೇಶಗಳಿಗೆ ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೆರಿಕದಂತಹ ದೇಶಗಳಲ್ಲಿ ತಮ್ಮ ಮಾರುಕಟ್ಟೆ ವಿಸ್ತರಿಸಿಕೊಳ್ಳುವುದಕ್ಕೆ ಸುಲಭವಾಗುತ್ತದೆ.

ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅವರು ಹೇಳುವಂತೆ, ವಲಸಿಗರು ಬಳಕೆದಾರರೂ ಆಗಿರುತ್ತಾರೆ. ಅವರು ಬೇಡಿಕೆಯನ್ನು ಸೃಷ್ಟಿಸುತ್ತಿರುತ್ತಾರೆ. ಅವರನ್ನು ಹೊರಹಾಕುವುದರ ಮೂಲಕ ಆ ಬೇಡಿಕೆಗೂ ಪೆಟ್ಟು ಬೀಳುತ್ತದೆ. ಜೊತೆಗೆ ಕೂಲಿ ಹೆಚ್ಚು ಕೊಡಬೇಕಾಗಿ ಬಂದರೆ ಕಾರ್ಪೊರೇಟ್ ಸಂಸ್ಥೆಗಳ ಲಾಭವೂ ಕುಸಿಯುತ್ತದೆ, ಬೆಲೆಯೂ ಹೆಚ್ಚುತ್ತದೆ. ಅಗ್ಗದ ಬೆಲೆಗೆ ದುಡಿಯುವ ವಲಸಿಗರು ಇಲ್ಲದಿದ್ದರೆ ಹಣದುಬ್ಬರ ಇನ್ನೂ ಹೆಚ್ಚಿರುತ್ತಿತ್ತು. ಇವೆಲ್ಲಕ್ಕಿಂತ ಹೆಚ್ಚಾಗಿ, ನೊಬೆಲ್ ಪ್ರಶಸ್ತಿ ಪುರಸ್ಕೃತ ಡೆರೆನ್ ಅಸಿಮೊಗ್ಲು ಅವರು ಹೇಳುವಂತೆ, ಟ್ರಂಪ್ ಆಡಳಿತದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ದುರ್ಬಲವಾಗುವ ಸಾಧ್ಯತೆಗಳಿವೆ. ಇದರ ಪರಿಣಾಮವು ಆರ್ಥಿಕತೆಯ ಮೇಲೂ ಆಗುತ್ತದೆ. ಟ್ರಂಪ್ ಅವರಿಗೆ ಪ್ರಿಯವಾದ ಪಳೆಯುಳಿಕೆ ಇಂಧನದಂತಹ ಕೆಲವು ಉದ್ದಿಮೆಗಳಲ್ಲಿ ಹೂಡಿಕೆ ಹೆಚ್ಚಬಹುದು. ಆದರೆ ಒಟ್ಟಾರೆಯಾಗಿ ಪರಿಸರ, ತಂತ್ರಜ್ಞಾನ, ಸಾಮಾಜಿಕ ಸುಭದ್ರತೆ, ಆರೋಗ್ಯ, ಶಿಕ್ಷಣ ಎಲ್ಲದಕ್ಕೂ ಧಕ್ಕೆಯಾಗಬಹುದು.

ಈ ಸಮಯದಲ್ಲಿ ಇನ್ನೊಂದು ಪ್ರಶ್ನೆಯನ್ನು ಅವಶ್ಯವಾಗಿ ಕೇಳಿಕೊಳ್ಳಬೇಕು. ಈಗಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಗಳು ತೃಪ್ತಿಕರವಾದ ಆಡಳಿತ ನೀಡುತ್ತಿವೆಯೇ? ಭ್ರಷ್ಟಾಚಾರ, ಅರಾಜಕತೆ, ಹಿಂಸೆ, ಪರಿಸರದ ನಾಶ ಇವೆಲ್ಲ ಢಾಳಾಗಿ ಕಾಣುತ್ತಿವೆ. ಜನರಿಗೆ ತಮಗೆ ಬೇಕಾದಂತಹ ರಾಜಕೀಯ, ಆರ್ಥಿಕ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಷ್ಟೇ ಅಲ್ಲ, ಅಂತಹ ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದಲೇ ಟ್ರಂಪ್ ಅವರಂತಹ ನಾಯಕರೂ ಆಯ್ಕೆಯಾಗಿ ಬರುತ್ತಿದ್ದಾರೆ. ಹಾಗಾಗಿ, ಈಗಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಯ ನ್ಯೂನತೆಯ ಬಗ್ಗೆ ಗಂಭೀರವಾಗಿ ಪ್ರಶ್ನಿಸಿಕೊಳ್ಳಬೇಕಾಗಿದೆ. ಈಗಿರುವ ವ್ಯವಸ್ಥೆಯನ್ನು ಸುಮ್ಮನೆ ಒಪ್ಪಿಕೊಳ್ಳುವ ಬದಲು ಅದರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ, ಅದನ್ನು ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕಗೊಳಿಸುವ ಜವಾಬ್ದಾರಿಯೂ ನಮ್ಮ ಮೇಲೆ ಇದೆ.

ಚುರುಮುರಿ



ಕ್ಷಮಿಸಿಬುಡಿ...

• ಡಿ.ಎಸ್.ಲಿಂಗರಾಜು

ನಮ್ಮ ಸಂಘದ ನೆಂಬ್ರು ಮಿರಾಜಣ್ಣ ಯಾವಾಗ್ಲೂ ಹಂಗೇಯೆ. ಮನಸ್ಸಿಗೆ ಬಂದುದ್ನ ಯಬಡತಬಡ ಮಾತಾಡಿ ಎಲ್ಲರ ತಾವು ಬೋಗುಳ ತಗತನೆ. ಕೊನೆಗೆ 'ನಾಲಗೆ ಜಾರಿಬುಟ್ಟದೆ ಕ್ಷಮಿಸಿ' ಅಂತ ಕೇಳ್ಗೆತ್ತನೆ.

ಮೊನ್ನೆ ಆಗಿದ್ದು ನಿಮಿಗೆ ಗೊತ್ತಲ್ಲ. ಸುಮ್ಮಗೆ ಇರನಾರದೆ ಇರುವೆ ಬುಟ್ಕೊಂಡಂಗೆ 'ಮಾಜಿ ಅಧ್ಯಕ್ಷರನ್ನ ನಾನು ಬಾಲಾ ಮರಿಯ ಅಂತ್ಲೇ ಕರಿಯದು' ಅಂದುದ್ದ. ಜೊತೆಗೆ 'ಅವರು ನನ್ನನ್ನ ಸುಳ್ಳ ಅಂತ ಕರೀತಿದ್ರು. ಅವರಿಗೇನಾದ್ರೂ ಬೇಜಾರಾಗಿದ್ರೆ ಕ್ಷಮಿಸಿಬುಡಿ' ಅನ್ನೋ ಕ್ಲಾರಿಫಿಕೇಶನ್ ಬ್ಯಾರೆ ಕೊಟ್ಟಿದ್ದ.

ಕಮಿಟಿ ಎಲೆಕ್ಷನ್ನಲ್ಲಿ ಈ ಮಾತು ಯಂಗೆಂಗೋ ತಿರಿಕ್ಕತ್ತು. ಇದುಕ್ಕೆ ಮಾಜಿ ಅಧ್ಯಕ್ಷರು 'ಆವಯ್ಯನ್ನ ನೋಡಿದರೆ ಸುಳ್ಳ ಅಂತ ಗೊತ್ತಾಯ್ತದೆ. ಅದುನ್ನ ಬಾಯಿಬುಟ್ಟು ಹೇಳಬೇಕಾ' ಅಂದ್ರು.

'ಹಂಗಾಮ, ಹಂಗಾಮ ಆಯ್ತದೆ. ನಾನು ಹೋಗಿ ಮುದ್ದಣ್ಣನ ಮನೆ ಬಾಗಿಲಿಗೆ ವದ್ದು ಕೇಳ್ತೀನಿ' ಅಂದುತ್ತಲ್ಲ ಹೋದೊರ್ಸ್. ಪತ್ರಕರ್ತರೆಲ್ಲಾ 'ಇದೇನಣ್ಣೆ ಹಿಂಗೆ ಮಾತಾಡ್ತಿರಾ?' ಅಂತ ಕೇಳೋವೊತ್ಗೆ 'ತಪ್ಪಾಗ್ಯದೆ ಕ್ಷಮಿಸಿಬುಡಿ' ಅಂದುತ್ತು. ಈಥರಕೀಥರ' ಅಂತ ತಿಪ್ಪಣ್ಣಗೆ ಕತೆ ಹೇಳಿದ್ದೆ.

'ಕ, ಕು, ಕೆ, ಕೊ ಅಂತೆಲ್ಲಾ ಬೆಟ್ಟಿಂಗ್ ಜೋರಾಗ್ಯದೆ. ಬೇಜಾರಾಗಿದ್ರೆ ಕ್ಷಮಿಸಿಬುಡಿ' ಯಂಟಪ್ಪಣ್ಣ ಶಿಷ್ಟಾಚಾರ ತೋರಿಸಿತು.

'ಅಣ್ತಮ್ಮ ಇಲ್ಕೇಳು. ಎನ್‌ಎಸ್‌ಜಿ ನಡೆಸಿದ ಕಚ್ಚಾಬಾಂಬ್ ಪತ್ತೆ ಸ್ಪರ್ಧೆಯಲ್ಲಿ ಕರ್ನಾಟಕ ಪೊಲೀಸ್ ಮೊದಲನೇ ಸ್ಥಾನ ತಗಂಡದಂತೆ' ತಿಪ್ಪಣ್ಣ ಸುದ್ದಿ ಸ್ಫೋಟಿಸಿದ.

'ಇವೆಲ್ಲಾ ಬಾಂಬುಗಳಿಗಿಂತ ರಾಜಕಾರಣಿಗಳು ಸುಮ್ಮಗಿರನಾರದೇ ಸಿಡಿಸೋ ಕಚಡಾ ಬಾಂಬುಗಳು ನಮ್ಮನ್ನ ಬೆಳಗಾನ ರೋಸ್ತವೆ. ಬೇಜಾರಾಗಿದ್ರೆ ಕ್ಷಮಿಸಿಬುಡಿ' ಅಂತಂದೆ.

'ವಡೀರಿ ಕಪಾಳಕ. ರಾಜಕಾರಣಿಗಳು ಯಂಗನ್ನ ಮಾಡಿ ಅಧಿಕಾರ ತಗಣಕ್ಕೆ, ಗೇಯಕ್ಕೆ ಲಾಯಕ್ಕಿಲ್ಲದ ಶಾಸಕರನ್ನ ಕದಿಯಕ್ಕೆ ಹೋಗಿ ಕದೀರಿ ಯವಾರ ಮಾಡಿಕ್ಯಂದು, ದಳ್ಳಾಳಿಗಳಿಗಿಂತ ಅತ್ತತ್ತ ಆಗ್ಯವೆ. 2019ರಲ್ಲಿ ಇದೇ ಹುಚ್ಚುತನ ಆಗಿತ್ತಲ್ಲಾ. ನೀವೂ ಬೇಜಾರಾಗಿದ್ರೆ ಕ್ಷಮಿಸಿಬುಡಿ' ತಿಪ್ಪಣ್ಣ ಶಾಂತಿವಾದ ಮಂಡಿಸಿದ.

ಸಂಗತ

ನಿಸರ್ಗದ ಕರೆಗೆ ಓಗೊಡುವ ಮುನ್ನ...

ಸುಸ್ಥಿರ ಶೌಚಾಲಯ ವ್ಯವಸ್ಥೆಗೆ ಇರುವ ಅಡೆತಡೆಗಳನ್ನು ನಿವಾರಿಸಬೇಕಾಗಿದೆ

• ಬಿ.ಎಸ್.ಭಗವಾನ್

ವಿವಿಧ ಊರುಗಳಿಂದ ರಾತ್ರಿಯಿಡೀ ಪ್ರಯಾಣಿಸಿ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಂದವರು ಶೌಚಾಲಯಗಳಿಗೆ ಮುತ್ತಿಗೆ ಹಾಕುವುದನ್ನು ನೋಡಬೇಕು. ಚೊಕ್ಕಟ ಶೌಚಾಲಯವುಳ್ಳ ನೆಂಟರಿಷ್ಟರು ಯಾರಾದರೂ ತಮ್ಮನ್ನು ಮನೆಗೆ ಆಹ್ವಾನಿಸಬಾರದಿತ್ತೇ ಅಂತ ಅವರಿಗೆ ಅನ್ನಿಸಿಯೇ ತೀರುತ್ತದೆ. ಶೌಚಾಲಯವು ದೈಹಿಕ ಬಾಧೆ ನಿವಾರಿಸಿ ನಿರಾಳವನ್ನು ತರುವ ಆಲಯವೇ ಹೌದು. ಎಲ್ಲೂ ದಕ್ಕದ ಹೊಳಹುಗಳು ಅಲ್ಲಿನ ಏಕಾಂತದಲ್ಲಿ ದೊರೆಯುತ್ತವೆ.


ವಿಶ್ವಸಂಸ್ಥೆ ಪ್ರತಿವರ್ಷ ನವೆಂಬರ್ 19ರಂದು 'ಅಂತರರಾಷ್ಟ್ರೀಯ ಶೌಚಾಲಯ ದಿನ' ಆಚರಣೆಗೆ ಕರೆಯಿತ್ತಿರುವ ಉದ್ದೇಶ ಸ್ಪಷ್ಟವಿದೆ. ಈ ಬಾರಿಯ ಧ್ಯೇಯವಾಕ್ಯ ವಿಶಿಷ್ಟವಾಗಿದೆ: 'ಶೌಚಾಲಯ, ನೆಮ್ಮದಿಯ ಸ್ಥಳ'. ಐದು ಮಂದಿಗೆ ಒಂದಾದರೂ ಶೌಚಾಲಯ ಇರುವುದು ಅಗತ್ಯ. ಜಗತ್ತಿನ ಒಟ್ಟು ಜನಸಂಖ್ಯೆ 850 ಕೋಟಿ. ಇಂದಿಗೂ ಸುಮಾರು 350 ಕೋಟಿ ಮಂದಿಗೆ ಸಮರ್ಪಕ ನಿರ್ವಹಣೆಯ ಶೌಚಾಲಯಗಳಿಲ್ಲ. 42 ಕೋಟಿ ಜನರ ಪಾಲಿಗೆ ಬಯಲೇ ಶೌಚಾಲಯ. 2030ರ ವೇಳೆಗೆ ಎಲ್ಲರಿಗೂ ಶೌಚಾಲಯ ಎನ್ನುವ ಗುರಿಯೇನೊ ವಿಶ್ವಸಂಸ್ಥೆಗೆ ಇದೆ. ಜಗತ್ತಿನ ಎಲ್ಲ ಸರ್ಕಾರಗಳಿಂದಲೂ ಅದು ಸಹಕಾರ ಬಯಸಿದೆ. ಆದರೆ ಇನ್ನು ಆರೇ ವರ್ಷಗಳಲ್ಲಿ ಅದು ಕೈಗೂಡುವುದು ಸಾಧ್ಯವೇ?

ಒಂದು ಮನೆಯ ಪರಿಶುದ್ಧತೆ ಅದರ ಶೌಚಾಲಯದಿಂದಲೇ ಆರಂಭವಾಗಬೇಕು. ಶೌಚಾಲಯ ಮತ್ತು ಶುಚಿತ್ವ ಒಂದೇ ನಾಣ್ಯದ ಮುಖಗಳಾಗಬೇಕು. ಅಮೆರಿಕ, ಜಪಾನ್, ಡೆನ್ಮಾರ್ಕ್, ಸಿಂಗಪುರ, ಬ್ರಿಟನ್‌ನಂತಹ ದೇಶಗಳಲ್ಲಿ ಶೌಚಾಲಯಗಳಿಗೆ ಬಹು ಮಹತ್ವ ನೀಡಲಾಗುತ್ತದೆ. ಕನ್ನಡಿಯಂಥ ಪರಿಮಳಭರಿತ ಶೌಚಾಲಯದಲ್ಲಿ ಪುಟ್ಟ ಹೂಕುಂಡಗಳು, ಓದಲು ದಿನಪತ್ರಿಕೆ, ಕಿರು ಹೊತ್ತಿಗೆಗಳು ಇರುತ್ತವೆ. ಮನೆಯಿರಲಿ ಅಥವಾ ಸಾರ್ವಜನಿಕವಿರಲಿ ಶೌಚಾಲಯ ಸೇವೆಗೆ ಭಂಗವಾದರೆ ಮಾರಕ ಪರಿಣಾಮಗಳು ಗೊತ್ತೇ ಇದೆ. ಮನುಷ್ಯನ ಮಲಮೂತ್ರಗಳು ಪರಿಸರದಲ್ಲಿ ಬೆರೆತು ಕಾಲರಾ, ಟೈಫಾಯಿಡ್‌ನಂತಹ ರೋಗಗಳು ಹರಡಲು ಆಸ್ಪದವಾಗುತ್ತದೆ. ಕೊಳಕು ಶೌಚಾಲಯವು ರೋಗವನ್ನು ಹರಡುವ ಕ್ರಿಮಿಕೀಟಗಳು ಹಾಗೂ ಸೂಕ್ಷ್ಮಜೀವಿಗಳ ಸಂತಾನವೃದ್ಧಿಗೆ ಆವಾಸವಾಗುತ್ತದೆ.

ಒಂದು ಸಾಧಾರಣ ಕುಟುಂಬವಿರುವ ಮನೆಯ ಶೌಚಾಲಯದ ನಾಜೂಕಿನ ನಿರ್ವಹಣೆಗೆ ದಿನಕ್ಕೆ ಸರಾಸರಿ 75 ಲೀಟರುಗಳಷ್ಟು ನೀರು ಅಗತ್ಯ. ನೈರ್ಮಲ್ಯವು ಆರೋಗ್ಯಕ್ಕೆ ಮಾತ್ರವಲ್ಲ, ಖಾಸಗಿತನ, ಘನತೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ್ದು. ಶೌಚಾಲಯ ಹಾಗೂ ಅಗತ್ಯ ಪ್ರಮಾಣದ ನೀರು ಹೊಂದುವುದು ಮಾನವ ಹಕ್ಕು. ನೈರ್ಮಲ್ಯಕ್ಕೆ ಆದ್ಯತೆ ನೀಡುವುದರಿಂದ ಎಲ್ಲರಿಗೂ ಉತ್ತಮ ಮತ್ತು ಶಾಂತಿಯುತ ಬದುಕನ್ನು ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಸ್ವಚ್ಛವಲ್ಲದ ಶೌಚಾಲಯಗಳು ಪ್ರವಾಸೋದ್ಯಮದ ಮೇಲೂ ಮಾರಕ ಪರಿಣಾಮ ಬೀರುವುದು ಕಟ್ಟಿಟ್ಟ ಬುತ್ತಿ.

ಸರಿಯಾದ ಶೌಚಾಲಯ ವ್ಯವಸ್ಥೆಯಿಲ್ಲ ಎಂಬ ಕಾರಣಕ್ಕೆ ಹೆಣ್ಣುಮಕ್ಕಳು ಶಾಲೆಗೆ ಪ್ರವೇಶ ಪಡೆಯಲು ಹಿಂಜರಿಯುವುದಿದೆ. ಮಹಿಳೆಯರು ತಾವು ಉದ್ಯೋಗದಲ್ಲಿರುವ ಕಡೆ ಕನಿಷ್ಠತಮ ಶೌಚಾಲಯ ಸೌಲಭ್ಯ ಇರದಿದ್ದರೆ ಎದುರಿಸುವ ಸವಾಲುಗಳು ಹೇಳತೀರದು. ಇದು ಉತ್ಪಾದನೆ ಮತ್ತು ಆರ್ಥಿಕ ಸ್ಥಿತಿಗತಿ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಹಾಗಾಗಿ, ಒಂದು ಸಂಸ್ಥೆಯಲ್ಲಿ 20 ಮಂದಿಗೆ ಒಂದರಂತೆ ಶೌಚಾಲಯ ಇರುವುದು ಅಪೇಕ್ಷಣೀಯ. ಹಾನಿಯಾದ ಮತ್ತು ಸುರಕ್ಷಿತವಲ್ಲದ ಶೌಚಾಲಯಗಳಿಂದ ಜಾಗತಿಕ ಮಟ್ಟದಲ್ಲಿ ಪ್ರತಿವರ್ಷ ಐದು ವರ್ಷಕ್ಕೂ ಕಡಿಮೆ ವಯಸ್ಸಿನ 1,000 ಮಕ್ಕಳು ಅಸುನೀಗುತ್ತಿದ್ದಾರೆ. ಜನಪದದಲ್ಲಿ 'ಮುದ್ದೆ, ನಿದ್ದೆ, ಲದ್ದಿ' ಎಂಬ ಆರೋಗ್ಯ ಸೂತ್ರವಿದೆ.

ನೈರ್ಮಲ್ಯವು ಸಿರಿತನವೂ ಅಲ್ಲ, ಅನುಕೂಲಕ್ಕೂ ಅಲ್ಲ, ಬದುಕುಳಿಯಲು ಅದು ಅನಿವಾರ್ಯ. ಸುಸ್ಥಿರ ಶೌಚಾಲಯ ವ್ಯವಸ್ಥೆಗೆ ಮುಖ್ಯ ಅಡೆತಡೆಗಳೆಂದರೆ ವ್ಯಾಜ್ಯ, ಹವಾಗುಣ ಬದಲಾವಣೆ, ಪ್ರಾಕೃತಿಕ ಪ್ರಕೋಪಗಳು. ಇವೆಲ್ಲವನ್ನೂ ಮೀರಿಸಿದಂತೆ ನೈರ್ಮಲ್ಯವು ಎದುರಿಸುವ ಬಿಕ್ಕಟ್ಟೆಂದರೆ ಮನುಷ್ಯನ ನಿರ್ಲಕ್ಷ್ಯ.



ಮನೆಗಿಂತ ತಾಣವಿಲ್ಲ, ನಮ್ಮದೇ ಶೌಚಾಲಯಕ್ಕಿಂತ ಇನ್ನೊಂದಿಲ್ಲ ಎಂಬ ನುಡಿಯಿದೆ. ಮಹಾತ್ಮ ಗಾಂಧಿ ಸ್ವಾತಂತ್ರ್ಯಕ್ಕಿಂತಲೂ ನೈರ್ಮಲ್ಯವೇ ಹೆಚ್ಚು ಪ್ರಧಾನ ಎಂದರು. ನೈರ್ಮಲ್ಯ ಮತ್ತು ಶುಚಿತ್ವ ಅವರ ಬದುಕಿನ ಅವಿಭಾಜ್ಯ ಭಾಗಗಳೇ ಆಗಿದ್ದವು. ಭಾರತದಲ್ಲಿ ಶೇಕಡ 50ರಷ್ಟು ಮನೆಗಳಿಗೆ ತಕ್ಕ ಶೌಚಾಲಯದ ವ್ಯವಸ್ಥೆ ಇಲ್ಲ. ಜನಸಂಖ್ಯೆಯ ಮೂರನೇ ಒಂದರಷ್ಟು ಮಂದಿ ತೆರೆದ ಬಯಲನ್ನೇ ನಂಬಿದ್ದಾರೆ. ಕ್ರಿ.ಪೂ. 2800ರ ಸುಮಾರಿನಲ್ಲಿ ವಾಯವ್ಯ ಭಾರತದಲ್ಲಿ ನಳನಳಿಸಿದ್ದ ಸಿಂಧೂ ಕಣಿವೆ ನಾಗರಿಕತೆಯಲ್ಲಿ ಜಗತ್ತಿನಲ್ಲೇ ಮೊದಲ ಒಳಚರಂಡಿ ಸಂಪರ್ಕದ ಶೌಚಾಲಯಗಳಿದ್ದವು. ಹರಪ್ಪ ಮತ್ತು ಮೊಹೆಂಜೊದಾರೊ ನಗರಗಳಲ್ಲಿ 'ನುಗ್ಗು ನೀರಿನ' (flush out) ಶೌಚಾಲಯಗಳು ಇದ್ದುದು ತಿಳಿದುಬಂದಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವೆಡೆ ಬಯಲು ಮಲವಿಸರ್ಜನೆ ಆರೋಗ್ಯಯುತ ಎಂಬ ಮೌಢ್ಯವುಂಟು. ಕೆಲವೆಡೆ ಮನೆಯಲ್ಲಿ ಶೌಚಾಲಯ ಕಟ್ಟಿಸಿದ್ದರೂ ಮಲಮೂತ್ರ ವಿಸರ್ಜನೆಗೆ ಬಯಲನ್ನೇ ಆಶ್ರಯಿಸುವುದಿದೆ. ಅಂದಹಾಗೆ ಕಮೋಡ್ ಬಳಕೆಯೇ ಹೊಲಸೆಂಬ ಭಾವನೆಯೂ ಅನೇಕರಲ್ಲಿದೆ. ಜನ ಇವೆಲ್ಲ ಅಂಧಶ್ರದ್ಧೆಗಳಿಂದ ಹೊರಬಂದು 'ಸ್ವಚ್ಛ ಭಾರತ' ನಿರ್ಮಲೀಕರಣದ ಆಂದೋಲನಕ್ಕೆ ಕೈಜೋಡಿಸಬೇಕು. 2018ರ ನವೆಂಬರ್ 19ರಂದು ಕರ್ನಾಟಕ ಸರ್ಕಾರವು ಗ್ರಾಮೀಣ ಪ್ರದೇಶಗಳು 'ಬಯಲು ಶೌಚಾಲಯಮುಕ್ತ' ಎಂದು ಘೋಷಿಸಿತು. ಸರಳ ಶಿಸ್ತು, ಸಂಕಲ್ಪಗಳೇ ವಿಶ್ವ ಶೌಚಾಲಯ ದಿನವನ್ನು ಅರ್ಥಪೂರ್ಣಗೊಳಿಸುತ್ತವೆ.

ವಾಚಕರ ವಾಣಿ

ರೆಸಾರ್ಟ್‌ಗಳು ಸುರಕ್ಷತಾ ನಿಯಮ ಪಾಲಿಸಲಿ

ಮಂಗಳೂರಿನ ಸೋಮೇಶ್ವರದ ರೆಸಾರ್ಟ್‌ವೊಂದರ ಈಜುಕೊಳದಲ್ಲಿ ಮುಳುಗಿ ಮೈಸೂರಿನ ಕಾಲೇಜೊಂದರ ಮೂವರು ಯುವತಿಯರು ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಯುವತಿಯರ ಸಾವಿಗೆ ರೆಸಾರ್ಟ್ ಮಾಲೀಕರ ನಿರ್ಲಕ್ಷ್ಯವೇ ಕಾರಣ ಎಂಬುದು ಪೊಲೀಸ್ ಆಯುಕ್ತರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಈಜುಕೊಳದ ಬಳಿ ಯಾವುದೇ ಜೀವರಕ್ಷಕ ಸಿಬ್ಬಂದಿ ಇರಲಿಲ್ಲ. ಈಜು ಬಾರದವರಿಗೆ ಜೀವರಕ್ಷಕ ಜಾಕೆಟ್ ಒದಗಿಸಬೇಕಿತ್ತು. ಅಲ್ಲದೆ ಈಜುಕೊಳದ ಮಧ್ಯ ಭಾಗದಲ್ಲಿ ಆರು ಅಡಿ ಆಳ ಇರುವ ಬಗ್ಗೆ ಸೂಚನಾ ಫಲಕವಿರಲಿಲ್ಲ. ಇದರ ಅರಿವಿರದ ಯುವತಿಯರು ಈಜುಕೊಳದ ಮಧ್ಯಭಾಗಕ್ಕೆ ಬಂದು ಮುಳುಗಿ ಪ್ರಾಣ ಕಳೆದುಕೊಳ್ಳುವಂತೆ ಆಗಿದೆ.

ಯಾವುದೇ ಸುರಕ್ಷತಾ ನಿಯಮಗಳನ್ನು ಪಾಲಿಸದೆ, ಅಗತ್ಯ ಸಿಬ್ಬಂದಿಯನ್ನು ನಿಯೋಜಿಸದೆ, ಸುರಕ್ಷಾ ಸಾಧನಗಳನ್ನು ಒದಗಿಸದೆ ಇರುವುದೇ ದುರಂತಕ್ಕೆ ಕಾರಣ. ತಪ್ಪು ಎಸಗಿದ ರೆಸಾರ್ಟ್ ಮಾಲೀಕರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಅಲ್ಲದೆ ರಾಜ್ಯದಲ್ಲಿರುವ ಎಲ್ಲಾ ರೆಸಾರ್ಟ್ ಮಾಲೀಕರಿಗೆ ಎಲ್ಲಾ ಬಗೆಯ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರ್ಕಾರ ಸೂಚನೆ ನೀಡಬೇಕು.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

'ಮದುವೆ ಭಾಗ್ಯ'ದ ಭರವಸೆ!

ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರಸ್ತೆ, ನೀರು, ರೈಲು ಮಾರ್ಗದಂತಹ ಮೂಲ ಸೌಲಭ್ಯಗಳನ್ನು ಒದಗಿಸುವ ಭರವಸೆ ನೀಡುವುದು ಈಗ ಹಳೆಯ ಸುದ್ದಿ. 'ಉಚಿತ ಗ್ಯಾರಂಟಿ'ಗಳು ಈಚಿನ ವರ್ಷಗಳಲ್ಲಿ ಈ ಪಟ್ಟಿಗೆ ಸೇರಿವೆ. ಈಗ ಇವೆಲ್ಲವುಗಳನ್ನೂ ನಿವಾಳಿಸಿ ತೆಗೆಯುವಂತೆ, ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ, ಎನ್‌ಸಿಪಿ ಶರದ್ ಪವಾರ್ ಬಣದಿಂದ ಸ್ಪರ್ಧಿಸಿರುವ ಅಭ್ಯರ್ಥಿ ರಾಜೇಸಾಹೇಬ್ ದೇಶಮುಖ್, ತಾವು ಚುನಾವಣೆಯಲ್ಲಿ ಗೆದ್ದರೆ ಅವಿವಾಹಿತರಿಗೆ 'ಮದುವೆ ಭಾಗ್ಯ'ದ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿದ್ದಾರೆ. ಈ ಭರವಸೆ ಜನರಲ್ಲಿ ಅತೀವ ಕುತೂಹಲ ಮೂಡಿಸಿದೆ. ಇದು, ರಾಜಕಾರಣಿಗಳು ಸಮಕಾಲೀನ ಸಮಸ್ಯೆಗಳನ್ನು ಹೇಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾರೆ ಎನ್ನುವುದಕ್ಕೆ ಇನ್ನೊಂದು ನಿದರ್ಶನದಂತೆ ಕಾಣುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

ವೆಂಟಿಲೇಟರ್ ಖರೀದಿ: ನಡೆಯಲಿ ಆಳವಾದ ತನಿಖೆ

ಕೋವಿಡ್ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ವೆಂಟಿಲೇಟರ್‌ಗಳನ್ನು ಖರೀದಿಸಿರುವ ಕುರಿತು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗ ನೀಡಿರುವ ವಿವರ (ಪ್ರ.ವಾ., ನ. 18) ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'ದ ಬಕ್ ಸ್ಟಾಪ್ಸ್ ಹಿಯರ್'. ಅದರರ್ಥ– ಅಂತಿಮವಾಗಿ ಯಾರೋ ಒಬ್ಬರು ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ, ಇನ್ನೊಬ್ಬರಿಗೆ ಅದನ್ನು ವರ್ಗಾಯಿಸುವಂತಿಲ್ಲ. ಕೋವಿಡ್ ಅವಧಿಯಲ್ಲಿ ಅಕ್ರಮಗಳಾಗಿದ್ದರೆ ಅದರ ಹೊಣೆಯನ್ನು ಆರೋಗ್ಯ ಸಚಿವರಾಗಿದ್ದವರು, ಅಂದಿನ ಮುಖ್ಯಮಂತ್ರಿ ಹೊರಬೇಕಾಗುತ್ತದೆ. ಒಂದು ಹಂತದಲ್ಲಿ ಇಬ್ಬರು ಸಚಿವರು (ಶ್ರೀರಾಮುಲು, ಸುಧಾಕರ್) ಈ ವಿಷಯವನ್ನು ನೋಡಿಕೊಳ್ಳುತ್ತಿದ್ದರು. 'ನಾವು ಜೀವಗಳನ್ನು ಉಳಿಸಿದೆವು, ಆದರೆ ಈಗ ನಮ್ಮ ಮೇಲೇ ಆಪಾದನೆ ಹೊರಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿಯಾಗಿದ್ದವರು ಹೇಳಿದರೆ, 'ರಾಜಕೀಯ ದುರುದ್ದೇಶದಿಂದ ಹಳೆಯ ವಿಷಯಗಳನ್ನು ಕೆದಕುತ್ತಿದ್ದಾರೆ' ಎಂದು ಸಚಿವರಾಗಿದ್ದವರು ಹೇಳಿದ್ದಾರೆ. ಸಂಬಂಧಿಸಿದ ಇನ್ನೊಬ್ಬರು ಅದೇಕೋ ಮೌನವಾಗಿದ್ದಾರೆ.

ಕೊರೊನಾ ಎಲ್ಲರಲ್ಲೂ ಭಯ ಮೂಡಿಸಿತ್ತು. ಅದನ್ನು ಎದುರಿಸುವುದರಲ್ಲಿ ಸರ್ಕಾರಗಳ ಕಡೆಯಿಂದ ಕೆಲವು ತಪ್ಪುಗಳಾದವು. 'ಮಾರಿ' ತೊಲಗಿತೆಂದು ಆ ತಪ್ಪುಗಳನ್ನೆಲ್ಲ ಕ್ಷಮಿಸಿ ಮರೆತುಬಿಡಬೇಕೇ? ಕೆಲವು ಕಂಪನಿಗಳು ಹೇಗೆ, ಯಾರ ಮೂಲಕ ಪೂರೈಕೆ ಆದೇಶ ಪಡೆದವು? ಆ ಪರಿಸ್ಥಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಪಾರದರ್ಶಕತೆಯನ್ನು ಪಾಲಿಸಲಾಗಿತ್ತೇ? ಕಾಗದಪತ್ರಗಳನ್ನು ಕನಿಷ್ಠ ಪ್ರಮಾಣದಲ್ಲಾದರೂ ಪಡೆದು ಮುಂದಿನ ಪರಿಶೀಲನೆಗಾಗಿ ಸಂರಕ್ಷಿಸಿ ಇಡಲಾಯಿತೇ? ಇವೆಲ್ಲ ತನಿಖೆಗೆ ಒಳಪಟ್ಟರೆ ತಪ್ಪಿಲ್ಲ. ಕ್ರಿಮಿನಲ್ ಅಪರಾಧಕ್ಕೆ ಸಮಯಮಿತಿ ಇಲ್ಲ. ತ್ವರಿತಗತಿಯಲ್ಲಿ ವಿಷಯದ ಆಳಕ್ಕೆ ಹೋಗಿ ತನಿಖೆ ನಡೆಸಬೇಕು. ಆಡಳಿತ ನಡೆಸಿದ ಪಕ್ಷ, ವ್ಯಕ್ತಿಗಳು ಬದಲಾದರೇನು? ಸಾರ್ವಜನಿಕ ಹಣದ ಅಪವ್ಯಯ, ಪೋಲು ಆಗಿದ್ದರೆ ಸಂಬಂಧಿಸಿದ ಎಲ್ಲರ ಹೆಸರುಗಳೂ ಹೊರಗೆ ಬರಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಗುಣಾತ್ಮಕ ಕೆಲಸದ ಅವಧಿಗೆ ಸಿಗಲಿ ಆದ್ಯತೆ

ಯುವಜನ ವಾರದಲ್ಲಿ 70 ತಾಸು ಕೆಲಸ ಮಾಡುವ ಬಗ್ಗೆ ಇನ್ಫೊಸಿಸ್‌ನ ಸಹ ಸಂಸ್ಥಾಪಕ ನಾರಾಯಣಮೂರ್ತಿ ಅವರ ಹೇಳಿಕೆ ಕುರಿತು ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಪ್ರಧಾನಿ ವಾರಕ್ಕೆ 100 ಗಂಟೆ ಕೆಲಸ ಮಾಡುವ ಉದಾಹರಣೆಯನ್ನೂ ಅವರು ನೀಡಿದ್ದಾರೆ. ಕೆಲವು ವಲಯಗಳಲ್ಲಿ ಯುವಜನ ಈಗಾಗಲೇ ನಿಗದಿತ ಅವಧಿಗಿಂತ ಹೆಚ್ಚು ಸಮಯ ಮತ್ತು ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಾ, ನಿತ್ಯ ಹೈರಾಣ ಆಗುತ್ತಿರುವುದನ್ನು ನೋಡುತ್ತಿದ್ದೇವೆ. ಇನ್ನು ಅಧಿಕೃತವಾಗಿ ದಿನಾಲು ಅವರು 14 ತಾಸು ಕೆಲಸ ನಿರ್ವಹಿಸುವುದಾದರೆ ಅವರ ಜೀವನೋತ್ಸಾಹವೇ ಇಂಗಿ ಹೋಗಬಹುದು. ಸಾಂಸಾರಿಕ ಜವಾಬ್ದಾರಿ, ನೋವು, ನಲಿವು, ಸರಸ, ವಿರಸ, ವಿಹಾರ, ವಿರಾಮಕ್ಕೆ ಅವರಲ್ಲಿ ಯಾವ ಉತ್ಸಾಹವೂ ಉಳಿಯಲಿಕ್ಕಿಲ್ಲ.

ಯುವ ವಯಸ್ಸಿನಲ್ಲಿ ದುಡಿಮೆಯೊಂದಿಗೆ ನಿಭಾಯಿಸಬೇಕಾದ ಹಲವಾರು ವಿಷಯಗಳು ಇರುತ್ತವೆ. ಈಗಾಗಲೇ ಯುವಪೀಳಿಗೆಯಲ್ಲಿ ಮಾನಸಿಕ, ದೈಹಿಕ ಒತ್ತಡದ ಕುರಿತು ಮಾತುಗಳು ಕೇಳಿಬರುತ್ತಿವೆ. ವೃತ್ತಿ ಬದುಕು ಮತ್ತು ಸಾಂಸಾರಿಕ ಬದುಕಿನಲ್ಲಿ ಸಾಮರಸ್ಯ ಇರಲು ಕೆಲಸದ ಅತಿ ಒತ್ತಡ ಸಲ್ಲದು. ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ತುಂಬಾ ಇದೆ. ಇದ್ದವರಿಗೆ ಹೆಚ್ಚು ಒತ್ತಡ ಹಾಕುವುದಕ್ಕಿಂತ, ಹೆಚ್ಚು ಜನರಿಗೆ ಉದ್ಯೋಗ ಒದಗಿಸುವ ಕುರಿತು ಚಿಂತಿಸುವುದು ಒಳಿತು. ಗುಣಾತ್ಮಕ ಕೆಲಸದ ಅವಧಿ ಮತ್ತು ವೈಯಕ್ತಿಕ ಬದುಕು ಎರಡೂ ಮುಖ್ಯ.


ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. To know more about The Printers (Mysore) Private Ltd, visit www.printersmysore.com.

ಬೂದಿಮುಚ್ಚಿದ ಕೆಂಡದಂತಿದ್ದ ಮಣಿಪುರ ಮತ್ತೆ ಉದ್ವಿಗ್ನಗೊಂಡಿದೆ. ರಾಜ್ಯದ ಹೊಸ ಭಾಗಗಳಲ್ಲಿ ಸಂಘರ್ಷ ಕಾಣಿಸಿಕೊಂಡಿದ್ದು, ಹಿಂಸಾಚಾರ ಭುಗಿಲೆದ್ದಿದೆ. ಮೈತೇಯಿ ಮತ್ತು ಕುಕಿ ಜೊ ಸಮುದಾಯಗಳ ನಡುವಿನ ಸಂಘರ್ಷಕ್ಕೆ ಮತ್ತೊಂದು ಸಮುದಾಯ ಪ್ರವೇಶ ಪಡೆದಿದೆ. ಒಂದು ಕಡೆ ಮಹಿಳೆಯರ ಮೇಲೆ ಅತ್ಯಾಚಾರ, ಮಹಿಳೆಯರು ಮತ್ತು ಮಕ್ಕಳ ಅಪಹರಣ; ಮತ್ತೊಂದು ಕಡೆ, ಸೇನಾ ಪಡೆಗಳ ಗುಂಡಿಗೆ ಹತ್ತಾರು ಮಂದಿ ಸಾವು. ಚರ್ಚ್, ಅಂಗಡಿ, ಮನೆಗಳ ಜತೆಗೆ ಜನರ ಮನಸ್ಸುಗಳು ಕೂಡ ದಳ್ಳುರಿಗೆ ಸಿಲುಕಿ ಉರಿಯತೊಡಗಿವೆ

ಮಣಿಪುರ ಹಿಂಸಾಚಾರ: ಏನು, ಎತ್ತ?

- **ಮೇ 3, 2023** ಮಣಿಪುರದಲ್ಲಿ ಹಿಂಸಾಚಾರ ಆರಂಭಗೊಂಡ ದಿನ (ಚುರಾಚಾಂದ್‌ಪುರ ಜಿಲ್ಲೆಯ ತೋರಬಂಗ್ ಗ್ರಾಮದಲ್ಲಿ)
- **250**ಕ್ಕೂ ಹೆಚ್ಚು ಹಿಂಸಾಚಾರದಲ್ಲಿ ಈವರೆಗೆ ಮೃತಪಟ್ಟವರು
- **28.56** ಲಕ್ಷ | 2011ರ ಜನಗಣತಿ ಪ್ರಕಾರ ಜನಸಂಖ್ಯೆ
- **60** ಸಾವಿರ ಘರ್ಷಣೆಯಿಂದಾಗಿ ನಿರಾಶ್ರಿತರಾದವರ ಸಂಖ್ಯೆ
- **20** ನವೆಂಬರ್ 7ರಿಂದ 10 ದಿನಗಳ ಅವಧಿಯಲ್ಲಿ ಮಣಿಪುರದಲ್ಲಿ ಮೃತಪಟ್ಟವರು
- **53%** ಮಣಿಪುರದಲ್ಲಿ ನೆಲಸಿರುವ ಮೈತೇಯಿ ಸಮುದಾಯದವರ ಪ್ರಮಾಣ
- **25%** ರಾಜ್ಯದ ಜನಸಂಖ್ಯೆಯಲ್ಲಿ ಕುಕಿ ಸಮುದಾಯದವರ ಪ್ರಮಾಣ
- **15%** ನಾಗಾ ಸಮುದಾಯದ ಜನಸಂಖ್ಯೆಯ ಪ್ರಮಾಣ



ಮೈತೇಯಿ, ಕುಕಿ ಜೊ ಸಮುದಾಯಗಳ ಜತೆಗೆ ಹಮಾರ್ ಪಂಗಡ ರಂಗಪ್ರವೇಶ

ಮಣಿಪುರ ತಿದಿ ಒತ್ತಿದ ಹಿಂಸೆಯ ಕುಲುಮೆ



ಮಣಿಪುರದಲ್ಲಿ ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಯತ್ನವನ್ನು ವಿರೋಧಿಸಿ ಬುಡಕಟ್ಟು ಸಮುದಾಯಗಳಾದ ಕುಕಿ–ನಾಗ ಸಮುದಾಯಗಳು ಮೇ 3ರಂದು ಚುರಾಚಾಂದ್‌ಪುರ ಜಿಲ್ಲೆಯ ತೋರಬಂಗ್ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜಾಥಾ ಹಿಂಸಾಚಾರಕ್ಕೆ ತಿರುಗಿತ್ತು. ಈ ಹಿಂಸಾಚಾರ ಬಹು ಬೇಗ ಇಂಫಾಲ ಕಣಿವೆಯ ಮೈತೇಯಿಗಳು ಮತ್ತು ಬೆಟ್ಟ ಪ್ರದೇಶಗಳಲ್ಲಿರುವ ಕುಕಿಗಳ ನಡುವಿನ ಜನಾಂಗೀಯ ಸಂಘರ್ಷವಾಗಿ ಬದಲಾಗಿತ್ತು. ಒಂದೂವರೆ ವರ್ಷದಿಂದ ಹಿಂಸಾಚಾರದಲ್ಲಿ ಕನಿಷ್ಠ 250 ಮಂದಿ ಸತ್ತಿದ್ದು, 60,000 ಮಂದಿ ನಿರಾಶ್ರಿತರಾಗಿದ್ದಾರೆ.

ಮಣಿಪುರದ ಜನಸಂಖ್ಯೆಯಲ್ಲಿ ಮೈತೇಯಿಗಳು ಶೇ 53ರಷ್ಟಿದ್ದು, ಅವರು ಹೆಚ್ಚಾಗಿ ಇಂಫಾಲ ಕಣಿವೆಯಲ್ಲಿ ವಾಸಿಸುತ್ತಿದ್ದಾರೆ. ಉಳಿದಂತೆ ಬುಡಕಟ್ಟು ಸಮುದಾಯಗಳಾದ ನಾಗಾಗಳು, ಕುಕಿಗಳು ಶೇ 40ರಷ್ಟಿದ್ದು, ಬೆಟ್ಟ ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ಇವರ ಕ್ರಿಯೆ ಪ್ರತಿಕ್ರಿಯೆಯ ಹಿಂಸಾತ್ಮಕ ಸರಣಿಯಿಂದ ಮಣಿಪುರ ಅಗ್ನಿಕುಂಡವಾಗಿತ್ತು.

ಒಂದಷ್ಟು ದಿನ ತಣ್ಣಗಾದಂತೆ ಕಂಡಿದ್ದ ಹಿಂಸಾಚಾರ ಈಗ ಬೇರೊಂದು ಪ್ರದೇಶದಲ್ಲಿ ಕಾಣಿಸಿಕೊಂಡಿದೆ. ಆ ಪ್ರದೇಶವೇ ಜಿರೀಬಾಮ್. ಹೊಸ ಸಮುದಾಯವೊಂದು ಸಂಘರ್ಷದ ಭಾಗವಾಗಿದೆ. ಅದುವೇ ಹಮಾರ್ ಸಮುದಾಯ. ಅದು ಕುಕಿ ಜೊ ಸಮುದಾಯದ ಉಪಪಂಗಡ.

ಮುಯ್ಯಿಗೆ ಮುಯ್ಯಿ: ಕೆಲವು ಸಮಯದಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಮಣಿಪುರವು ಮತ್ತೆ ಹೊತ್ತಿ ಉರಿಯಲು ಒಬ್ಬ ಮಹಿಳೆಯ ಕೊಲೆ ಕಾರಣವಾಯಿತು.

ಕಳೆದ ವರ್ಷ ಸಂಘರ್ಷ ಆರಂಭಗೊಂಡ ನಂತರ ಮುಯ್ಯಿಗೆ ಮುಯ್ಯಿ ಎಂಬಂತೆ ಮೈತೇಯಿ ಮತ್ತು ಕುಕಿ ಸಮುದಾಯಗಳು ದಾಳಿ, ಪ್ರತಿದಾಳಿಯಲ್ಲಿ ತೊಡಗಿವೆ. ಎರಡೂ ಸಮುದಾಯಗಳಲ್ಲೂ ಶಸ್ತ್ರ ಸಜ್ಜಿತ ಬಂಡುಕೋರರ ಗುಂಪುಗಳು ಸಕ್ರಿಯವಾಗಿದ್ದು, ಸಮಾಜ ಘಾತುಕ ಚಟುವಟಿಕೆಗಳಲ್ಲೂ ತೊಡಗಿವೆ.

ಇಂಫಾಲ ಕಣಿವೆ ಮತ್ತು ಅದಕ್ಕೆ ಹೊಂದಿಕೊಂಡ ಗುಡ್ಡಗಾಡು ಪ್ರದೇಶಗಳಲ್ಲಿ ಹಿಂದೆ ಹಿಂಸಾಚಾರ ನಡೆಯುತ್ತಿದ್ದರೂ ಜಿರೀಬಾಮ್ ಜಿಲ್ಲೆ ಬಹುತೇಕ ಶಾಂತಿಯಿಂದಿತ್ತು. ಆದರೆ, ಜೂನ್‌ನಲ್ಲಿ ರೈತರೊಬ್ಬರ ಮೃತದೇಹ ಹೊಲದಲ್ಲಿ ಪತ್ತೆಯಾದ ನಂತರ ಇಲ್ಲಿಯೂ ನಿಧಾನಕ್ಕೆ ಹಿಂಸಾಚಾರ ಆರಂಭವಾಯಿತು. ಅದು ತೀವ್ರಗೊಂಡಿದ್ದು ನವೆಂಬರ್ 7ರಂದು ಹಮಾರ್ ಸಮುದಾಯಕ್ಕೆ ಸೇರಿದ ಶಿಕ್ಷಕಿಯೊಬ್ಬರ ಮೇಲೆ ಅಮಾನುಷ ದೌರ್ಜನ್ಯ ನಡೆದ ನಂತರ. ಮೈತೇಯಿಗಳ ಬಂಡುಕೋರ ಸಂಘಟನೆ ಅರಂಬಾಯ್ ಟೆಂಗೋಲ್ ಕಾರ್ಯಕರ್ತರು ತನ್ನ ಪತ್ನಿಯ ಮೇಲೆ ಅತ್ಯಾಚಾರ ಮಾಡಿ, ಆಕೆಗೆ ಗುಂಡು ಹೊಡೆದು ಜೀವಂತವಾಗಿ ಸುಟ್ಟಿದ್ದಾರೆ ಎಂದು ಶಿಕ್ಷಕಿಯ ಪತಿ ಪೊಲೀಸರಿಗೆ ದೂರು ನೀಡಿದ್ದರು. ಇದಾದ ಎರಡು ದಿನಕ್ಕೆ ಮೈತೇಯಿ ಸಮುದಾಯದ ರೈತ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗುವುದರೊಂದಿಗೆ ಪರಿಸ್ಥಿತಿ ಹದಗೆಟ್ಟಿತು.

ಇದರ ನಡುವೆಯೇ ಜಿರೀಬಾಮ್ ಜಿಲ್ಲೆಯ ಬೊರೊಬೆಕ್ರಾ ಪೊಲೀಸ್ ಠಾಣೆ ಸನಿಹವೇ ಆಂತರಿಕವಾಗಿ ಸ್ಥಳಾಂತರಗೊಂಡಿದ್ದ 100 ಮಂದಿಗಾಗಿ ಶಿಬಿರವೊಂದನ್ನು ಆರಂಭಿಸಲಾಗಿತ್ತು. ಆ ಶಿಬಿರದ ಮೇಲೆ ಮತ್ತು ಸಿಆರ್‌ಪಿಎಫ್ ಕ್ಯಾಂಪ್ ಮೇಲೆ ಸಶಸ್ತ್ರ ಬಂಡುಕೋರರು ದಾಳಿ ನಡೆಸಿದ್ದು, 10 ಮಂದಿ ದಾಳಿಕೋರರು ತಮ್ಮ ಗುಂಡಿಗೆ ಬಲಿಯಾಗಿದ್ದಾರೆ ಎಂದು ಪೊಲೀಸರು ನವೆಂಬರ್ 11ರಂದು ಹೇಳಿದರು. ದಾಳಿ ನಂತರ ಇಬ್ಬರು ನಾಗರಿಕರ ಮೃತದೇಹಗಳು ಸಿಕ್ಕಿದ್ದವು. ಜತೆಗೆ ಆರು ಮಂದಿ ನಾಪತ್ತೆಯಾಗಿದ್ದರು. ಮೈತೇಯಿ ಸಮುದಾಯಕ್ಕೆ ಸೇರಿದ್ದ ಅವರೆಲ್ಲ ಒಂದೇ ಕುಟುಂಬದವರು. ಅವರ ಪೈಕಿ ಮೂವರು ಮಹಿಳೆಯರು, ಮೂವರು ಮಕ್ಕಳು. ಈ ಘಟನೆಯ ನಂತರ ಪರಿಸ್ಥಿತಿ ಬಿಗಡಾಯಿಸಿತು.

ಮೈತೇಯಿಗಳ ದಾಳಿಯಿಂದ ತಮ್ಮನ್ನು ರಕ್ಷಿಸುತ್ತಿದ್ದ ಗ್ರಾಮ ಸ್ವಯಂಸೇವಕರನ್ನು ಬಂಡುಕೋರರು ಎಂಬುದಾಗಿ ಪರಿಗಣಿಸಿ ಪೊಲೀಸರು ಕೊಂದಿದ್ದಾರೆ ಎಂದು ಕುಕಿ ಜೊ ಸಮುದಾಯದ ಜತೆಗೆ ಹಮಾರ್ ವಿದ್ಯಾರ್ಥಿ ಸಂಘವೂ ಅಖಾಡಕ್ಕಿಳಿದು, ಪ್ರತಿಭಟನೆ ನಡೆಸತೊಡಗಿತು. ಇದು ಯೋಜಿತ ಹತ್ಯಾಕಾಂಡವಾಗಿದ್ದು, ಕೇವಲ ಅವರ ಕುಟುಂಬಗಳಿಗಷ್ಟೇ ಅಲ್ಲದೇ ತಮ್ಮ ಇಡೀ ಸಮುದಾಯಕ್ಕೆ ಆದ ನಷ್ಟ ಎಂದು ಕುಕಿ ಸಂಘಟನೆ ಆಕ್ರೋಶ ವ್ಯಕ್ತಪಡಿಸಿತು. ಬಂದ್‌ಗೆ ಕರೆ ನೀಡಲಾಯಿತು, ಅಂಗಡಿ, ಮನೆಗಳ ಮೇಲೆ ದಾಳಿಗಳು ನಡೆದವು. ಇನ್ನೊಂದು ಕಡೆ, ಆರು ಮಂದಿಯ ಅಪಹರಣ ವಿರೋಧಿಸಿ 13 ವಿವಿಧ ಸಂಘಟನೆಗಳು ಇಂಫಾಲ ಕಣಿವೆಯ ಐದು ಜಿಲ್ಲೆಗಳಲ್ಲಿ ಬಂದ್‌ಗೆ ಕರೆ ನೀಡಿದವು. ಮೈತೇಯಿ ಸಂಘಟನೆಗಳು ಬೀದಿಗಿಳಿದವು.

ಮುಂದಿನ ಕೆಲವೇ ದಿನಗಳಲ್ಲಿ ಆರು ಮಂದಿಯ ಮೃತದೇಹಗಳು ಜಿರಿ ನದಿ ಮತ್ತು ಅಸ್ಸಾಂನ ವಿವಿಧೆಡೆ ಸಿಕ್ಕವು. ಇದರಿಂದ ಮೈತೇಯಿಗಳು ಮತ್ತಷ್ಟು ಕ್ರುದ್ಧರಾಗಿದ್ದಾರೆ. ಕುಕಿಗಳು ಮತ್ತು ಹಮಾರ್ ಪಂಗಡದವರು ತಮ್ಮ ಜನರನ್ನು ಕೊಂದಿದ್ದಾರೆ ಎಂದು ಮೈತೇಯಿಗಳು ಆಕ್ರೋಶಗೊಂಡಿದ್ದಾರೆ. ಇನ್ನೊಂದು ಕಡೆ, ಮೈತೇಯಿಗಳ ಜತೆ ಪೊಲೀಸರೂ ಸೇರಿಕೊಂಡು ತಮ್ಮನ್ನು ಬಲಿ ಪಡೆಯುತ್ತಿದ್ದಾರೆ ಎಂದು ಕುಕಿ ಮತ್ತು ಹಮಾರಾ ಪಂಗಡಗಳು ತೀವ್ರ ಪ್ರತಿರೋಧಕ್ಕೆ ಇಳಿದಿವೆ.

ಮೈತೇಯಿ, ಕುಕಿ ಜೊ, ಹಮಾರ್ ಪಂಗಡಗಳು ಪರಸ್ಪರ ಅಪನಂಬಿಕೆ, ದ್ವೇಷ, ಕ್ರಿಯೆಗೆ ತಕ್ಕ ಪ್ರತಿಕ್ರಿಯೆಯ ಹಾದಿ ಹಿಡಿದಿವೆ. ಸಮುದಾಯಗಳ ನಡುವೆ ವಿಶ್ವಾಸ ಮರುಸ್ಥಾಪಿಸಿ, ಹಿಂಸಾಚಾರ ನಿಲ್ಲಿಸುವ ಶಕ್ತಿಗಳೇ ರಾಜ್ಯದಲ್ಲಿ ಇಲ್ಲವಾಗಿದೆ. ಮೂರು ಸಮುದಾಯಗಳ ನಡುವಿನ ಸಂಘರ್ಷದ ಕುಲುಮೆಯಲ್ಲಿ ಮಣಿಪುರ ಮತ್ತೆ ಕುದಿಯುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್

ತಡ ಮಾಡಿತೇ ಕೇಂದ್ರ ಸರ್ಕಾರ?

ಮಣಿಪುರದಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದ ಬಳಿಕ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಲು ಆರಂಭಿಸಿದೆ. ನ.7ರಂದು ನಡೆದ ಹಮಾರ್ ಮಹಿಳೆ ಹತ್ಯೆ, ಶಸ್ತ್ರಸಜ್ಜಿತ ವ್ಯಕ್ತಿಗಳು ಸಿಆರ್‌ಪಿಎಫ್ ಠಾಣೆಯ ಮೇಲೆ ನಡೆಸಿದ ದಾಳಿ ಮತ್ತು ನ.11ರಂದು ಬೊರೊಬೆಕ್ರಾದಲ್ಲಿ ಮನೆಗಳಿಗೆ ಬೆಂಕಿ ಹಚ್ಚಿ, ನಾಗರಿಕರನ್ನು ಕೊಂದ ಪ್ರಕರಣಗಳ ತನಿಖೆಯನ್ನು ಎನ್‌ಐಎ ಆರಂಭಿಸಿದೆ.

ಗೃಹ ಸಚಿವ ಅಮಿತ್ ಶಾ ಅವರು ಮಹಾರಾಷ್ಟ್ರದ ಚುನಾವಣಾ ರ‍್ಯಾಲಿಯನ್ನು ಸ್ಥಗಿತಗೊಳಿಸಿ, ಮಣಿಪುರ ಸ್ಥಿತಿಗತಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ಅಲ್ಲಿಗೆ ಹೆಚ್ಚುವರಿ ಭದ್ರತಾ ತುಕಡಿಗಳನ್ನು ಕಳುಹಿಸಲೂ ಕೇಂದ್ರ ಗೃಹ ಸಚಿವಾಲಯ ತೀರ್ಮಾನ ಕೈಗೊಂಡಿದೆ.

ಕಳೆದ ವರ್ಷದ ಮೇ ತಿಂಗಳಲ್ಲಿ ಹಿಂಸಾಚಾರ ಆರಂಭಗೊಂಡಿದ್ದರೂ, ಕೇಂದ್ರ ಸರ್ಕಾರ ಈ ಬಗ್ಗೆ ಗಮನ ಹರಿಸಲಿಲ್ಲ ಎಂಬುದು ವಿರೋಧ ಪಕ್ಷಗಳ ಆರೋಪ. ನಿರಂತರ ಘರ್ಷಣೆ ನಡೆಯುತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ಬಗ್ಗೆ ಮಾತನಾಡಿರಲಿಲ್ಲ. ಈ ವರ್ಷದ ಜುಲೈನಲ್ಲಿ ನಡೆದ ಸಂಸತ್ ಅಧಿವೇಶನದಲ್ಲಿ ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ಚರ್ಚೆಯಲ್ಲಿ ಮಾತನಾಡುತ್ತಾ ಮಣಿಪುರದ ಹಿಂಸಾಚಾರದ ಬಗ್ಗೆ ಪ್ರಸ್ತಾಪಿಸಿದ್ದರು. ಪ್ರಧಾನಿಯವರ ಮೌನವೂ ಚರ್ಚೆಗೆ ಗ್ರಾಸವಾಗಿತ್ತು. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಗಳಿದ್ದರೂ, ಹಿಂಸಾಚಾರ ತಡೆಯಲು ವಿಫಲವಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಮತ್ತೆ ‘ಆಫ್‌ಸ್ಪಾ’ ಅಸ್ತ್ರ



ಜನಾಂಗೀಯ ಸಂಘರ್ಷ ನಿಯಂತ್ರಣಕ್ಕೆ ಬರದಿರುವುದನ್ನು ಮನಗಂಡು, ಹಿಂಸಾಪೀಡಿತ ಜಿರೀಬಾಮ್ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರವು ವಿವಾದಾತ್ಮಕ 1958ರ ಸಶಸ್ತ್ರ ಪಡೆಗಳ (ವಿಶೇಷಾಧಿಕಾರ) ಕಾಯ್ದೆಯನ್ನು ಮರು ಜಾರಿಗೊಳಿಸಿರುವುದು ಪರ ವಿರೋಧ ಚರ್ಚೆಯನ್ನು ಹುಟ್ಟುಹಾಕಿದೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ, ಬಹುಸಂಖ್ಯಾತ ಮೈತೇಯಿ ಸಮುದಾಯ, ವಿರೋಧ ಪಕ್ಷ ಕಾಂಗ್ರೆಸ್, ಮಣಿಪುರದ ನಾಗರಿಕ ಸಂಘಟನೆ ಸಿಇಸಿಒಎಂಐ ಇದನ್ನು ವಿರೋಧಿಸಿವೆ. ಕುಕಿ ಸಂಘಟನೆ ಮಾತ್ರ ಈ ಕಾಯ್ದೆಯನ್ನು ಇತರೆಡೆಗಳಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದೆ.

2022ರ ಏಪ್ರಿಲ್‌ನಿಂದ 2023ರ ಏಪ್ರಿಲ್ ನಡುವೆ ಮಣಿಪುರ ರಾಜ್ಯದ ಮೇಲೆ ಹೇರಲಾಗಿದ್ದ ‘ಆಫ್‌ಸ್ಪಾ’ವನ್ನು ವಾಪಸ್ ಪಡೆಯಲಾಗಿತ್ತು. ಆದರೆ, ನಂತರ ಹಿಂಸಾಚಾರ ಹೆಚ್ಚಾಗಿದ್ದರಿಂದ 19 ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಬಿಟ್ಟು ರಾಜ್ಯದಾದ್ಯಂತ ಅಕ್ಟೋಬರ್ 1ರಿಂದ ಕಾಯ್ದೆಯನ್ನು ಮರು ಜಾರಿಗೊಳಿಸಿ ಮಣಿಪುರ ಸರ್ಕಾರ ಆದೇಶ ಹೊರಡಿಸಿತ್ತು. ಈ 19 ಠಾಣೆಗಳ ವ್ಯಾಪ್ತಿಯ ಪೈಕಿ ಆರು ಠಾಣೆಗಳ ವ್ಯಾಪ್ತಿಯಲ್ಲಿ ಈಗ ಕಾಯ್ದೆಯನ್ನು ಮತ್ತೆ ಜಾರಿಗೆ ತರಲಾಗಿದೆ. ಈ ಠಾಣೆಗಳ ವ್ಯಾಪ್ತಿಯನ್ನು ‘ಸಂಘರ್ಷ ಪೀಡಿತ ಪ್ರದೇಶ’ ಎಂದು ಗುರುತಿಸಲಾಗಿದೆ.

ಕಾಯ್ದೆಯ ಅಡಿಯಲ್ಲಿ ಯಾವುದೇ ಜಿಲ್ಲೆ ಅಥವಾ ಪ್ರದೇಶವನ್ನು ‘ಸಂಘರ್ಷ ಪೀಡಿತ’ ಎಂದು ಘೋಷಿಸಿದರೆ, ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಯಾವುದೇ ಕಠಿಣ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಭದ್ರತಾ ಪಡೆಗಳಿಗೆ ಈ ಕಾಯ್ದೆ ನೀಡುತ್ತದೆ. ಅಲ್ಲಿ ಸಶಸ್ತ್ರ ಪಡೆಗಳು ಶೋಧಕಾರ್ಯ ನಡೆಸಬಹುದು, ಶಂಕಿತರನ್ನು ಬಂಧಿಸಬಹುದು, ಗುಂಡಿನ ದಾಳಿಯನ್ನೂ ನಡೆಸಬಹುದು.

ಮಣಿಪುರ, ಅಸ್ಸಾಂ ಸೇರಿದಂತೆ ಏಳು ಈಶಾನ್ಯ ರಾಜ್ಯಗಳನ್ನು ಗುರಿಯಾಗಿಸಿಕೊಂಡೇ 1958ರಲ್ಲಿ ಈ ಕಾಯ್ದೆಯನ್ನು ರೂಪಿಸಲಾಗಿತ್ತು. ಸಶಸ್ತ್ರ ಪಡೆಗಳು ಈ ಕಾನೂನನ್ನು ದುರ್ಬಳಕೆ ಮಾಡಿಕೊಂಡು ಜನ ಸಾಮಾನ್ಯರ ಮೇಲೆ ದೌರ್ಜನ್ಯ ಎಸಗುತ್ತಿವೆ ಎಂಬ ಆರೋಪ ಹಿಂದಿನಿಂದಲೂ ಕೇಳಿಬರುತ್ತಿತ್ತು. ಮಣಿಪುರದ ‘ಉಕ್ಕಿನ ಮಹಿಳೆ’, ಮಾನವ ಹಕ್ಕುಗಳ ಹೋರಾಟಗಾರ್ತಿ ಇರೋಮ್ ಶರ್ಮಿಳಾ ಅವರು ಈ ಕಾಯ್ದೆಯ ವಿರುದ್ಧ ಮಾಡಿದ್ದ ಸುದೀರ್ಘ ಹೋರಾಟ (16 ವರ್ಷಗಳ ಉಪವಾಸ ಸತ್ಯಾಗ್ರಹ) ಈಗ ಇತಿಹಾಸ.

ಸಂತೋಷವಾಗಿ ಬದುಕಬೇಕು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

69

ನಿಸರ್ಗ ಇಷ್ಟೊಂದು ಸುಂದರವಾದ ಜೀವನವನ್ನು ನಮಗೆ ಕೊಟ್ಟಿದೆಯಲ್ಲ ಅದನ್ನು ಸಂತೋಷಪೂರ್ಣವಾಗಿ ಕಟ್ಟಿಕೊಳ್ಳಲು ಗೊತ್ತಿಲ್ಲದಿದ್ದರೆ ಮನುಷ್ಯನಿಗೆ ಏನನ್ನಬೇಕು? ದೇವರಿಗೆ ಒಮ್ಮೆ, ‘ಇಷ್ಟೊಂದು ಸುಂದರವಾದ ಸೃಷ್ಟಿ ನಾನು ಮಾಡೇನಿ, ಒಮ್ಮೆ ನೋಡಿ ಬರಬೇಕು’ ಅಂತ ಅನಿಸಿತಂತೆ. ಪಶು ಪಕ್ಷಿ ಪ್ರಾಣಿಗಳಿಂದ ಒಂದು ಫೀಡ್ ಬ್ಯಾಕ್ ತಗೋಬೇಕು ಅಂತ ಅನಿಸಿತು. ಅದಕ್ಕೆ ಮೇಲಿಂದ ಭೂಮಿಗೆ ಬಂದ.

ಮೊಟ್ಟಮೊದಲು ಒಂದು ದುಂಬಿ ಭೆಟ್ಟಿಯಾಯಿತು. ಅದಕ್ಕೆ ಕೇಳಿದ. ‘ನಾನು ಇಷ್ಟು ಸೃಷ್ಟಿ ಮಾಡಿದೀನಲ್ಲ, ನಿನಗೆ ಏನನಸ್ತದ’ ಎಂದು. ಅದಕ್ಕೆ ದುಂಬಿ, ‘ತುಂಬಾ ಚೆನ್ನಾಗಿದೆ. ಎಷ್ಟೊಂದು ಹೂವು ಸೃಷ್ಟಿ ಮಾಡಿದಿ, ಮಕರಂದ ಹೀರೋದೇ ನನ್ನ ಕೆಲಸ. ಹೂವಿಂದ ಹೂವಿಗೆ ಹಾರತೀನಿ ಮಕರಂದ ಹೀರುತೀನಿ, ಸಂತೋಷವೇ ಸಂತೋಷ. ನಿನ್ನ ಸೃಷ್ಟಿ ಅಂದರ ಸುಂದರ ನೋಡಪ, ನಿನ್ನ ಸೃಷ್ಟಿ ಅಂದರ ಸೌಂದರ್ಯ. ನಿನ್ನ ಸೃಷ್ಟಿ ಅಂದರ ಮಕರಂದ’ ಎಂದು ಹೇಳಿತು. ದೇವರಿಗೆ ಸಂತೋಷ ಆಯಿತು. ನಂತರ ಒಂದು ಪಕ್ಷಿ ಭೇಟಿಯಾತು. ಅದಕ್ಕೂ ಇದೇ ಪ್ರಶ್ನೆ ಕೇಳಿದ. ‘ನಿನ್ನ ಸೃಷ್ಟಿಯ ಬಗ್ಗೆ ಹೇಳುವುದಕ್ಕೆ ನಾನು ದೊಡ್ಡವನಲ್ಲ. ನಾನೊಂದು ಹಕ್ಕಿ ಅಷ್ಟೆ. ಎಷ್ಟು ಸರೋವರಗಳನ್ನು ಸೃಷ್ಟಿಸಿದಿ, ಎಷ್ಟು ಗಿಡಗಳನ್ನು ಸೃಷ್ಟಿಸಿದಿ. ಎಲ್ಲ ಮರಗಳಿಗೆ ಹಾರಿಕೊಂಡು ಹೋಗ್ತೀನಿ, ಬೇಕಾದ್ದು ಹಣ್ಣು ತಿನ್ನುತೀನಿ, ಬೇಕಾದಾಗ ನೀರು ಕುಡೀತೀನಿ. ನಿನ್ನ ಸೃಷ್ಟಿ ಬಗ್ಗೆ ಹೇಳೋಕೆ ನನಗೆ ಬರಲ್ಲ. ಆದರೆ ಕೃತಜ್ಞತೆ ಪೂರ್ವಕವಾಗಿ ಒಂದು ಹಾಡು ಹೇಳೀನಿ. ಹಾಡೇ ನನ್ನ ಧನ್ಯವಾದ. ನನ್ನ ಹೃದಯ ಹಾಡಾಗಿ ಬರತೈತಿ. ನಿನ್ನ ಸೃಷ್ಟಿ ಅಷ್ಟು ಅದ್ಭುತ’ ಅಂತು.

ನಂತರ ಒಂದು ಕಪ್ಪೆಯನ್ನು ಕೇಳಿದ ದೇವರು. ‘ಏನು ಹೇಳಲಿ ಭಗವಂತ. ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗೆ ಅಲ್ಲಲ್ಲಿ ಆಹಾರ ಇಟ್ಟಿ. ನಿನ್ನ ಸೃಷ್ಟಿಯ ಬಗ್ಗೆ ಮಾತನಾಡಲು ನನಗೆ ಶಬ್ದಗಳೇ ಸಿಗೋದಿಲ್ಲ’ ಎಂದಿತು. ದೇವರಿಗೆ ಬಹಳ ಸಂತೋಷಾತು. ಅಷ್ಟರಲ್ಲಿ ಮನುಷ್ಯನೊಬ್ಬ ಭೇಟಿಯಾದ. ಅವನಿಗೂ ಅದೇ ಪ್ರಶ್ನೆ ಕೇಳಿದ. ಪ್ರಶ್ನೆ ಕೇಳಿದ ತಕ್ಷಣವೇ ಅವ ದೇವರ ಮೇಲೆ ಏರಿಯೇ ಬಂದ. ‘ಏನ್ ಏನ್ ಚಲೋ ಮಾಡಿದಿ? ಒಂದಾರು ಚಲೋ ಮಾಡಿಯೇನು? ನೀರಿಗಾಗಿ ಜನ ಕಷ್ಟಪಡಾಕತ್ತಾರ. ನದಿ ಸಣ್ಣದು ಮಾಡಿ ಸಿಹಿ ಇಟ್ಟಿ. ಸಮುದ್ರ ದೊಡ್ಡದು ಮಾಡಿ ನೀರು ಉಪ್ಪು ಮಾಡಿದಿ. ಪರ್ವತಗಳಿಗೆ ಒಂದಕ್ಕಾದರೂ ಆಕಾರ ಇದಾವೇನು? ಬ್ಯಾರೇ ದೇಶದವರಿಗೆ ಕೆಂಪಗೆ ಮಾಡಿದಿ. ನಮ್ಮವರು ಕೆಂಪಗೆ ಆಗಬೇಕು ಅಂತಾ ದಿನಾ ಪಾರ್ಲರಿಗೆ ಹೋಗುವಾಂಗ ಮಾಡಿದಿ. ಒಬ್ಬರಿಗಾದರೂ ಚಲೋ ಮಾಡಿಯೇನು? ಹೊಟ್ಟೆಗೆ ಅನ್ನ ಇಲ್ಲ ಅಂತಾ ಕೆಲವರು ತಿರುಗ್ತಾರ, ಇನ್ನು ಕೆಲವರು ತಿಂದಿದ್ದು ಕರಗಸಕ ಅಡ್ಡಾಡ್ತಾರ. ಅಲ್ಲ, ನಿನಗ ತಿಳಿದಿದ್ದಿಲ್ಲ ಅಂದರ ನನಗಾದರೂ ಕೇಳಬೇಕಾಗಿತ್ತು. ನಾನಾರ ಹೇಳತಿದ್ದೆ’ ಎಂದ.

ದೇವರಿಗೆ ದಿಕ್ಕು ತಪ್ಪಿತು. ಅವ ಪಕ್ಷಿಗೆ ‘ಇವ ಹೀಂಗ್ಯಾಕೆ’ ಎಂದು ಕೇಳಿದ. ‘ಅದರ ಹಣೆಬರಹನ ಅಷ್ಟು’ ಎಂದಿತು ಪಕ್ಷಿ. ನಿಸರ್ಗ ನೀಡಿದ ಈ ಜೀವನವನ್ನು ಸರಿಯಾಗಿ ಬಳಸಿಕೊಳ್ಳಲು ಬಾರದಿದ್ದರೆ ನಮ್ಮನ್ನು ಅಜ್ಞಾನಿ ಅಂತಾರ. ಜ್ಞಾನಿ ಅಂದರ, ನಿಸರ್ಗ ನೀಡಿದ್ದನ್ನು ಬಳಸಿಕೊಂಡು ಸಂತೋಷವಾಗಿರೋದು ಅಷ್ಟೆ. ಪಶು, ಪಕ್ಷಿಗಳು ಸಂತೋಷವಾಗಿದಾವು. ನಾವೂ ಹಾಂಗ ಇರೋದು.

‘A for ಆನಂದ್’ ಎಂದ ಶಿವರಾಜ್‌ಕುಮಾರ್




‘ಘೋಸ್ಟ್’ ಸಿನಿಮಾ ಬಳಿಕ ನಟ ಶಿವರಾಜ್‌ಕುಮಾರ್ ಹಾಗೂ ನಿರ್ದೇಶಕ ಶ್ರೀನಿ ಕಾಂಬಿನೇಷನ್‌ನಲ್ಲಿ ಹೊಸ ಸಿನಿಮಾವೊಂದು ಘೋಷಣೆಯಾಗಿದೆ. ಶಿವರಾಜ್‌ಕುಮಾರ್ ಕೈಗೆ ಶ್ರೀನಿ ಇದೀಗ ಪೆನ್ನು, ಬಳಪ ನೀಡಿ ಪಾಠಶಾಲೆಗೆ ‘ಮೇಸ್ಟ್ರು’ ಮಾಡಿದ್ದಾರೆ.

ಇವರ ಹೊಸ ಸಿನಿಮಾ ‘A for ಆನಂದ್’ನ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಯಿತು. ‘ವೇದ’, ‘ಭೈರತಿ ರಣಗಲ್’ ಬಳಿಕ ಗೀತಾ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿರುವ ಮೂರನೇ ಸಿನಿಮಾ ಇದಾಗಿರಲಿದೆ. ‘ಮಫ್ತಿ’ ಸಿನಿಮಾದಲ್ಲಿ ಡಾನ್ ಆಗಿ, ‘ಟಗರು’ ಸಿನಿಮಾದಲ್ಲಿ ಪೊಲೀಸ್ ಆಗಿ, ‘ಭೈರತಿ ರಣಗಲ್’ ಸಿನಿಮಾದಲ್ಲಿ ‘ಲಾಯರ್’ ಆಗಿ ಹೀಗೆ ಭಿನ್ನ ಪಾತ್ರಗಳಿಗೆ ಬಣ್ಣಹಚ್ಚುತ್ತಿರುವ ಶಿವರಾಜ್‌ಕುಮಾರ್ ಮೇಸ್ಟ್ರಾಗಿ ಬಣ್ಣಹಚ್ಚಲಿದ್ದಾರೆ. ‘ಸುಂದರಕಾಂಡ’ ಸಿನಿಮಾದಲ್ಲಿ ಕನ್ನಡ ಟೀಚರ್ ಆಗಿದ್ದ ಶಿವರಾಜ್‌ಕುಮಾರ್ ಬಹಳ ವರ್ಷಗಳ ಬಳಿಕ ಮತ್ತೆ ಟೀಚರ್ ಆಗುತ್ತಿದ್ದಾರೆ. ಇದು ನೈಜ ಘಟನೆಯಾಧಾರಿತ ಸಿನಿಮಾ. ಚಿತ್ರದಲ್ಲಿ ಒಂದೊಳ್ಳೆಯ ಸಂದೇಶವಿದೆ ಎಂದಿದೆ ಚಿತ್ರತಂಡ.

‘A for ಆನಂದ್’ ಸಿನಿಮಾಗೆ ಬಹುತೇಕ ‘ಘೋಸ್ಟ್’ ತಾಂತ್ರಿಕ ವರ್ಗವೇ ಕೆಲಸ ಮಾಡುತ್ತಿದೆ. ಮಹೇನ್ ಸಿಂಹ ಕ್ಯಾಮೆರಾ, ದೀಪು ಎಸ್. ಕುಮಾರ್ ಸಂಕಲನ, ಪ್ರಸನ್ನ ವಿಎಂ ಸಂಭಾಷಣೆ ಚಿತ್ರಕ್ಕಿದೆ. 2025ರ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಚಿತ್ರತಂಡ ಶೂಟಿಂಗ್ ಆರಂಭಿಸಲಿದೆ.

‘ಕಾಂತಾರ’ ಪ್ರೀಕ್ವೆಲ್ 2025ರ ಅ.2ಕ್ಕೆ ರಿಲೀಸ್


ರಿಷಬ್ ಶೆಟ್ಟಿ


ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ ‘ಕಾಂತಾರ’ ಸಿನಿಮಾ ಪ್ರೀಕ್ವೆಲ್ ಚಿತ್ರೀಕರಣ ಕುಂದಾಪುರದಲ್ಲಿ ನಡೆಯುತ್ತಿದ್ದು, ಸಿನಿಮಾ 2025ರ ಅಕ್ಟೋಬರ್ 2ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಹೊಂಬಾಳೆ ಫಿಲಂಸ್ ತಿಳಿಸಿದೆ.

‘ಕಾಂತಾರ ಚಾಪ್ಟರ್ 1’ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಸೇರಿ ಇನ್ನೂ ಹಲವು ಭಾಷೆಗಳಲ್ಲಿ ಈ ಸಿನಿಮಾ ರಿಲೀಸ್ ಆಗಲಿದೆ. ‘ಕುಂದಾಪುರದಲ್ಲಿ ಐತಿಹಾಸಿಕ ಕದಂಬ ಸಾಮ್ರಾಜ್ಯವನ್ನು ಮರುಸೃಷ್ಟಿಸಿ, ಶೂಟಿಂಗ್ ನಡೆಸಲಾಗುತ್ತಿದೆ. ಈ ಸಿನಿಮಾ ಮೂಲಕ ಪ್ರೇಕ್ಷಕನನ್ನು ಶೌರ್ಯ, ಸಂಸ್ಕೃತಿ ಮತ್ತು ಅತೀಂದ್ರಿಯ ಯುಗಕ್ಕೆ ಕರೆದೊಯ್ಯಲಿದ್ದೇವೆ’ ಎಂದಿದೆ ಚಿತ್ರತಂಡ. ಈ ಸಿನಿಮಾ ಮತ್ತು ತಮ್ಮ ಪಾತ್ರದ ಸಲುವಾಗಿ ರಿಷಬ್ ಶೆಟ್ಟಿ ವಿಶೇಷ ತಯಾರಿಯನ್ನೇ ಮಾಡಿಕೊಂಡಿದ್ದಾರೆ. ಕೇರಳದ ಅತ್ಯಂತ ಹಳೆಯ ಸಮರ ಕಲೆಯ ಪ್ರಕಾರಗಳಲ್ಲಿ ಒಂದಾದ ಕಳರಿಪಯಟ್ಟು ತರಬೇತಿ ಪಡೆದಿದ್ದಾರೆ. ಕಲೆಯನ್ನು ಕರಗತ ಮಾಡಿಕೊಳ್ಳಲು ಸಾಕಷ್ಟು ಶ್ರಮಿಸಿದ್ದಾರೆ. ಈಗಾಗಲೇ ಆ್ಯಕ್ಷನ್ ದೃಶ್ಯಗಳನ್ನು ನಿರ್ದೇಶಿಸಲು ತೆಲುಗಿನ ಹಿಟ್ ಸಿನಿಮಾ ‘ಆರ್‌ಆರ್‌ಆರ್’ನ ಆ್ಯಕ್ಷನ್ ನಿರ್ದೇಶಕರಾಗಿದ್ದ ಟೊಡರ್ ಲ್ಯಾಜರೋವ್ ‘ಕಾಂತಾರ’ ತಂಡ ಸೇರಿಕೊಂಡಿದ್ದಾರೆ. ಇದಕ್ಕಾಗಿ ಬಲ್ಗೇರಿಯಾದಿಂದ ಟೊಡರ್ ಕುಂದಾಪುರಕ್ಕೆ ಬಂದಿದ್ದಾರೆ.

ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಂ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್.ಕಶ್ಯಪ್ ಅವರ ಛಾಯಾಚಿತ್ರಗ್ರಹಣ ಸೇರಿದಂತೆ ಮೊದಲ ಭಾಗದಲ್ಲಿ ಕಾರ್ಯನಿರ್ವಹಿಸಿದ್ದ ತಾಂತ್ರಿಕ ತಂಡವೇ ಪ್ರೀಕ್ವೆಲ್‌ನಲ್ಲೂ ಕೆಲಸ ಮಾಡುತ್ತಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ನವೆಂಬರ್ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ಥಿ ಗಂ. 17-29 ನಕ್ಷತ್ರ: ಆರ್ದ್ರಾ ಗಂ. 14-56 ಯೋಗ: ಸಾಧ್ಯ ಗಂ. 14-56 ಕರಣ: ಬಾಲವ ಗಂ. 17-29, ವೃಶ್ಚಿಕ ಮಾಸದ 03 ನೇ ದಿನ, ಮಳೆನಕ್ಷತ್ರ: ಅನುರಾಧ 1.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-35 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 16 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 1, 11

ಮೇಷ: ಕಾರ್ಮಿಕರ ಬೇಡಿಕೆಗಳನ್ನು ಅಲ್ಲಗಳೆಯದೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಸಂತಸವಿರುವುದು. ಆಪ್ತರ ಹಿತಾಸಕ್ತಿಗಳಿಗೆ ಒತ್ತಾಸೆಯೂ ಇರಲಿ.

ವೃಷಭ: ಸಂಬಂಧಿಕರು ಹಳೆ ವ್ಯಾಜ್ಯಗಳನ್ನು ಮರೆತು ನಿಮ್ಮೊಂದಿಗೆ ಸಂಬಂಧ ಉಳಿಸಿಕೊಳ್ಳುವ ದೃಷ್ಟಿಯಿಂದ ಬಂದಾರು. ಜಾಗರೂಕತೆಯಿಂದ ಅವರಲ್ಲಿ ವ್ಯವಹರಿಸುವುದು ಭವಿಷ್ಯಕ್ಕೆ ಹಿತವಾದುದು.

ಮಿಥುನ: ದೀರ್ಘಕಾಲೀನ ಅನಾರೋಗ್ಯಗಳನ್ನು ಆಪ್ತರ ಸಲಹೆಯ ಮೇರೆಗೆ ವೈದ್ಯರೊಬ್ಬರನ್ನು ಕಂಡು ಬಗೆಹರಿಸಿಕೊಳ್ಳುವಿರಿ. ಸ್ಥಗಿತಗೊಂಡ ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು.

ಕರ್ಕಾಟಕ: ನಿಜವಾದ ಗೆಳೆಯ ಯಾರೆಂಬುದು ತಿಳಿಯಲಿದೆ. ನಿಮ್ಮ ತಪ್ಪುಗಳ ಬಗ್ಗೆ ಬೇರೆಯವರು ಹೇಳುವ ಮೊದಲು ಸರಿಪಡಿಸಿಕೊಳ್ಳಿರಿ. ಸಹಚರರ, ಕುಟುಂಬದ ಸದಸ್ಯರ ಹಿತಾಸಕ್ತಿಗೆ ಆದ್ಯತೆ ಇರಲಿ.

ಸಿಂಹ: ವೃತ್ತಿಯಲ್ಲಿ ಈಗಾಗಲೇ ಯಶಸ್ಸನ್ನು ಗಳಿಸಿರುವವರೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನ ಯಶಸ್ವಿಯಾಗುತ್ತದೆ. ವಿನೋದ ಸ್ವಭಾವ ಹಾಗೂ ಬುದ್ಧಿವಂತಿಕೆ ಇತರರನ್ನು ಆಕರ್ಷಿಸುವುದು.

ಕನ್ಯಾ: ಶ್ರೇಯೋಭಿವೃದ್ಧಿಗಾಗಿ ದುರ್ಗಾಪರಮೇಶ್ವರಿಯಲ್ಲಿ ವಿಶೇಷ ಪ್ರಾರ್ಥನೆಯನ್ನು ಮಾಡಿಕೊಳ್ಳಿರಿ. ಬಹುದಿನದ ನಂತರ ಆರೋಗ್ಯ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಸಿಗುವುದು. ಸಾಮಾಜಿಕವಾದ ಕಳಕಳಿ ಹೆಚ್ಚಲಿದೆ.

ತುಲಾ: ಅಧಿಕಾರಿ ಹಾಗೂ ಹಿರಿಯರಿಂದ ಸಹಕಾರಗಳನ್ನು ಅಪೇಕ್ಷಿಸುವಂತಹ ದಿನ ಆಗಲಿದೆ. ಏಕಾಂಗಿ ಹೋರಾಟ ಸರಿಯಲ್ಲ. ನಂಬಿಕಸ್ಥರಿಂದ ವ್ಯಾಪಾರದಲ್ಲಿ ಮೋಸಹೋಗುವುದರಿಂದ ಎಚ್ಚರವಿರಲಿ.

ವೃಶ್ಚಿಕ: ಮನೆಯ ಪರಿಸ್ಥಿತಿಗಳನ್ನು ಸುಧಾರಣೆಗೆ ತರುವ ಪ್ರಯತ್ನದಿಂದ ಕೆಲಸದ ಕಡೆಗೆ ಗಮನ ಕೊಡಲು ಸಾಧ್ಯವಾಗದಂತಾಗಲಿದೆ. ಪ್ರಾಮಾಣಿಕತೆ ಇರಲಿ. ಸಂತೋಷದ ಘಟನೆಗಳು ನಡೆಯುವುದು.

ಧನು: ಅಧಿಕ ಕೌಟುಂಬಿಕ ಒತ್ತಡಗಳ ಮಧ್ಯೆಯೂ ವ್ಯಾಪಾರ ವ್ಯವಹಾರಗಳ ಬಗ್ಗೆ ಸ್ವಲ್ಪ ಹೆಚ್ಚಿನ ಗಮನವನ್ನೇ ನೀಡಬೇಕಾದ ಬಿಗಿಯಾದ ಪರಿಸ್ಥಿತಿಯು ಬರುವುದು. ಕನಸುಗಳು ಈ ದಿನ ಕನಸಾಗಿಯೇ ಉಳಿಯಲಿದೆ.

ಮಕರ: ಬಂಧುಮಿತ್ರರ ಉತ್ತಮ ನಡವಳಿಕೆಗಳಿಂದ ಸಂಕಷ್ಟಕರ ಸಂದರ್ಭದಲ್ಲಿ ಸಹಾಯಕ್ಕೆ ಬಂದಾರು ಎಂಬ ಆಶಾಭಾವನೆ ಬರುವುದು. ಮೇಲಧಿಕಾರಿಗಳಿಂದ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ.

ಕುಂಭ: ಕೆಲಸದ ಒತ್ತಡದಿಂದ ಉಂಟಾಗುತ್ತಿರುವ ಶರೀರ ಬಾಧೆಗಳನ್ನು ನಿವಾರಿಸಿಕೊಳ್ಳಲೆಂದು ತೆಗೆದುಕೊಳ್ಳುವ ಔಷಧಗಳು ನಿಧಾನವಾಗಿ ವಿಷವಾಗಿ ಪರಿಣಮಿಸಬಹುದು. ಕೌಟುಂಬಿಕ ವಿಷಯದಲ್ಲಿ ಆತ್ಮವಿಶ್ವಾಸ ಹೆಚ್ಚಲಿದೆ.


ಮೀನ: ಎಲ್ಲಾ ವಿಷಯದಲ್ಲಿಯೂ ಹೊಂದಾಣಿಕೆ ಅಗತ್ಯವೆನಿಸಲಿದೆ. ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ ಆಗಲಿದೆ. ಶ್ರಮಕ್ಕೆ ಸರಿಸಮಾನವಾದ ಧನಾಗಮನಕ್ಕೆ ಯಾವುದೇ ತೊಂದರೆಯಿಲ್ಲ.

ಪದಬಂಧ 5866

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಂಕಣದಲ್ಲಿರುವ ಸಂಖ್ಯೆ! (2)
6.ಮಂಜ ನಡುವಿದ್ದರೆ ಇದು ಸೂಕ್ತವಾದುದು! (4)
9.ಕುದುರೆ ಸವಾರನಿವನು (3)
10.ತಂದೆ ತಾಯಿ ಇರುವ ಊರು (4)
12.ಅಭಿಪ್ರಾಯದಲ್ಲಿ ಹರೆಯ ಕಾಣುತ್ತಿದೆಯಲ್ಲಾ? (2)
13.ಆಹಾರ ಸೇವಿಸುವಾಗ ಧರಿಸಿದ ಮಾಲೆ (2)
14.ಮಾನವುಳ್ಳ ಒತ್ತೆ !(4)
16.ಪ್ರಾತಃಕಾಲದಿಂದ ಸಂಜೆಯವರೆಗಿನ ಕಾಲ ಉಲ್ಟಾ ಕಾಣುತ್ತಿದೆ (3)
17.ಕೊಬ್ಬಿದ ಆನೆಯಿದು (4)
20.ಹೆಜ್ಜೆ ಹಾಕವಾಗ ಆಗಿರುವ ಸಂಕೋಚ (2)

ಮೇಲಿಂದ ಕೆಳಕ್ಕೆ
2.ಕನಸಲ್ಲಿ ಕಾಣಿಸಿದ ಕೊಳೆ (2)
3.ಗಂಡು ಕೋಳಿ ಇಲ್ಲಿದೆ (2)
4.ಕೊನೆಗೆ ಜಯವಿದ್ದರೂ ಇದು ಸೋಲು! (4)
5.ನಿರಂತರ ಎಂದು ಹೀಗೆನ್ನಿ (3)
7.ಜರೂರಾಗಿ ನೀಡಿದ ಅನುಮತಿ (3)
8.ಒಳ್ಳೆಯ ನಡತೆ (4)
11.ಮಾವನ ಕೋಮಲತೆ ಉಲ್ಟಾ ಆಗಿಬಿಟ್ಟಿದೆ (3)
12. ಯೋಗದಲ್ಲಿರುವಂತೆ ಪ್ರಾಣವಾಯುವನ್ನು ಒಂದು ಕ್ರಮದಲ್ಲಿ ಇರಿಸುವುದು (4)
13.ಅತಿ ಘೋರವಾದ ವಿಷ (4)
14.ಪ್ರೀತಿ ಪಾತ್ರನಾದವನು ಅಥವಾ ಮಗ ಎಂದರೂ ಸರಿ (3)
15.ನಗುವಿನಲ್ಲೇ ಸೊರಗು! (3)
18.ಆದರದಿಂದ ತಿಳಿಸಿರುವ ಬೆಲೆ! (2)
19.ಜಟಿಲತೆಯಿಂದ ಹಿಡಿದಿಟ್ಟ ನೀರು (2)



5865ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಟೋಪ 3.ಪಟಾಲಂ 5.ದಾವಣಿ 6.ಅವಸರ 8.ತಡಬಡ 10.ಅಂತರ್ದಾನ 12.ಜನ್ಯವರ್ಣ 13.ಕ್ಷತ್ರಿಯ 16.ಕ್ಷಣಿಕ 17.ಲಿಲಾವು

ಮೇಲಿಂದ ಕೆಳಕ್ಕೆ:
1.ಆಣೆ 2.ಪತ್ತೇದಾರ 3.ಪರಿಣಿತ 4.ಲಂಚ 7.ವಸಂತ 9.ಬಡವ 11.ನಕ್ಷತ್ರಕ 12.ಜಯಶಾಲಿ 14.ರೂಕ್ಷ 15.ಕಾವು

ಸುಡೊಕು 6251

	3		6		2		4	
6		2				8		3
	4	7	3		9		1	
4		8			5		2	
				1		4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6250 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಷೇರುಪೇಟೆ ವಹಿವಾಟು


241



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,532
ಇಂದಿನ ಅಂತ್ಯ	23,453
▼	78
ದಿನದ ಕನಿಷ್ಠ	23,350

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹415-588

ದ್ವಿತಳಿ (ಬಿ.ವಿ) ₹233-750

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹178

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ ₹168

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520 (1540)
ಸೋಯಾ (ರಿಫೈನ್ಡ್)	₹1365 (1355)
ಸೂರ್ಯಕಾಂತಿ (ರಿಫೈನ್ಡ್)	₹1400 (1405)
ಪಾಮೋಲಿನ್	₹1375 (1385)

ಆರ್ಥಿಕ ಸಮಾವೇಶದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆ

‘ಬ್ಯಾಂಕ್‌ನ ಬಡ್ಡಿದರ ಜನರ ಕೈಗೆಟುಕಲಿ’



ಮುಂಬೈ/ನವದೆಹಲಿ (ಪಿಟಿಐ): ಪ್ರಸ್ತುತ ಬಡ್ಡಿದರಗಳು ಜನರಿಗೆ ‘ತೀರಾ ಕಷ್ಟಕರ’ ಎನಿಸಿವೆ. ಹೀಗಾಗಿ ಬಡ್ಡಿದರಗಳನ್ನು ಬ್ಯಾಂಕ್‌ಗಳು ಜನರ ಕೈಗೆಟುಕುವಂತೆ ಮಾಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಆಯೋಜಿಸಿದ್ದ ವಾರ್ಷಿಕ ವಹಿವಾಟು ಮತ್ತು ಆರ್ಥಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಉದ್ಯಮಗಳು ಹೆಚ್ಚಾಗಬೇಕು. ಹೊಸ ವ್ಯವಸ್ಥೆಯಡಿ ಹೂಡಿಕೆ ಅಗತ್ಯವಿದೆ. ಸಾಲದ ಬಡ್ಡಿದರಗಳನ್ನು ಕಡಿಮೆ ಮಾಡುವುದರಿಂದ ‘ವಿಕಸಿತ ಭಾರತ’ ಆಶಯವನ್ನು ಸಾಧಿಸಬಹುದು ಎಂದು ಹೇಳಿದರು.

‘ಉದ್ಯಮಗಳು ಹೆಚ್ಚಾಗಲು ಹಾಗೂ ಅವುಗಳ ಸಾಮರ್ಥ್ಯ ಹೆಚ್ಚಿಸಲು ಬ್ಯಾಂಕ್‌ಗಳ ಬಡ್ಡಿ ದರಗಳು ಇನ್ನಷ್ಟು ಕೈಗೆಟುಕುವಂತಾಗ ಬೇಕು’ ಎಂದರು.

ಕಳೆದ ವಾರ ಕೇಂದ್ರದ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಆರ್ಥಿಕ ಪ್ರಗತಿ ವೃದ್ಧಿಗೊಳಿಸಲು ಬಡ್ಡಿ ದರಗಳನ್ನು ಕಡಿಮೆ ಮಾಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಅನ್ನು ಒತ್ತಾಯಿಸಿದ್ದರು. ಹಣಕಾಸು ನೀತಿ ನಿರ್ಧರಿಸುವಾಗ ಆಹಾರ ದರ ಗಮನಿಸುವಂತೆ ಸಲಹೆ ನೀಡಿದ್ದರು.

ಹೆಚ್ಚಿನ ವಾಣಿಜ್ಯ ಬ್ಯಾಂಕುಗಳು ನೇರವಾಗಿ ಅಥವಾ ಪರೋಕ್ಷವಾಗಿ ಆರ್‌ಬಿಐ ಬಡ್ಡಿದರಗಳಿಗೆ ಸಂಬಂಧಿಸಿವೆ. ಹೆಚ್ಚಿನ ಸಾಲಗಳಿಗೆ ರೆಪೊ ದರ ಬಾಹ್ಯ ಮಾನದಂಡವಾಗಿದೆ. ಹಣದುಬ್ಬರವು ಆರ್‌ಬಿಐನ ತಾಳಿಕೆಯ ಮಟ್ಟ ಶೇ 6ರಷ್ಟನ್ನು ಮೀರಿದೆ. ಇದು ಅಕ್ಟೋಬರ್‌ನಲ್ಲಿ ಶೇ 6.2 ಮೀರಿತ್ತು.

ಖಾದ್ಯ ತೈಲಗಳು ಮತ್ತು ಕಾಳುಗಳನ್ನು ಪೂರೈಸಲು ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಆಹಾರ ಧಾನ್ಯ ಪೂರೈಕೆಗೆ ಸಂಬಂಧಿಸಿದಂತೆ ಭಾರತವು ‘ಆಗಿಂದಾಗ್ಗೆ’ ತೊಂದರೆ ಅನುಭವಿಸಿದೆ. ಅನಿರೀಕ್ಷಿತ ಏರುಪೇರು ಕಡಿಮೆ ಮಾಡಲು ಸರ್ಕಾರವು ಸಂಗ್ರಹಣಾ ವ್ಯವಸ್ಥೆಗಳನ್ನು ಸುಧಾರಿಸುವತ್ತ ಗಮನಹರಿಸಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಪ್ರಗತಿಯ ವೇಗ ಕಡಿಮೆ ಯಾಗುತ್ತಿರುವ ಕಳವಳಕಾರಿ ವಿಷಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸರ್ಕಾರಕ್ಕೆ ದೇಸಿ ಹಾಗೂ ಜಾಗತಿಕ ಸವಾಲುಗಳ ಬಗ್ಗೆ ಎಚ್ಚರವಿದೆ. ಈ ಬಗ್ಗೆ ಆತಂಕ ಬೇಡ. ಸರ್ಕಾರದ ವಿತ್ತೀಯ ಸಂಯೋಜನೆಯು ಆರ್ಥಿಕ ಚಟುವಟಿಕೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂಬುದನ್ನು ನಾನು ನಿರಾಕರಿಸುವೆ. ಪ್ರಗತಿಯೇ ಸರ್ಕಾರದ ಆದ್ಯತೆ’ ಎಂದು ಹೇಳಿದರು.

ಬ್ಯಾಂಕುಗಳು ತಮ್ಮ ಮುಖ್ಯ ಕೆಲಸವಾದ ಸಾಲ ವಿತರಣೆಯ ಬಗ್ಗೆ ಗಮನಹರಿಸಬೇಕು. ಜನರ ನಂಬಿಕೆ ಗಳಿಸಲು ಬ್ಯಾಂಕುಗಳು ಪಾರದರ್ಶಕತೆ, ನೈತಿಕತೆ ಮತ್ತು ಸ್ಪಷ್ಟ ಸಂವಹನಗಳಿಗೆ ಆದ್ಯತೆ ನೀಡಬೇಕು. ಉದ್ಯಮ ಸಾಲಗಳು ಹೆಚ್ಚು ಮುಖ್ಯ. ಎಂಎಸ್‌ಎಂಇ ಸಾಲ ನೀಡಿಕೆ ಗುರಿಯನ್ನು 2026ರ ಹಣಕಾಸು ವರ್ಷಕ್ಕೆ ₹6.12 ಲಕ್ಷ ಕೋಟಿ, 2027ಕ್ಕೆ ₹7 ಲಕ್ಷ ಕೋಟಿ ಹೊಂದುವಂತೆ ಸಲಹೆ ನೀಡಿದ ಅವರು, 2025ಕ್ಕೆ ₹5.75 ಲಕ್ಷ ಕೋಟಿ ಸಾಲ ನೀಡುವಂತೆ ತಿಳಿಸಿದರು.

ಖಾತೆ ತೆರೆಯುವ ಗುರಿಯನ್ನು ಸಾಧಿಸಿದ ನಂತರ ಉಳಿತಾಯವನ್ನು ಬಂಡವಾಳ ಹೂಡಿಕೆಯಾಗಿ ಪರಿವರ್ತಿಸುವುದು, ವಿಮಾ ರಕ್ಷಣೆ ನೀಡುವುದು ಮತ್ತು ಸಂಪತ್ತು ನಿರ್ವಹಣೆ ಪರಿಹಾರಗಳನ್ನು ನೀಡುವುದು ಬ್ಯಾಂಕಿಂಗ್ ವ್ಯವಸ್ಥೆಯ ಗುರಿಯಾಗಬೇಕು. ಹವಾಮಾನ ಬದಲಾವಣೆಯ ಮಾತುಕತೆಗಳಿಂದ ಕೆಲವು ರಾಷ್ಟ್ರಗಳು ಹಿಂದೆ ಸರಿಯುತ್ತಿರುವ ಬಗ್ಗೆ ಸೀತಾರಾಮನ್ ಅಸಮಾಧಾನ ವ್ಯಕ್ತಪಡಿಸಿದರು.

‘500 ಹೊಸ ಎಸ್‌ಬಿಐ ಶಾಖೆ’

2024–25ರ ಹಣಕಾಸು ವರ್ಷದ ಅಂತ್ಯದ ವೇಳೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಹೊಸದಾಗಿ 500 ಶಾಖೆಗಳನ್ನು ಪ್ರಾರಂಭಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

1921ರಲ್ಲಿ ಬ್ಯಾಂಕ್ 250 ಶಾಖೆಗಳನ್ನು ಹೊಂದಿತ್ತು. ಅದು ಈಗ 22,500ಕ್ಕೆ ಏರಿಕೆಯಾಗಿದೆ. ಹೊಸ ಶಾಖೆಗಳ ಸೇರ್ಪಡೆಯೊಂದಿಗೆ ಶಾಖೆಗಳ ಸಂಖ್ಯೆ 23 ಸಾವಿರಕ್ಕೆ ತಲುಪಲಿದೆ ಎಂದು ಮುಂಬೈನ ಎನ್‌ಸಿಪಿಎಯ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ ಹಾರ್ನಿಮನ್ ಶಾಖೆ) ಮುಖ್ಯಶಾಖೆಯ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಎಸ್‌ಬಿಐನ ಈ ಬೆಳವಣಿಗೆಯು ‘ಜಾಗತಿಕ ದಾಖಲೆ’. ದೇಶದಲ್ಲಿನ ಒಟ್ಟು ಠೇವಣಿ ಪ್ರಮಾಣದಲ್ಲಿ ಶೇ 22ರಷ್ಟು ಎಸ್‌ಬಿಐ ಹೊಂದಿದ್ದು, 50 ಕೋಟಿಗೂ ಹೆಚ್ಚು ಗ್ರಾಹಕರಿಗೆ ಸೇವೆ ನೀಡಲಾಗುತ್ತಿದೆ. ಬ್ಯಾಂಕ್ ಪ್ರತಿ ದಿನ 20 ಕೋಟಿ ಯುಪಿಐ ವಹಿವಾಟು ನಿಭಾಯಿಸುತ್ತಿದೆ ಎಂದು ಹೇಳಿದರು.

ಶತಮಾನೋತ್ಸವದ ಪ್ರಯುಕ್ತ ₹100 ಮುಖಬೆಲೆಯ ನಾಣ್ಯಗಳನ್ನು ಸಚಿವರು ಇದೇ ವೇಳೆ ಬಿಡುಗಡೆ ಮಾಡಿದರು. ದೇಶದಲ್ಲಿ ಶತಮಾನ ಪೂರೈಸಿದ 43 ಎಸ್‌ಬಿಐ ಶಾಖೆಗಳಿವೆ. 1981 ಮತ್ತು 1996ರ ನಡುವಿನ ಬ್ಯಾಂಕಿನ ಇತಿಹಾಸವನ್ನು ದಾಖಲಿಸುವ ಸಂಪುಟವನ್ನು ಸಹ ಬಿಡುಗಡೆ ಮಾಡಿದರು.

‘ಕಾನೂನು ಉಲ್ಲಂಘನೆ ತಡೆಗಟ್ಟಲು ಕ್ರಮ ಕೈಗೊಳ್ಳಿ’

ಮುಂಬೈ (ಪಿಟಿಐ): ಸರಿಯಾಗಿ ಕೆವೈಸಿ ಪರಿಶೀಲನೆ ಮಾಡದೆ ಖಾತೆಗಳನ್ನು ತೆರೆಯುವುದು ಸೇರಿದಂತೆ ಕಾನೂನು ಉಲ್ಲಂಘನೆ ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಬ್ಯಾಂಕ್‌ಗಳಿಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಸೂಚಿಸಿದ್ದಾರೆ.



ಶಕ್ತಿಕಾಂತ ದಾಸ್

ಇಂತಹ ಉಲ್ಲಂಘನೆಗಳು ಅಲ್ಪಾವಧಿಯಲ್ಲಿ ಗಳಿಕೆ ತರಬಹುದು. ಆದರೆ, ದೀರ್ಘಾವಧಿಯಲ್ಲಿ ಬ್ಯಾಂಕ್‌ಗಳ ಗೌರವಕ್ಕೆ ಧಕ್ಕೆ, ಹಣಕಾಸು ದಂಡಕ್ಕೆ ದಾರಿ ಮಾಡಿಕೊಡುವುದಲ್ಲದೆ ಹೆಚ್ಚು ಅಪಾಯ ಸೃಷ್ಟಿಸಲಿವೆ. ಅದಕ್ಕಾಗಿ ಚೌಕಟ್ಟನ್ನು ಸದೃಢಗೊಳಿಸಬೇಕು ಎಂದು ಖಾಸಗಿ ವಲಯದ ಬ್ಯಾಂಕ್‌ಗಳ ನಿರ್ದೇಶಕರ ಸಮ್ಮೇಳನದಲ್ಲಿ ದಾಸ್ ಹೇಳಿದ್ದಾರೆ. ದೇಶದ ಬ್ಯಾಂಕಿಂಗ್ ವಲಯವು ಸದೃಢ ಮತ್ತು ಸ್ಥಿರವಾಗಿದೆ. ಬ್ಯಾಂಕ್‌ನ ಮಂಡಳಿಗಳು ಆಂತರಿಕ ಆಡಳಿತದ ಚೌಕಟ್ಟನ್ನು ಬಲಪಡಿಸಬೇಕು ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

18-11-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1550)
ಒಂದು ವಾರದ ಡೆಲಿವರಿ	1525 (1545)
ಪಾಮ್ ವಾರದ ಡೆಲಿವರಿ	1373 (1383)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1355)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹**74,700** (73,750)

ಬೆಳ್ಳಿ ಕೆ.ಜಿ ₹**89,450** (88,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಡಿ. 21ಕ್ಕೆ ಜೈಸಲ್ಮೇರ್‌ನಲ್ಲಿ ಜಿಎಸ್‌ಟಿ ಮಂಡಳಿ ಸಭೆ



ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 21ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 55ನೇ ಸಭೆ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ನಡೆಯಲಿದೆ ಎಂದು ಮಂಡಳಿ ಸೋಮವಾರ ‘ಎಕ್ಸ್’ ನಲ್ಲಿ ತಿಳಿಸಿದೆ.

ಆರೋಗ್ಯ ಮತ್ತು ಜೀವ ವಿಮೆ ಕಂತುಗಳ ಮೇಲೆ ವಿಧಿಸುವ ಶೇ 18ರಷ್ಟು ಜಿಎಸ್‌ಟಿಗೆ ವಿನಾಯಿತಿ ನೀಡುವ ಅಥವಾ ಕಡಿಮೆ ಮಾಡುವ ಬಗ್ಗೆ ಸಮಿತಿ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ. ಜೊತೆಗೆ ಜಿಎಸ್‌ಟಿ ದರ ಸರಳೀಕರಣ, ಕೆಲವು ಪದಾರ್ಥಗಳ ಮೇಲಿನ ಜಿಎಸ್‌ಟಿಯನ್ನು ಶೇ 12ರಿಂದ ಶೇ 5ಕ್ಕೆ ತಗ್ಗಿಸುವ ಬಗ್ಗೆ ಸಮಿತಿಯು ಚರ್ಚಿಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಕಾಳುಮೆಣಸು ಜಿಎಸ್‌ಟಿಗೆ ಬೇಡ

ಕರ್ನಾಟಕ ಬೆಳೆಗಾರರ ಸಂಘದಿಂದ ಸರ್ಕಾರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ



ಮಡಿಕೇರಿ: ‘ಕಾಳುಮೆಣಸನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬಾರದು’ ಎಂದು ಕರ್ನಾಟಕ ಬೆಳೆಗಾರರ ಸಂಘವು ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ನಗರದ ಹೊರವಲಯದಲ್ಲಿ ಸೋಮವಾರ ನಡೆದ ಸಂಘದ 66ನೇ ವಾರ್ಷಿಕ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಸಂಘದ ಅಧ್ಯಕ್ಷ ಕೆ.ಜಿ.ರಾಜೀವ್, ‘ಹವಾಮಾನ ಬದಲಾವಣೆಯಿಂದ ಕಾಳುಮೆಣಸು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ’ ಎಂದರು.

‘ಉತ್ಪಾದನಾ ವೆಚ್ಚ ಹೆಚ್ಚಳ, ಅತೀವ ಸ್ಪರ್ಧಾತ್ಮಕತೆ, ಕಾರ್ಮಿಕರ ಕೊರತೆ, ರೋಗಬಾಧೆ, ಕೀಟಗಳ ಕಾಟ, ಮಾನವ–ವನ್ಯಜೀವಿ ಸಂಘರ್ಷ ಸೇರಿದಂತೆ ಬೆಳೆಗಾರರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೂಡಲೇ ನೆರವಿಗೆ ಬರಬೇಕು’ ಎಂದು ಆಗ್ರಹಿಸಿದರು.

‘ಕಾಫಿಯನ್ನು ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆ ವ್ಯಾಪ್ತಿಗೆ ತರಬೇಕು, ಹೊಸ ರಫ್ತು ಮಾರುಕಟ್ಟೆಗಳ ಹುಡುಕಾಟ ನಡೆಸಬೇಕು, ಕಾರ್ಮಿಕರ ಕೊರತೆ ನಿವಾರಿಸಲು ಹೊಸ ಸಂಶೋಧನೆಗಳನ್ನು ಉತ್ತೇಜಿಸಬೇಕು, ಕೀಟ, ರೋಗ, ಬರ ನಿರೋಧಕ ಹಾಗೂ ಅಧಿಕ ಇಳುವರಿ ನೀಡುವ ಕಾಫಿ ತಳಿಗಳ ಅಭಿವೃದ್ಧಿಗೂ ಆದ್ಯತೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಅರಣ್ಯದ ಸುತ್ತ ರೈಲ್ವೆ ಬ್ಯಾರಿಕೇಡ್ ಹಾಕಲು ಹೆಚ್ಚಿನ ಹಣ ಮೀಸಲಿರಿಸಬೇಕು, ಕಾಡಾನೆಗಳನ್ನು ಸ್ಥಳಾಂತರಿಸಬೇಕು, ವನ್ಯಜೀವಿಗಳಿಂದಾಗುವ ಬೆಳೆ ಹಾಗೂ ಪ್ರಾಣಹಾನಿಗೆ ಹೆಚ್ಚಿನ ಪರಿಹಾರ ನೀಡಬೇಕು. ‘ಸರ್ಫೇಸಿ’ ಕಾಯ್ದೆಯಿಂದ ಬೆಳೆಗಾರರನ್ನು ಹೊರಗಿಡಬೇಕು’ ಎಂದು ಕೋರಿದರು.

‘ದೇಶದಲ್ಲಿ ಶೇ 60ರಷ್ಟು ಕಾಫಿ ಹಾಗೂ ಶೇ 36ರಷ್ಟು ಏಲಕ್ಕಿ ಕರ್ನಾಟಕದಿಂದಲೇ ಉತ್ಪಾದನೆಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯದಿಂದ ಕಾಳುಮೆಣಸಿನ ಉತ್ಪಾದನೆ ಇಳಿಕೆಯಾಗುತ್ತಿದೆ’ ಎಂದರು.

ಕೆ.ಜಿ ಬೆಳ್ಳುಳ್ಳಿ ದರ ₹420

ಪ್ರಜಾವಾಣಿ ವಾರ್ತೆ

ಮಂಗಳೂರು: ತಿಂಗಳಿನಿಂದ ಏರುಮುಖಿಯಾಗಿರುವ ಬೆಳ್ಳುಳ್ಳಿ ದರ ಮಾರುಕಟ್ಟೆಯಲ್ಲಿ ಕೆ.ಜಿ.ಯೊಂದಕ್ಕೆ ₹420ಕ್ಕೆ ತಲುಪಿದೆ. ವಾರದ ಹಿಂದೆ ಗುಣಮಟ್ಟದ ಬೆಳ್ಳುಳ್ಳಿಗೆ ಕೆ.ಜಿ.ಗೆ ₹380 ದರವಿತ್ತು.

ಮೂರು ಮಾದರಿಯ ಬೆಳ್ಳುಳ್ಳಿ ಮಾರುಕಟ್ಟೆಯಲ್ಲಿವೆ. ತೀರಾ ಚಿಕ್ಕ ಗಾತ್ರದ ಸಣ್ಣ ಎಸಳಿನ ಬೆಳ್ಳುಳ್ಳಿಗೆ ಈಗ ಕೆ.ಜಿ.ಗೆ ₹310 ದರ ಇದ್ದು, ಗುಣಮಟ್ಟದ ಬೆಳ್ಳುಳ್ಳಿ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹420ಕ್ಕೆ ಮಾರಾಟವಾಗುತ್ತಿದೆ. ಇನ್ನೂ ದರ ಏರಿಕೆಯಾಗಬಹುದು ಎನ್ನುತ್ತಾರೆ ಕದ್ರಿಯ ವ್ಯಾಪಾರಿ ಅಭಿಲಾಷ್.

ಬಿಸಿಲಿನ ತಾಪ ಹೆಚ್ಚುತ್ತಿದ್ದಂತೆ ಲಿಂಬೆ ಹಣ್ಣು ಕೂಡ ದುಬಾರಿಯಾಗಿದೆ. ಲಿಂಬೆ ಕೆ.ಜಿ.ಯೊಂದಕ್ಕೆ ₹130ರಿಂದ ₹150ಕ್ಕೆ ಮಾರಾಟವಾಗುತ್ತಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 241 ಅಂಶ ಇಳಿಕೆ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು ಮತ್ತು ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 241 ಅಂಶ ಇಳಿಕೆಯಾಗಿ, 77,339ಕ್ಕೆ ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 78 ಅಂಶ ಕಡಿಮೆಯಾಗಿ 23,453ಕ್ಕೆ ಸ್ಥಿರಗೊಂಡಿದೆ.



ಟಿಸಿಎಸ್, ಇನ್ಫೊಸಿಸ್, ಎನ್‌ಟಿಪಿಸಿ, ಎಚ್‌ಸಿಎಲ್ ಟೆಕ್ನಾಲಜೀಸ್, ಎಕ್ಸಿಸ್ ಬ್ಯಾಂಕ್, ಟೆಕ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಸನ್‌ಫಾರ್ಮಾ, ಇಂಡಸ್‌ಇಂಡ್ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟಾಟಾ ಸ್ಟೀಲ್, ಹಿಂದುಸ್ತಾನ್ ಯೂನಿಲಿವರ್, ಮಹೀಂದ್ರ ಆ್ಯಂಡ್ ಮಹೀಂದ್ರ, ನೆಸ್ಲೆ, ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹1,849 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿದ್ದರೆ, ಟೋಕಿಯೊ ಮತ್ತು ಶಾಂಘೈ ನಕಾರಾತ್ಮಕ ವಹಿವಾಟು ನಡೆಸಿವೆ. ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರ ಪ್ರತಿ ಬ್ಯಾರಲ್‌ಗೆ ಶೇ 0.49ರಷ್ಟು ಏರಿಕೆಯಾಗಿ, 71.39 ಡಾಲರ್ (₹6,026) ಆಗಿದೆ.

ನಿರುದ್ಯೋಗ ದರ ಇಳಿಕೆ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ನಗರ ಪ್ರದೇಶದಲ್ಲಿ 15 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯೋಮಾನದವರ ನಿರುದ್ಯೋಗದ ಪ್ರಮಾಣವು ಶೇ 6.4ಕ್ಕೆ ಇಳಿದಿದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (ಎನ್‌ಎಸ್‌ಎಸ್‌ಒ) ವರದಿ ಸೋಮವಾರ ತಿಳಿಸಿದೆ.

2023–24ರ ಇದೇ ತ್ರೈಮಾಸಿಕದಲ್ಲಿ ನಿರುದ್ಯೋಗ ದರವು ಶೇ 6.6ರಷ್ಟಿತ್ತು ಎಂದು ತಿಳಿಸಿದೆ.

ನಗರ ಪ್ರದೇಶದಲ್ಲಿ ಮಹಿಳೆಯರ ನಿರುದ್ಯೋಗ ಪ್ರಮಾಣವು ಶೇ 8.4ರಷ್ಟಿದೆ. ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 8.6ರಷ್ಟಿತ್ತು. ಪುರುಷರ ನಿರುದ್ಯೋಗದ ಪ್ರಮಾಣವು ಶೇ 5.7ರಷ್ಟಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 5.8ರಷ್ಟಿತ್ತು ಎಂದು ವರದಿ ತಿಳಿಸಿದೆ. ದೇಶದಲ್ಲಿನ ದುಡಿಯುವ ವರ್ಗದಲ್ಲಿರುವ ನಿರುದ್ಯೋಗಿಗಳ ಶೇಕಡಾವಾರು ಲೆಕ್ಕಾಚಾರ ಆಧರಿಸಿ ಈ ಸಮೀಕ್ಷೆ ನಡೆಸಲಾಗುತ್ತದೆ.

ಬೆಳ್ಳಿ ದರ ಕೆ.ಜಿಗೆ ₹1,810 ಏರಿಕೆ

ನವದೆಹಲಿ (ಪಿಟಿಐ): ಮದುವೆಯ ಋತು ಅಂಗವಾಗಿ ಆಭರಣ ತಯಾರಕರು ಮತ್ತು ಖರೀದಿದಾರರಿಂದ ಹೆಚ್ಚಿದ ಬೇಡಿಕೆಯಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸೋಮವಾರದ ವಹಿವಾಟಿನಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹400 ಏರಿಕೆಯಾಗಿದ್ದು, ₹77,450 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು 10 ಗ್ರಾಂಗೆ ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹77,050 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1,810 ಏರಿಕೆಯಾಗಿದ್ದು, ₹92 ಸಾವಿರದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರತಿಕೂಲ ಹವಾಮಾನ: ವಿಮಾನ ಸಂಚಾರಕ್ಕೆ ತೊಂದರೆ

ನವದೆಹಲಿ (ಪಿಟಿಐ): ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದಾಗಿ ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ವಿಮಾನಗಳ ಹಾರಾಟಕ್ಕೆ ತೊಂದರೆಯಾಯಿತು.

13 ವಿಮಾನಗಳು ಜೈಪುರಕ್ಕೆ, ಒಂದು ವಿಮಾನ ಡೆಹ್ರಾಡೂನ್‌ಗೆ ಮತ್ತೊಂದು ಲಖನೌಗೆ ಮಾರ್ಗ ಬದಲಾಯಿಸಿದೆ. ಕಡಿಮೆ ಗೋಚರತೆಯಿಂದಾಗಿ ನೂರಕ್ಕೂ ಹೆಚ್ಚು ವಿಮಾನಗಳ ಹಾರಾಟ ವಿಳಂಬವಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಲ್ಲಿ ವಾಯುಮಾಲಿನ್ಯ ಹೆಚ್ಚಳವಾಗಿದೆ. ಇದರಿಂದ ಗೋಚರತೆ ಅಸ್ಪಷ್ಟವಾಗಿದ್ದು, ವಿಮಾನಗಳ ಹಾರಾಟದಲ್ಲಿ ಅಸ್ತವ್ಯಸ್ತ ಉಂಟಾಗಿದೆ. ಪ್ರಯಾಣಿಕರು ವಿಮಾನಯಾನ ಸಂಸ್ಥೆಗಳನ್ನು ಸಂಪರ್ಕಿಸಿ ವಿಮಾನ ಹಾರಾಟದ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿನ ವಿಮಾನ ನಿಲ್ದಾಣದಿಂದ ಪ್ರತಿನಿತ್ಯ ಅಂದಾಜು 1,400 ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ.

ಒಂದೇ ದಿನ 5.05 ಲಕ್ಷ ಪ್ರಯಾಣಿಕರ ಸಂಚಾರ: ಹಬ್ಬ ಮತ್ತು ಮದುವೆ ಋತುವಿನಿಂದಾಗಿ ನವೆಂಬರ್ 17ರಂದು ಒಂದೇ ದಿನ 5.05 ಲಕ್ಷ ಪ್ರಯಾಣಿಕರು ದೇಶೀಯ ಮಾರ್ಗದಲ್ಲಿ ಪ್ರಯಾಣ ಮಾಡಿದ್ದಾರೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ಒಂದೇ ದಿನದಲ್ಲಿ 5 ಲಕ್ಷಕ್ಕೂ ಹೆಚ್ಚು ಜನರು ವಿಮಾನದಲ್ಲಿ ಪ್ರಯಾಣಿಸಿದ್ದು ಇದೇ ಮೊದಲು. ಒಟ್ಟು 3,173 ವಿಮಾನಗಳು ಹಾರಾಟ ನಡೆಸಿವೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ: ಹೊಸ ಸಚಿವ ಸಂಪುಟ ರಚನೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಅನುರಾ ಡಿಸ್ಸಾನಾಯಕೆ ಅವರು ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಸರ್ಕಾರದ ಸಂಪುಟಕ್ಕೆ 21 ಸಚಿವರನ್ನು ಸೋಮವಾರ ಆಯ್ಕೆ ಮಾಡಿದ್ದಾರೆ.

ಹಣಕಾಸು ಮತ್ತು ರಕ್ಷಣಾ ಖಾತೆಗಳನ್ನು ಡಿಸ್ಸಾನಾಯಕೆ ಅವರೇ ಉಳಿಸಿಕೊಂಡಿದ್ದು, 12 ಹೊಸ ಸದಸ್ಯರಿಗೆ ಸಂಪುಟದಲ್ಲಿ ಪ್ರಮುಖ ಸ್ಥಾನಗಳನ್ನು ನೀಡಿದ್ದಾರೆ. ಅಲ್ಲದೇ, 2000ದಿಂದ ಸೇವೆ ಸಲ್ಲಿಸುತ್ತಿರುವ ಎಂಟು ಅನುಭವಿ ಸದಸ್ಯರಿಗೆ ಮಹತ್ವದ ಜವಾಬ್ದಾರಿಯನ್ನು ವಹಿಸಿದ್ದಾರೆ.

ಡಿಸ್ಸಾನಾಯಕೆ ಸಂಪುಟದಲ್ಲಿ ಇಬ್ಬರು ಮಹಿಳಾ ಸದಸ್ಯರಿದ್ದಾರೆ. ಪ್ರಧಾನಿ ಹರಿಣಿ ಅಮರಸೂರ್ಯ ಅವರು ಶಿಕ್ಷಣ ಖಾತೆ ನಿರ್ವಹಿಸುತ್ತಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗೆ ಸರೋಜಾ ಸಾವಿತ್ರಿ ಪಾಲ್‌ರಾಜ್ ಅವರನ್ನು ನೇಮಿಸಲಾಗಿದೆ.

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ: 11 ಮಂದಿ ಸಾವು

ಕೀವ್ (ಎಪಿ): ರಷ್ಯಾ ಪಡೆಗಳು ಉಕ್ರೇನ್‌ನ ಉತ್ತರ ಭಾಗದಲ್ಲಿರುವ ಸುಮಿ ನಗರದ ಜನವಸತಿ ಪ್ರದೇಶದ ಮೇಲೆ ಭಾನುವಾರ ತಡರಾತ್ರಿ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ. ದಾಳಿಯಲ್ಲಿ ಇಬ್ಬರು ಮಕ್ಕಳು ಸೇರಿ 11 ಮಂದಿ ಮೃತಪಟ್ಟಿದ್ದು, 84 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಸುಮಿ ನಗರದ ಮೇಲೆ ನಡೆದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟವರಲ್ಲಿ 9 ವರ್ಷದ ಬಾಲಕ, 14 ವರ್ಷದ ಬಾಲಕಿಯೂ ಸೇರಿದ್ದಾರೆ. ಈ ವೇಳೆ ಗಾಯಗೊಂಡ 6 ಮಕ್ಕಳ ಸ್ಥಿತಿ ಗಂಭೀರವಾಗಿದೆ. ದಾಳಿಯಿಂದಾಗಿ ಎರಡು ಶಾಲೆಗಳು ಸೇರಿ 15 ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಪ್ರಾದೇಶಿಕ ಪ್ರಾಸಿಕ್ಯೂಟರ್ ಕಚೇರಿ ತಿಳಿಸಿದೆ.

ವಲಸೆ ನೀತಿ; ಸರ್ಕಾರಿಂದ ತಪ್ಪಾಗಿದೆ ಎಂದ ಕೆನಡಾ ಪ್ರಧಾನಿ

ಒಟ್ಟಾವ (ಪಿಟಿಐ): ‘ವಲಸೆ ನೀತಿ ವಿಚಾರದಲ್ಲಿ ಸರ್ಕಾರದಿಂದ ತಪ್ಪು ನಡೆದಿದೆ’ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

ಕೆಲವೊಂದು ನಕಲಿ ಕಾಲೇಜುಗಳು, ಬೃಹತ್ ಉದ್ಯಮ ಸಂಸ್ಥೆಗಳು ತಮ್ಮ ಸ್ವಹಿತಾಸಕ್ತಿಗಾಗಿ ವಲಸೆ ನೀತಿ ವ್ಯವಸ್ಥೆಯನ್ನೇ ದುರುಪಯೋಗಪಡಿಸಿಕೊಂಡವು ಎಂದು ತಿಳಿಸಿದ್ದಾರೆ.

‘ಕಳೆದ ಎರಡು ವರ್ಷಗಳಲ್ಲಿ ಕೆನಡಾದಲ್ಲಿ ಜನಸಂಖ್ಯೆಯೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರ ಮಧ್ಯೆಯೇ ನಕಲಿ ಕಾಲೇಜುಗಳು, ಉದ್ಯಮ ಸಂಸ್ಥೆಗಳು ವಲಸೆ ನೀತಿಯನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡವು’ ಎಂದು ತನ್ನ ಯೂಟ್ಯೂಬ್ ಚಾನಲ್‌ನಲ್ಲಿ ಈ ವಿಷಯ ತಿಳಿಸಿದ್ದಾರೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಭಾರತ ಕರೆ

‘ತಂತ್ರಜ್ಞಾನ ಹಂಚಿಕೊಳ್ಳುವಿಕೆ–ಅಡ್ಡಿ ನಿವಾರಿಸಿ’

ಬಾಕು (ಅಜರ್‌ಬೈಜಾನ್) (ಪಿಟಿಐ): ತಂತ್ರಜ್ಞಾನ ಹಂಚಿಕೊಳ್ಳುವಿಕೆಗೆ ಇರುವ ಅಡ್ಡಿಗಳನ್ನು ನಿವಾರಿಸುವಂತೆ ಹಾಗೂ ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡುವಂತೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಭಾರತ ಕರೆ ನೀಡಿದೆ. ಅಲ್ಲದೆ, ಹವಾಮಾನ ಬದಲಾವಣೆ ತಗ್ಗಿಸುವ ನೆಪದಲ್ಲಿ ನ್ಯಾಯವಲ್ಲದ ವ್ಯಾಪಾರ ಕ್ರಮಗಳನ್ನು ಜರುಗಿಸಬಾರದು ಎಂದೂ ಹೇಳಿದೆ.



ಲೀನಾ ನಂದನ್

ಇಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ತಡೆ ಸಮಾವೇಶದ (ಸಿಒಪಿ29) ‘2030ರ ಪೂರ್ವದ ಮಹಾತ್ವಾಕಾಂಕ್ಷೆ’ ಹೆಸರಿನ ಸಭೆಯಲ್ಲಿ ಭಾರತ ಈ ಮನವಿ ಮಾಡಿದೆ.

ಹವಾಮಾನ ಬದಲಾವಣೆ ತಡೆಗೆ ಅಭಿವೃದ್ಧಿಶೀಲ ರಾಷ್ಟ್ರಗಳು ಶುದ್ಧ ಇಂಧನ ಹಾಗೂ ಇಂಗಾಲ ಹೊರಸೂಸುವಿಕೆ ತಗ್ಗಿಸುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಆದರೆ, ಈ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲು ‘ಬೌದ್ಧಿಕ ಆಸ್ತಿ ಹಕ್ಕು’ ಅಡ್ಡಿಯಾಗುತ್ತಿದೆ. ಹೀಗಾಗಿ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಈ ನವೀಕೃತ ತಂತ್ರಜ್ಞಾನಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳೊಡನೆ ಮುಕ್ತವಾಗಿ ಹಂಚಿಕೊಳ್ಳಬೇಕು ಎಂದು ಭಾರತದ ಪರಿಸರ ಕಾರ್ಯದರ್ಶಿ ಲೀನಾ ನಂದನ್ ಪ್ರತಿಪಾದಿಸಿದ್ದಾರೆ.

2030ರ ವೇಳೆಗೆ ‘ಶೂನ್ಯ ಇಂಗಾಲ ಹೊರಸೂಸುವ ರಾಷ್ಟ್ರ’ಗಳಾಗಲು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮುಂದೆ ಬರಬೇಕು. ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡುವುದು ಹಾಗೂ ಈ ಸಂಬಂಧಿತ ಯೋಜನೆಗಳಿಗೆ ಬಂಡವಾಳ ಹೂಡಲು ಮುಂದಾಗಬೇಕು ಎಂದೂ ಲೀನಾ ಅವರು ಒತ್ತಾಯಿಸಿದ್ದಾರೆ.

‘ತ್ವರಿತ ರಾಜಕೀಯ ನಿರ್ಧಾರ ಪ್ರಕಟಿಸಿ’

ಬಾಕು (ಪಿಟಿಐ): ‘ಜಾಗತಿಕ ಹವಾಮಾನ ಪರಿಣಾಮಕ್ಕೆ ಸಂಬಂಧಿಸಿದ ವಿವಾದಾತ್ಮಕ ಸಮಸ್ಯೆಗಳ ಕುರಿತು ಕ್ರಮ ಕೈಗೊಳ್ಳಲು ರಾಜಕೀಯ ನಿರ್ಧಾರವನ್ನು ತ್ವರಿತವಾಗಿ ಪ್ರಕಟಿಸಬೇಕು’ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಸೈಮನ್ ಸ್ಟಿಯಲ್ ಅವರು ಸದಸ್ಯ ರಾಷ್ಟ್ರಗಳಿಗೆ ಒತ್ತಾಯಿಸಿದರು.

ತಾಪಮಾನ ಬದಲಾವಣೆ ಕುರಿತಂತೆ ಅಜೈರ್‌ಬೈಜಾನ್‌ನ ರಾಜಧಾನಿ ಬಾಕುವಿನಲ್ಲಿ ನಡೆದ ‘ಸಿಒಪಿ29’ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ಭವಿಷ್ಯದಲ್ಲಿ ಎದುರಾಗುವ ಗಂಭೀರ ಸಮಸ್ಯೆಗಳಿಗೆ ಪ್ರಾಯೋಗಿಕ ಪರಿಹಾರ ಅಗತ್ಯವಿದ್ದು, ಸದಸ್ಯ ರಾಷ್ಟ್ರಗಳು ಹೆಚ್ಚಿನ ಒತ್ತುನೀಡಬೇಕು’ ಎಂದರು.

‘ಸಮಸ್ಯೆ ಬಗೆಹರಿಸಲು ಪರಸ್ಪರ ಸಹಕಾರ ಈಗಿನ ತುರ್ತು ಅಗತ್ಯ. ಈ ವಿಚಾರದಲ್ಲಿ ಬೇರೆಯವರು ಮೊದಲು ಕ್ರಮ ಕೈಗೊಳ್ಳಲಿ ಎಂದು ಕಾಯುವುದು ಸರಿಯಲ್ಲ. ಇಂತಹ ನಡವಳಿಕೆಗಳು ಎಲ್ಲರ ಮೇಲೂ ಪರಿಣಾಮ ಬೀರಲಿವೆ’ ಎಂದು ಸ್ಟಿಯಲ್ ಎಚ್ಚರಿಸಿದರು.

ಮತ್ತಷ್ಟು ಬಿಗಡಾಯಿಸಿದ ಪರಿಸ್ಥಿತಿ: ಕಠಿಣ ಕ್ರಮ ಕೈಗೊಳ್ಳಲು ವಿಳಂಬ ಮಾಡಿದ್ದಕ್ಕೆ ಆಕ್ರೋಶ

ದೆಹಲಿ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ದೆಹಲಿಯ ವಾಯು ಗುಣಮಟ್ಟ ತೀವ್ರ ಕುಸಿತ ಕಂಡಿದ್ದರೂ ಜಿಆರ್‌ಎಪಿ-4ರ ಅಡಿಯಲ್ಲಿ ಕಠಿಣವಾದ ಕ್ರಮಗಳನ್ನು ಜಾರಿಗೊಳಿಸುವಲ್ಲಿ ವಿಳಂಬ ಏಕಾಯಿತು ಎಂದು ಸುಪ್ರೀಂ ಕೋರ್ಟ್ ಸೋಮವಾರ ದೆಹಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

'ಗುಣಮಟ್ಟ ನಿಯಂತ್ರಿಸಲು ಈಗ ಜಾರಿಗೊಳಿಸಿರುವ ಕಠಿಣ ಕ್ರಮಗಳನ್ನು ಸಡಿಲಗೊಳಿಸಲು ಅನುಮತಿಸುವುದಿಲ್ಲ. ಈ ಸಂಬಂಧ ನನ್ನ ಪೂರ್ವಾನುಮತಿ ಇಲ್ಲದೆ ಕ್ರಮ ತೆಗೆದುಕೊಳ್ಳಬಾರದು' ಎಂದು ಕೋರ್ಟ್ ತಾಕೀತು ಮಾಡಿತು.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ ಈ ಕುರಿತು ವಿಚಾರಣೆ ನಡೆಸಿತು.

ದೆಹಲಿ ಸರ್ಕಾರದ ವಕೀಲರು ವಿಚಾರಣೆಯ ಆರಂಭದಲ್ಲಿಯೇ, ಸೋಮವಾರದಿಂದ ಜಿಆರ್‌ಎಪಿ 4ರಡಿ ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ ಎಂದು ಪೀಠದ ಗಮನಕ್ಕೆ ತಂದರು.

'ಎಕ್ಯೂಐ 300 ಮತ್ತು 400ರ ತಲುಪಿದಾಗಲೇ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಆದರೆ ಈ ವಿಷಯದಲ್ಲಿ ವಿಳಂಬ ಮಾಡಿ, ಅಪಾಯವನ್ನು ಆಹ್ವಾನಿಸಿದ್ದು ಏಕೆ' ಎಂದು ಪೀಠ ಖಾರವಾಗಿ ವಕೀಲರನ್ನು ಪ್ರಶ್ನಿಸಿತು.

ಮಾಲಿನ್ಯದ ಅಪಾಯಕಾರಿ ಏರಿಕೆಯ ಮಟ್ಟವನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು ಎಂಬುದನ್ನು ತಿಳಿಸುವಂತೆ ಪೀಠ ಸರ್ಕಾರಕ್ಕೆ ಸೂಚಿಸಿತು.

'ವಾಯು ಗುಣಮಟ್ಟವು 450ಕ್ಕಿಂತ ಕಡಿಮೆಯಾದರೂ, ಜಿಆರ್‌ಎಪಿ 4ರ ಅಡಿಯಲ್ಲಿ ತೆಗೆದುಕೊಂಡಿರುವ ಕ್ರಮಗಳನ್ನು ಸಡಿಲಗೊಳಿಸಲು ನಾವು ಅನುಮತಿಸುವುದಿಲ್ಲ. ನ್ಯಾಯಾಲಯ ತಿಳಿಸುವವರೆಗೂ ಈ ಕ್ರಮಗಳು ಮುಂದುವರಿಯಲಿವೆ' ಎಂದು ಪೀಠ ಹೇಳಿತು.

ಮಾಸ್ಕ್ ಧರಿಸಲು ಸುತ್ತೋಲೆ: ಮುನ್ನೆಚ್ಚರಿಕೆ ಕ್ರಮವಾಗಿ ಮಾಸ್ಕ್ ಧರಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ತನ್ನ ಸಿಬ್ಬಂದಿಗೆ ಸೂಚಿಸಿ ಸುತ್ತೋಲೆ ಹೊರಡಿಸಿದೆ.



ನವದೆಹಲಿಯಲ್ಲಿ ವಾಯುಮಾಲಿನ್ಯ ಮಿತಿಮೀರಿದ್ದರಿಂದ ಸಾರ್ವಜನಿಕರು ಸೋಮವಾರ ಐಟಿಒ ಪ್ರದೇಶದಲ್ಲಿ ಮುಖಗವಸು ಹಾಕಿಕೊಂಡು ಬಸ್‌ಗಾಗಿ ಕಾಯುತ್ತಿದ್ದರು —ಪಿಟಿಐ ಚಿತ್ರ

ದೆಹಲಿ ಎನ್‌ಸಿಆರ್‌ನಲ್ಲಿ ವಾಯು ಗುಣಮಟ್ಟದ ವಿವಿಧ ಹಂತಗಳು

ಹಂತ	ಎಕ್ಯೂಐ	ಗುಣಮಟ್ಟ
1	200-300	ಕಳಪೆ
2	301-400	ತೀರಾ ಕಳಪೆ
3	401-450	ಅಪಾಯ
4	450ಕ್ಕೂ ಮೇಲೆ	ತೀವ್ರ ಅಪಾಯ

ಮಾಸ್ಕ್ ವಿತರಿಸಿದ ಕಮಲ ಪಡೆ

ನವದೆಹಲಿ (ಪಿಟಿಐ): ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕವು ತೀವ್ರ ಅಪಾಯಕಾರಿ ಮಟ್ಟ ತಲುಪಿದ ಕಾರಣ, ದೆಹಲಿಯ ಬಿಜೆಪಿ ಘಟಕವು ಮೆಟ್ರೊ ನಿಲ್ದಾಣಗಳ ಹೊರಗೆ ಮಾಸ್ಕ್ ವಿತರಣಾ ಅಭಿಯಾನ ನಡೆಸಿತು.

ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ, ಶಾಸಕ ವಿಜೇಂದರ್ ಗುಪ್ತಾ, ಸಂಸದರಾದ ರಾಮ್‌ವೀರ್ ಸಿಂಗ್ ಬಿಧುರಿ, ಪ್ರವೀಣ್ ಖಂಡೇಲ್ವಾಲ್ ಮತ್ತು ಇತರ ಮುಖಂಡರು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ದೆಹಲಿ ಸರ್ಕಾರವು ಇಲ್ಲಿನ ಮಾಲಿನ್ಯ ಸಮಸ್ಯೆ ಪರಿಹರಿಸುವಲ್ಲಿ ವಿಫಲವಾಗಿದೆ ಎಂದು ಸಚ್‌ದೇವ ಟೀಕಿಸಿದರು. ಕಳೆದ 10 ವರ್ಷಗಳಲ್ಲಿ ದೆಹಲಿ ಮಾಲಿನ್ಯ ನಿಯಂತ್ರಣಕ್ಕೆ ಎಎಪಿ ಸರ್ಕಾರ ಗಂಭೀರ ಪ್ರಯತ್ನಗಳನ್ನು ಮಾಡಿಲ್ಲ ಎಂದರು.

ಬಿಜೆಪಿ ವಿರುದ್ಧ ದೆಹಲಿ ಸಿ.ಎಂ ವಾಗ್ದಾಳಿ

ನವದೆಹಲಿ (ಪಿಟಿಐ): ದೆಹಲಿ ವಾಯು ಮಾಲಿನ್ಯದ ವಿಷಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಆತಿಶಿ ಆರೋಪಿಸಿದ್ದಾರೆ. ಬಿಜೆಪಿ ಆಡಳಿತವಿರುವ ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ಕೃಷಿ ತ್ಯಾಜ್ಯ ಸುಡುವುದನ್ನು ನಿಯಂತ್ರಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಎಎಪಿ ಆಡಳಿತವಿರುವ ಪಂಜಾಬ್‌ನಲ್ಲಿ ಮಾತ್ರ ಕೃಷಿ ತ್ಯಾಜ್ಯ ಸುಡುವುದು ಗಣನೀಯ ತಗ್ಗಿದೆ. ಆದರೆ ಕೇಸರಿ ಪಕ್ಷ ಆಡಳಿತವಿರುವ ರಾಜ್ಯಗಳಲ್ಲಿ ಈ ನಿಟ್ಟಿನಲ್ಲಿ ನಿರ್ಲಕ್ಷ್ಯವಹಿಸಲಾಗಿದೆ ಎಂದರು.

ಅಧಿಕಾರಿಗಳ ಸಂಘದ ಮನವಿ

ನವದೆಹಲಿ (ಪಿಟಿಐ): ದೆಹಲಿಯ ವಾಯು ಗುಣಮಟ್ಟ ತೀವ್ರ ಅಪಾಯಕಾರಿ ಮಟ್ಟ ತಲುಪಿರುವುದರಿಂದ ಸಿಬ್ಬಂದಿಗೆ ಮನೆಯಲ್ಲಿ ಕೆಲಸ ಮಾಡಲು ಅವಕಾಶ ನೀಡಬೇಕು ಮತ್ತು ಕೆಲಸದ ಅವಧಿಯನ್ನು ಬದಲಿಸಬೇಕು ಎಂದು ಕೇಂದ್ರ ಸಚಿವಾಲಯದ ಸೇವಾ ಅಧಿಕಾರಿಗಳ ಸಂಘ ಮನವಿ ಮಾಡಿದೆ.ಕೆಲಸದ ಜಾಗದಲ್ಲಿ ಗಾಳಿ ಶುದ್ಧೀಕರಣ ಯಂತ್ರಗಳನ್ನು ಅಳವಡಿಸುವಂತೆಯೂ ಒತ್ತಾಯಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದೆ.

ವಾಯು ಗುಣಮಟ್ಟ ಸೂಚ್ಯಂಕ 494ಕ್ಕೆ ● ಕಠಿಣ ಕ್ರಮಗಳು ಜಾರಿ

ರಾಜಧಾನಿ ಎಲ್ಲೆಡೆ 'ಹೊಂಜು'

ನವದೆಹಲಿ: ದೇಶದ ರಾಜಧಾನಿ ದೆಹಲಿಯ ವಾಯು ಗುಣಮಟ್ಟ ಸೋಮವಾರ ಮತ್ತಷ್ಟು ಹದಗೆಟ್ಟಿದ್ದು, ಬೆಳಿಗ್ಗೆ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 484ಕ್ಕೆ ತಲುಪುವ ಮೂಲಕ 'ತೀವ್ರ ಅಪಾಯ'ದ ಹಂತ ತಲುಪಿತು.

ಮಧ್ಯಾಹ್ನ 2 ಗಂಟೆ ವೇಳೆಗೆ ಎಕ್ಯೂಐ 494ಕ್ಕೆ ಏರುವ ಮೂಲಕ ವಾತಾವರಣ ಮತ್ತಷ್ಟು ಬಿಗಡಾಯಿಸಿತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ. ಇದು ಈ ಋತುವಿನಲ್ಲಿ ತಲುಪಿದ ಅತ್ಯಂತ ಕಳಪೆ ಮಟ್ಟವಾಗಿದೆ ಎಂದು ಅದು ಹೇಳಿದೆ.

ದಟ್ಟವಾದ ವಿಷಕಾರಿ ಹೊಗೆ ಹಾಗೂ ಮಂಜು (ಹೊಂಜು) ಮುಸುಕಿದ ಕಾರಣ ಬೆಳಿಗ್ಗೆ ಗೋಚರತೆ ಪ್ರಮಾಣವೂ ತೀವ್ರವಾಗಿ ಕುಸಿದಿತ್ತು. ಅಧಿಕಾರಿಗಳ ಪ್ರಕಾರ ಸಫ್ದರ್‌ಜಂಗ್ ವಿಮಾನ ನಿಲ್ದಾಣದಲ್ಲಿ 150 ಮೀಟರ್‌ನಷ್ಟು ದೂರದವರೆಗೆ ಮಾತ್ರ ಗೋಚರತೆ ಇತ್ತು.

ಕೆಲವೆಡೆ ಎಕ್ಯೂಐ 500ಕ್ಕೇರಿಕೆ: 'ಸಮೀರ್ ಆ್ಯಪ್' ದತ್ತಾಂಶದ ಪ್ರಕಾರ, ದೆಹಲಿ ವ್ಯಾಪ್ತಿಯ ದ್ವಾರಕಾ, ನಜಾಫ್‌ಗಢ, ನೆಹರೂ ನಗರ ಮತ್ತು ಮುಂಡ್ಕಾದ ಮೇಲ್ವಿಚಾರಣಾ ಕೇಂದ್ರಗಳಲ್ಲಿ ಎಕ್ಯೂಐ ಮಟ್ಟ ಗರಿಷ್ಠ 500ಕ್ಕೆ ಏರಿರುವ ವರದಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಇನ್ನೂ ಮೂರು ದಿನಗಳು ದೆಹಲಿಯಲ್ಲಿ ದಟ್ಟವಾದ ಮಂಜು ಆವರಿಸಿರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕಣ್ಣಿನಲ್ಲಿ ನೀರು ಜಿನುಗಿ, ಕಣ್ಣುಜ್ಜುವಂತೆ ಜನರಿಗೆ ಆಗುತ್ತಿರುವುದರಿಂದ ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಈ ಹಂತದಲ್ಲಿ ಎನ್95 ಮಾಸ್ಕ್‌ಗಳನ್ನು ಬಳಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ದೆಹಲಿಯಲ್ಲಿ ಭಾನುವಾರ ಸಂಜೆ 4 ಗಂಟೆಗೆ ಎಕ್ಯೂಐ 441ರಷ್ಟಿತ್ತು. ಅಂದು ರಾತ್ರಿ 7 ಗಂಟೆಗೆ 457ಕ್ಕೆ ಏರಿಕೆಯಾಗಿತ್ತು. ಎಕ್ಯೂಐ 450 ದಾಟುತ್ತಿದ್ದಂತೆ ವಾಯುಗುಣಮಟ್ಟ ನಿರ್ವಹಣೆ ಆಯೋಗವು ದೆಹಲಿ ಎನ್‌ಸಿಆರ್‌ನಲ್ಲಿ 'ಜಿಆರ್‌ಎಪಿ -4' (ಗ್ರೇಡೆಡ್ ರೆಸ್ಪಾನ್ಸ್ ಆ್ಯಕ್ಷನ್ ಪ್ಲ್ಯಾನ್) ನಿರ್ಬಂಧಗಳನ್ನು ಜಾರಿಗೊಳಿಸಲು ಆದೇಶಿಸಿತು. ದೆಹಲಿ ಸರ್ಕಾರವು ಸೋಮವಾರ ಬೆಳಿಗ್ಗೆಯಿಂದ ಟ್ರಕ್‌ಗಳ ಪ್ರವೇಶ ನಿಷೇಧ, ಸಾರ್ವಜನಿಕ ನಿರ್ಮಾಣ ಯೋಜನೆಗಳನ್ನು ಸ್ಥಗಿತ, ಸರ್ಕಾರಿ ಮತ್ತು ಮುನ್ಸಿಪಲ್ ಸಿಬ್ಬಂದಿಯ ಕಚೇರಿ ಸಮಯ ಬದಲು ಸೇರಿದಂತೆ ಹಲವು ಕಠಿಣ ಕ್ರಮಗಳನ್ನು ಜಾರಿಗೆ ತಂದಿದೆ.

ಏನೇನು ನಿರ್ಬಂಧ?

- ಅಗತ್ಯ ವಸ್ತುಗಳನ್ನು ಸಾಗಿಸುವ ಅಥವಾ ಶುದ್ಧ ಇಂಧನ (ಎಲ್‌ಎನ್‌ಜಿ/ಸಿಎನ್‌ಜಿ/ಬಿಎಸ್-6 ಡೀಸೆಲ್/ಎಲೆಕ್ಟ್ರಿಕ್) ಬಳಸುವ ವಾಹನಗಳನ್ನು ಹೊರತುಪಡಿಸಿ ಯಾವುದೇ ಟ್ರಕ್‌ಗಳು ದೆಹಲಿ ಪ್ರವೇಶಿಸುವಂತಿಲ್ಲ
- ಇ.ವಿಗಳು, ಸಿಎನ್‌ಜಿ ಮತ್ತು ಬಿಎಸ್-6 ಡೀಸೆಲ್ ವಾಹನಗಳನ್ನು ಹೊರತುಪಡಿಸಿ ದೆಹಲಿಯ ಹೊರಗೆ ನೋಂದಾಯಿಸಲಾದ, ಲಘು ವಾಣಿಜ್ಯ ವಾಹನಕ್ಕೆ ನಿಷೇಧ
- ದೆಹಲಿಯಲ್ಲಿ ನೋಂದಾಯಿತ ಬಿಎಸ್-4 ಅಥವಾ ಹಳೆಯ ಡೀಸೆಲ್ ಮಧ್ಯಮ ಮತ್ತು ಭಾರಿ ಸರಕು ವಾಹನಗಳಿಗೂ ನಿಷೇಧ. ಅಗತ್ಯ ಸೇವೆಗಳಿಗೆ ಬಳಸುವ ವಾಹನಗಳಿಗೆ ಮಾತ್ರ ಅನುಮತಿ
- ಹೆದ್ದಾರಿ, ರಸ್ತೆಗಳು, ಮೇಲ್ಸೇತುವೆಗಳು, ವಿದ್ಯುತ್ ಮಾರ್ಗಗಳು, ಪೈಪ್‌ಲೈನ್‌ಗಳು ಹಾಗೂ ಇತರ ಸಾರ್ವಜನಿಕ ಯೋಜನೆಗಳು ಸೇರಿದಂತೆ ಎಲ್ಲ ನಿರ್ಮಾಣ ಕಾಮಗಾರಿಗಳು ಸ್ಥಗಿತ
- ಎನ್‌ಸಿಆರ್ ವ್ಯಾಪ್ತಿಯ ಕಚೇರಿಗಳು ಶೇ 50ರಷ್ಟು ಸಿಬ್ಬಂದಿಯಿಂದ ಕಾರ್ಯನಿರ್ವಹಿಸಬೇಕು. ಉಳಿದ ಸಿಬ್ಬಂದಿಗೆ ಮನೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು ಎಂದು ಶಿಫಾರಸು ಮಾಡಲಾಗಿದೆ
- ದೆಹಲಿಯಲ್ಲಿ ಎಲ್ಲ ಶಾಲೆಗಳಲ್ಲಿ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ಹೊರತುಪಡಿಸಿ ಉಳಿದವರಿಗೆ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಬೇಕು

ಎಲ್‌ಟಿಇ ಉಗ್ರ ಚೋಪನ್ ಸೆರೆ

ಶ್ರೀನಗರ (ಪಿಟಿಐ): ಭದ್ರತಾ ಪಡೆಗಳು ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಹಾಗೂ ಬಾರಾಮುಲ್ಲಾ ಜಿಲ್ಲೆಗಳಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಒಬ್ಬ ಉಗ್ರ ಹಾಗೂ ಉಗ್ರರ ಸಹಚರನನ್ನು ಬಂಧಿಸಿವೆ.

ಪೊಲೀಸರು, ಸೇನೆ ಹಾಗೂ ಸಿಆರ್‌ಪಿಎಫ್‌ಪಡೆಗಳು ಪುಲ್ವಾಮಾ ಜಿಲ್ಲೆಯ ಅವಂತಿಪೋರಾ ವಲಯದ ಟ್ರಾಲ್‌ನಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದ್ದು, ಲಷ್ಕರ್-ಎ-ತಯಬಾ (ಎಲ್‌ಟಿಇ) ಭಯೋತ್ಪಾದಕ ಸಂಘಟನೆಯ ಸದಸ್ಯ ಇರ್ಶಾದ್ ಅಹಮದ್ ಚೋಪನ್‌ನನ್ನು ಬಂಧಿಸಲಾಗಿದೆ. ಈತನಿಂದ ಒಂದು ಬಂದೂಕು, ಎರಡು ಮ್ಯಾಗಜಿನ್ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದಲ್ಲಿ ವಲಸೆ ಕಾರ್ಮಿಕನೊಬ್ಬನ ಮೇಲೆ ಅಕ್ಟೋಬರ್ 24ರಂದು ನಡೆದಿದ್ದ ಗುಂಡಿನ ದಾಳಿಯಲ್ಲಿ ಚೋಪನ್ ಭಾಗಿಯಾಗಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ ಎಂದು ತಿಳಿಸಿದ್ದಾರೆ.

ಉಗ್ರರ ಸಹಚರನ ಬಂಧನ: ಬಾರಾಮುಲ್ಲಾ ಜಿಲ್ಲೆಯ ಜಾನ್‌ಬಾಜ್‌ಪೋರಾ-ಬಿನ್ನೇರ್ ರಸ್ತೆಯಲ್ಲಿ ಶೌಕತ್ ಅಹಮದ್ ಭಟ್ ಎಂಬಾತನನ್ನು ಭಾನುವಾರ ಬಂಧಿಸಲಾಗಿದೆ. ಈತ ಮೂಲತಃ ದಕ್ಷಿಣ ಕಾಶ್ಮೀರದ ಕುಲ ಗಾಮ್ ಜಿಲ್ಲೆಯವನಾಗಿದ್ದ. ಈತನಿಂದ ಒಂದು ಎ.ಕೆ.47 ಬಂದೂಕು, ಒಂದು ಮ್ಯಾಗಜಿನ್ ಹಾಗೂ ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ವಕ್ತಾರರು ಮಾಹಿತಿ ನೀಡಿದ್ದಾರೆ.

ಎಎಪಿ ತೊರೆದ ಮರುದಿನವೇ ಬಿಜೆಪಿಗೆ ಕೈಲಾಸ್ ಸೇರ್ಪಡೆ

ನವದೆಹಲಿ (ಪಿಟಿಐ): ಭಾನುವಾರವಷ್ಟೇ ದೆಹಲಿ ಸರ್ಕಾರದ ಸಾರಿಗೆ ಸಚಿವ ಸ್ಥಾನ ಹಾಗೂ ಎಎಪಿ ತೊರೆದಿದ್ದ ಕೈಲಾಸ್ ಗಹಲೋತ್ ಅವರು ಸೋಮವಾರ ಬಿಜೆಪಿ ಸೇರ್ಪಡೆಯಾದರು.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಮನೋಹರ್ ಲಾಲ್ ಕಟ್ಟರ್, ಹರ್ಷ್ ಮಲ್ಹೋತ್ರಾ, ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವಿರೇಂದ್ರ ಸಚ್‌ದೇವ, ಪಕ್ಷದ ಉಪಾಧ್ಯಕ್ಷ ಬೈಜಯಂತ್ ಪಾಂಡಾ, ನೇತೃತ್ವದಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡರು.

ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, 'ಇ.ಡಿ ಹಾಗೂ ಸಿಬಿಐ ಒತ್ತಡದಿಂದಲೇ ಎಎಪಿ ತೊರೆದು, ಬಿಜೆಪಿ ಸೇರ್ಪಡೆಯಾಗಿದ್ದೇನೆ ಎಂದು ಸುಳ್ಳು ಹೇಳಲಾಗುತ್ತಿದೆ. ಎಎಪಿಯು ತನ್ನ ಮೌಲ್ಯಗಳ ವಿಚಾರದಲ್ಲಿ ರಾಜಿಯಾಗಿದ್ದು ಪಕ್ಷ ತೊರೆಯಲು ಕಾರಣ. ಯಾವುದೇ ಒತ್ತಡದಿಂದಲೂ ಬಿಜೆಪಿಗೆ ಸೇರ್ಪಡೆಯಾಗಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ದೆಹಲಿಯ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಸರ್ಕಾರದ ಜತೆಗೆ ಉತ್ತಮ ಬಾಂಧವ್ಯ ಅಗತ್ಯ. ಆದರೆ, ಎಎಪಿ ಸರ್ಕಾರವು ನಿರಂತರವಾಗಿ ಕೇಂದ್ರ ಜೊತೆಗೆ ಸಂಘರ್ಷ ನಡೆಸುತ್ತಿದೆ. ಮುಖ್ಯಮಂತ್ರಿ ಅಥವಾ ಇತರೆ ಸಚಿವರು ಕೂಡ ಸಣ್ಣ ವಿಚಾರಕ್ಕೂ ತಗಾದೆ ತೆಗೆಯುತ್ತಿದ್ದಾರೆ. ಲೆಫ್ಟಿನೆಂಟ್ ಗವರ್ನರ್ ಜತೆಗೂ ಉತ್ತಮ ಬಾಂಧವ್ಯದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ದೆಹಲಿಯ ಅಭಿವೃದ್ಧಿಗಾಗಿಯೇ ಎಎಪಿ ಸೇರಿದ್ದೆ. ಅದೇ ಉದ್ದೇಶದಿಂದ ಈಗ ಬಿಜೆಪಿ ಸೇರಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ನಾಯಕತ್ವ ಹಾಗೂ ಕಾರ್ಯಸೂಚಿಗಳ ಕುರಿತು ಕೈಲಾಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಈಗ 'ವಿಶೇಷ' (ಖಾಸ್) ವ್ಯಕ್ತಿಯಾಗಿದ್ದು, 'ಸಾಮಾನ್ಯ' (ಖಾಸ್) ವ್ಯಕ್ತಿಯಾಗಿ ಉಳಿದಿಲ್ಲ ಎಂದು ಕೇಜ್ರಿವಾಲ್ ಹೆಸರು ಹೇಳದೇ ತಿರುಗೇಟು ನೀಡಿದರು.



ಬಿಜೆಪಿ ಸೇರ್ಪಡೆಯಾದ ಕೈಲಾಸ್ ಗಹಲೋತ್ ಅವರನ್ನು ನವದೆಹಲಿಯ ಪಕ್ಷದ ಕೇಂದ್ರ ಕಚೇರಿಯಲ್ಲಿ ಪ್ರಧಾನ ಕಾರ್ಯದರ್ಶಿ ದುಶ್ಯಂತ್ ಗೌತಮ್ ಬರಮಾಡಿಕೊಂಡರು.ಕೇಂದ್ರ ಸಚಿವ ಮನೋಹರ್ ಲಾಲ್ ಕಟ್ಟರ್, ಹಿರಿಯ ನಾಯಕ ಬೈಜಯಂತ್ ಪಾಂಡಾ, ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವಿರೇಂದ್ರ ಸಚ್‌ದೇವ ಸೇರಿದಂತೆ ಪಕ್ಷದ ಹಿರಿಯ ನಾಯಕರು ಭಾಗವಹಿಸಿದ್ದರು—ಪಿಟಿಐ ಚಿತ್ರ

ಮಾಜಿ ಶಾಸಕ ಸುಮೇಶ್ ಎಎಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಮಾಜಿ ಶಾಸಕ ಸುಮೇಶ್ ಶೌಕೀನ್ ಅವರು ಎಎಪಿಯ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಉಪಸ್ಥಿತಿಯಲ್ಲಿ ಸೋಮವಾರ ಪಕ್ಷಕ್ಕೆ ಸೇರ್ಪಡೆಯಾದರು.ಶೌಕೀನ್ ದೆಹಲಿಯ ದೆಹಾತ್ ಪ್ರದೇಶ ಎಂದು ಪರಿಗಣಿಸಲಾದ ಮಟಿಯಾಲ ಕ್ಷೇತ್ರದ ಮಾಜಿ ಶಾಸಕ. ಜಾಟ್ ನಾಯಕ ಕೈಲಾಶ್ ಗಹಲೋತ್ ಪಕ್ಷಕ್ಕೆ ರಾಜೀನಾಮೆ ನೀಡಿದ ಮರುದಿನವೇ ಶೌಕೀನ್ ಅವರು ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಅವರನ್ನು ಸ್ವಾಗತಿಸಿದ ಕೇಜ್ರಿವಾಲ್, 'ಶೋಕೀನ್ ಅವರ ಆಗಮನವು ದೆಹಲಿಯ ಎಲ್ಲ ಭಾಗಗಳಲ್ಲೂ ಪಕ್ಷದ ಬಲ ಹೆಚ್ಚಿಸಲಿದೆ' ಎಂದು ಹೇಳಿದರು.

ದೆಹಲಿ-ದೆಹಾತ್ ಪ್ರದೇಶಗಳಲ್ಲಿ ಸಂಪರ್ಕ ಸಾರಿಗೆ ವ್ಯವಸ್ಥೆಯನ್ನು ಆಪ್ ಸುಧಾರಿಸಿದೆ. ಹಲವಾರು ಅಭಿವೃದ್ಧಿ ಕೆಲಸಗಳನ್ನೂ ಕೈಗೊಂಡಿದೆ ಎಂದು ಶೌಕೀನ್ ಹೇಳಿದರು.

ಆದೇಶ ತಡೆಹಿಡಿದ 'ಸುಪ್ರೀಂ'

ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಹತ್ಯೆ ಪ್ರಕರಣದ ವಿಚಾರಣೆ

ನವದೆಹಲಿ (ಪಿಟಿಐ): ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಹತ್ಯೆ ಪ್ರಕರಣದಲ್ಲಿ ಮರಣದಂಡನೆಗೆ ಗುರಿಯಾಗಿರುವ ಬಲ್ವಂತ್ ಸಿಂಗ್ ರಾಜೋನಾ ಅವರ ಕ್ಷಮಾದಾನ ಅರ್ಜಿಗೆ ಸಂಬಂಧಿಸಿದಂತೆ ತಾನು ನೀಡಿದ ಆದೇಶವನ್ನು ಸುಪ್ರೀಂ ಕೋರ್ಟ್ ತಡೆಹಿಡಿದಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ.ಮಿಶ್ರಾ ಮತ್ತು ಕೆ.ವಿ ವಿಶ್ವನಾಥನ್ ಅವರನ್ನೊಳಗೊಂಡ ಪೀಠವು ಸೋಮವಾರ ಬೆಳಿಗ್ಗೆ ನೀಡಿದ ಆದೇಶದಲ್ಲಿ, ರಾಜೋನಾ ಅವರ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಪರಿಗಣನೆಗೆ ಇಡುವಂತೆ ರಾಷ್ಟ್ರಪತಿಯವರ ಕಾರ್ಯದರ್ಶಿಗೆ ನಿರ್ದೇಶಿಸಿತು.

ಕ್ಷಮಾದಾನ ಅರ್ಜಿಯನ್ನು ಎರಡು ವಾರಗಳ ಒಳಗಾಗಿ ಪರಿಗಣಿಸುವಂತೆ ಪೀಠವು ರಾಷ್ಟ್ರಪತಿ ಅವರಿಗೆ ಮನವಿಯನ್ನೂ ಮಾಡಿತು.

ಆದರೆ, ಆದೇಶ ಹೊರಬಿದ್ದ ಬೆನ್ನಲ್ಲೇ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ಪ್ರಕರಣವು ತುಂಬಾ 'ಸೂಕ್ಷ್ಮತೆ'ಗಳನ್ನು ಒಳಗೊಂಡಿರುವ ಕಾರಣ ಆದೇಶವನ್ನು ಜಾರಿಗೆ ತರಬಾರದು. ಶುಕ್ರವಾರ ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದರು.

ಕ್ಷಮಾದಾನ ಅರ್ಜಿಗೆ ಸಂಬಂಧಿಸಿದ ಕಡತವು ರಾಷ್ಟ್ರಪತಿಯವರ ಬಳಿಯಿಲ್ಲ. ಅದು ಗೃಹ ಕಾರ್ಯದರ್ಶಿಯವರ ಬಳಿಯಿದೆ ಎಂಬ ವಿಚಾರವನ್ನು ಪೀಠದ ಗಮನಕ್ಕೆ ತಂದರು. ಸಾಲಿಸಿಟರ್ ಜನರಲ್ ಅವರ ಮನವಿಗೆ ಒಪ್ಪಿಗೆ ಸೂಚಿಸಿದ ಪೀಠ, ಮುಂದಿನ ವಿಚಾರಣೆಯನ್ನು ಸೋಮವಾರಕ್ಕೆ ನಿಗದಿಪಡಿಸಿತು.

ರಾಜೋನಾ ಸಲ್ಲಿಸಿರುವ ಕ್ಷಮಾದಾನ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 25ರಂದು ಪಂಜಾಬ್ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶ ಚಂಡೀಗಢದ ಪ್ರತಿಕ್ರಿಯೆ ಕೇಳಿತ್ತು.

1995ರ ಆಗಸ್ಟ್ 31ರಂದು ಪಂಜಾಬ್ ಸಚಿವಾಲಯದ ಹೊರಭಾಗದಲ್ಲಿ ನಡೆದ ಬಾಂಬ್ ದಾಳಿಯಲ್ಲಿ ಬಿಯಾಂತ್ ಸೇರಿದಂತೆ 16 ಜನರು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು 2007ರಲ್ಲಿಯೇ ಬಲ್ವಂತ್ ಸಿಂಗ್‌ಗೆ ಮರಣದಂಡನೆ ವಿಧಿಸಿತ್ತು.



ವಿಚಾರಣೆಯಿಂದ ಹಿಂದೆ ಸರಿದ ಸಿಜೆಐ

ನವದೆಹಲಿ: ದೆಹಲಿ ರಿಜ್ ಪ್ರದೇಶದಲ್ಲಿ ನೂರಾರು ಮರಗಳನ್ನು ಕಡಿಯಲಾಗುತ್ತಿದೆ ಎಂಬ ವಿಷಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಸೋಮವಾರ ಹಿಂದೆ ಸರಿದಿದ್ದಾರೆ.

'ನಾನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (ಎನ್‌ಎಲ್‌ಎಸ್‌ಎ) ಅಧ್ಯಕ್ಷನಾಗಿದ್ದಾಗ ಪಟ್ನಾಕ್ಕೆ ಭೇಟಿ ನೀಡಿದ್ದೆ, ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಜೊತೆ ಅಲ್ಲಿನ ಜೈಲುಗಳಿಗೆ ಭೇಟಿ ನೀಡಿದ್ದೆ. ಹೀಗಾಗಿ ನಾನು ಈ ಅರ್ಜಿಯ ವಿಚಾರಣೆ ನಡೆಸುವುದು ಸೂಕ್ತವಾಗುವುದಿಲ್ಲ' ಎಂದು ಸಿಜೆಐ ಹೇಳಿದರು. ಸಿಜೆಐ ಅವರು ಇಲ್ಲದ ಪೀಠದ ಮುಂದೆ ಈ ಅರ್ಜಿಗಳು ವಿಚಾರಣೆಗೆ ಬರಲಿವೆ.

ಕೃಷ್ಣಕುಮಾರ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಿ. ಕೃಷ್ಣಕುಮಾರ್ ಅವರನ್ನು ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಬೇಕು ಎಂದು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ಹಿರಿಯ ನ್ಯಾಯಮೂರ್ತಿಗಳ ಸಮಿತಿ) ಸೋಮವಾರ ಶಿಫಾರಸು ಮಾಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ನೇತೃತ್ವದ ಕೊಲಿಜಿಯಂ ಈ ಶಿಫಾರಸು ಮಾಡಿದೆ. ನ್ಯಾಯಮೂರ್ತಿ ಸಿದ್ಧಾರ್ಥ ಮೃದುಲ್ ಅವರ ನಿವೃತ್ತಿಯ ಪರಿಣಾಮವಾಗಿ ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುದ್ದೆ ತೆರವಾಗಲಿದೆ, ಹೀಗಾಗಿ ಅಲ್ಲಿಗೆ ಹೊಸ ನೇಮಕ ಆಗಬೇಕಿದೆ ಎಂದು ಕೊಲಿಜಿಯಂ ಹೇಳಿದೆ.

'ನ್ಯಾಯಮೂರ್ತಿ ಕೃಷ್ಣಕುಮಾರ್ ಅವರು ಹಿಂದುಳಿದ ವರ್ಗಗಳಿಗೆ ಸೇರಿದವರು. ಅವರು ಸಿವಿಲ್, ಸಾಂವಿಧಾನಿಕ ಮತ್ತು ಸೇವಾ ವಿಷಯಗಳಲ್ಲಿ ಬಹಳ ಅನುಭವ ಹೊಂದಿದ್ದಾರೆ' ಎಂದು ಕೊಲಿಜಿಯಂ ಹೇಳಿದೆ.

ಲಾರೆನ್ಸ್ ಬಿಷ್ಣೋಯಿ ಸಹೋದರ ಬಂಧನ

ಮುಂಬೈ (ಪಿಟಿಐ): ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಅವರ ಕಿರಿಯ ಸಹೋದರ ಅನ್ಮೋಲ್ ಬಿಷ್ಣೋಯಿ ಅವರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ ಎಂದು ಮುಂಬೈ ಪೊಲೀಸರ ಮೂಲಗಳು ಸೋಮವಾರ ತಿಳಿಸಿವೆ.

ಅನ್ಮೋಲ್ ಕೆನಡಾದಲ್ಲಿ ವಾಸವಾಗಿದ್ದು, ನಿಯಮಿತವಾಗಿ ಅಮೆರಿಕಕ್ಕೆ ಪ್ರಯಾಣಿಸುತ್ತಾರೆ ಎನ್ನಲಾಗಿತ್ತು. ಮಾಜಿ ಸಚಿವ ಹಾಗೂ ಎನ್‌ಸಿಪಿ (ಅಜಿತ್ ಪವಾರ್ ಬಣ) ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣದಲ್ಲಿ ಅನ್ಮೋಲ್ ಪೊಲೀಸರಿಗೆ ಬೇಕಾಗಿದ್ದರು.

ವೈದ್ಯಕೀಯ ವಿದ್ಯಾರ್ಥಿನಿ ಕೊಲೆ ಪ್ರಕರಣ: ಆರೋಪಿ ವಿಚಾರಣೆಗೆ ಹಾಜರು

ಧ್ವನಿ ಕೇಳದಂತೆ ತಡೆಯೊಡ್ಡಿದ ಪೊಲೀಸರು

ಕೋಲ್ಕತ್ತ (ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಆರೋಪಿ ಸಂಜಯ್ ರಾಯ್ ಅವರನ್ನು ಸೋಮವಾರ ವಿಚಾರಣೆಗೆ ಹಾಜರುಪಡಿಸುವ ವೇಳೆ, ಅವರು ಸುದ್ದಿಗಾರರಿಗೆ ಹೇಳಿಕೆ ನೀಡುವುದನ್ನು ತಡೆಯಲು ಪೊಲೀಸರು ಕಾರಾಗೃಹ ವಾಹನದ ಹಾರ್ನ್ ಹೊಡೆದರು.

ಸಂಜಯ್ ಅವರನ್ನು ವಿಚಾರಣೆಗಾಗಿ ಸಿಯಾಲ್ದಾ ನ್ಯಾಯಾಲಯಕ್ಕೆ ಕರೆತರಲಾಗಿತ್ತು, ಈ ವೇಳೆ ವಾಹನದ ಹಾರ್ನ್ ಹೊಡೆಯುವ ಮೂಲಕ ಪೊಲೀಸರು ಸಂಜಯ್ ರಾಯ್ ಧ್ವನಿ ಸುದ್ದಿಗಾರರಿಗೆ ಕೇಳದಂತೆ ಮಾಡಿದ್ದಾರೆ.

ನವೆಂಬರ್ 11ರಂದು ಮೊದಲ ದಿನದ ವಿಚಾರಣೆಗೆ ಸಂಜಯ್ ಅವರನ್ನು ನ್ಯಾಯಾಲಯಕ್ಕೆ ಕರೆತಂದಿದ್ದಾಗ ಅವರು ಕೋಲ್ಕತ್ತ ಪೊಲೀಸ್ ಕಮಿಷನರ್ ವಿನೀತ್ ಗೋಯಲ್ ಅವರ ವಿರುದ್ಧ ಆರೋಪ ಮಾಡಿದ್ದರು ಮತ್ತು ತಾನು ನಿರಾಪರಾಧಿ ಎಂದು ಹೇಳಿದ್ದರು.

ಈ ಕಾರಣಕ್ಕೆ ಪೊಲೀಸರು ಸೋಮವಾರ ಮುಂಜಾಗ್ರತಾ ಕ್ರಮ ವಹಿಸಿದ್ದರು. ಅಡೆತಡೆಗಳನ್ನು ತಪ್ಪಿಸುವ ಸಲುವಾಗಿ ಸಂಜಯ್ ಅವರನ್ನು ಪೊಲೀಸರು ಸಣ್ಣ ವಾಹನದಲ್ಲಿ ಕರೆತರುತ್ತಿದ್ದಾರೆ.

ಸೋಮವಾರ ಐದನೇ ದಿನದ ವಿಚಾರಣೆ ನಡೆಯಿತು. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅನಿರ್ಬನ್ ದಾಸ್ ಅವರು ಈವರೆಗೆ 12 ಸಾಕ್ಷಿದಾರರ ಹೇಳಿಕೆಗಳ ವಿಚಾರಣೆ ನಡೆಸಿದ್ದಾರೆ.

ಘೋಷ್ ನ್ಯಾಯಾಂಗ ಬಂಧನ ವಿಸ್ತರಣೆ: ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಘೋಷ್ ಮತ್ತು ತಲಾ ಪೊಲೀಸ್ ಠಾಣಾ ಉಸ್ತುವಾರಿ ಅಭಿಜಿತ್ ಮೊಂಡಾಲ್ ಅವರು ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ಅವರ ಮುಂದೆ ವಿಚಾರಣೆಗೆ ಹಾಜರಾಗಿದ್ದರು. ಅವರಿಬ್ಬರ ನ್ಯಾಯಾಂಗ ಬಂಧನವನ್ನು ಡಿಸೆಂಬರ್ 2ರವರೆಗೆ ವಿಸ್ತರಿಸಲಾಗಿದೆ.



ಸಿದ್ಧತೆ... 2025ರಲ್ಲಿ ನಡೆಯುವ ಮಹಾಕುಂಭಮೇಳಕ್ಕೆ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಗಂಗಾ ನದಿಗೆ ತಾತ್ಕಾಲಿಕ ಸೇತುವೆ ನಿರ್ಮಾಣದಲ್ಲಿ ತೊಡಗಿದ್ದ ಕಾರ್ಮಿಕರು- ಪಿಟಿಐ ಚಿತ್ರ

ಜಿ20 ರಾಷ್ಟ್ರಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ

'ಸಂಘರ್ಷ ಶಮನಕ್ಕೆ ಯತ್ನಿಸಿ'

ರಿಯೊ ಡಿ ಜನೈರೊ (ಪಿಟಿಐ): ವಿಶ್ವದ ವಿವಿಧೆಡೆ ನಡೆಯುತ್ತಿರುವ ಸಂಘರ್ಷವನ್ನು ಶಮನಗೊಳಿಸಲು ಜಿ20 ರಾಷ್ಟ್ರಗಳು ಒಟ್ಟಾಗಿ ಪ್ರಯತ್ನಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಇಲ್ಲಿ ಸೋಮವಾರ ಆರಂಭವಾದ ಜಿ20 ಶೃಂಗದಲ್ಲಿ ಮಾತನಾಡಿದ ಅವರು, 'ಜಾಗತಿಕ ಸಂಘರ್ಷದಿಂದ ತಲೆದೋರಿರುವ ಆಹಾರ, ಇಂಧನ ಮತ್ತು ರಸಗೊಬ್ಬರ ಬಿಕ್ಕಟ್ಟುಗಳು ಜಾಗತಿಕ ದಕ್ಷಿಣದ ದೇಶಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ' ಎಂದು ಹೇಳಿದರು.

'ಆದ್ದರಿಂದ ಜಾಗತಿಕ ದಕ್ಷಿಣದ ಸವಾಲುಗಳು ಮತ್ತು ಆದ್ಯತೆಗಳನ್ನು ಗಮನದಲ್ಲಿಟ್ಟುಕೊಂಡಾಗ ಮಾತ್ರ ನಾವು ಇಲ್ಲಿ ನಡೆಸುವ ಚರ್ಚೆಗಳು ಯಶಸ್ವಿಯಾಗುತ್ತವೆ' ಎಂದು ಪ್ರತಿಪಾದಿಸಿದರು.

'ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹಸಿವು ಹಾಗೂ ಬಡತನದ ವಿರುದ್ಧ ಹೋರಾಟ' ಕುರಿತ ಅಧಿವೇಶನದಲ್ಲಿ ಪ್ರಧಾನಿ ಅವರು ಈ ಹೇಳಿಕೆ ನೀಡಿದ್ದಾರೆ. ವಿಶ್ವಸಂಸ್ಥೆ ಒಳಗೊಂಡಂತೆ ಜಾಗತಿಕ ಮಟ್ಟದ ಆಡಳಿತ ಸಂಸ್ಥೆಗಳ ಸುಧಾರಣೆಗೂ ಅವರು ಕರೆ ನೀಡಿದರು.

'ನವದೆಹಲಿಯಲ್ಲಿ ನಡೆದ ಕಳೆದ ಶೃಂಗದಲ್ಲಿ ಆಫ್ರಿಕನ್ ಯೂನಿಯನ್‌ಗೆ ಜಿ20ಯ ಶಾಶ್ವತ ಸದಸ್ಯತ್ವವನ್ನು ನೀಡುವ ಮೂಲಕ ಜಾಗತಿಕ ದಕ್ಷಿಣದ ಧ್ವನಿಗೆ ಹೆಚ್ಚಿನ ಬಲ ನೀಡಿದ್ದೆವು. ಇದೀಗ ಜಾಗತಿಕ ಮಟ್ಟದ ಆಡಳಿತ ಸಂಸ್ಥೆಗಳ ಸುಧಾರಣೆಗೆ ಮುಂದಾಗುತ್ತೇವೆ' ಎಂದರು.

ಹಸಿವು ಮತ್ತು ಬಡತನದ ವಿರುದ್ಧದ ಹೋರಾಟಕ್ಕೆ ಬ್ರೆಜಿಲ್ ಆರಂಭಿಸಿರುವ 'ಜಾಗತಿಕ ಮೈತ್ರಿ' ಉಪಕ್ರಮವನ್ನು ಭಾರತ ಬೆಂಬಲಿಸಲಿದೆ ಎಂದು ಮೋದಿ ಹೇಳಿದರು.

ಕಳೆದ ಬಾರಿಯ ಶೃಂಗದ ಪ್ರಮುಖ ಆಶಯ ಘೋಷಣೆಯಾದ 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಎಂಬುದು ಈ ಬಾರಿಯೂ ಪ್ರಸ್ತುತವಾಗಿದೆ ಎಂದರು.

ಮೋದಿ- ಬೈಡನ್ ಭೇಟಿ: ಜಿ20 ಶೃಂಗದಲ್ಲಿ ಪಾಲ್ಗೊಳ್ಳಲು ಬಂದ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರನ್ನು ಪ್ರಧಾನಿ ಮೋದಿ ಭೇಟಿಯಾದರು.



ಜಿ20 ಶೃಂಗದಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಜತೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ಜಿ–20 ಶೃಂಗ ಆರಂಭ
- ಜಾಗತಿಕ ಸಂಘರ್ಷದಿಂದ ಆಹಾರ, ರಸಗೊಬ್ಬರ ಬಿಕ್ಕಟ್ಟು ಸೃಷ್ಟಿ
- ಪ್ರಮುಖ ದೇಶಗಳ ನಾಯಕರು ಭಾಗಿ

ಮಣಿಪುರಕ್ಕೆ ಹೆಚ್ಚುವರಿ ಪಡೆ ರವಾನೆ

ಒಂದನೇ ಪುಟದಿಂದ...

ನುಗ್ಗಿದ ಮೈತೇಯಿ ಜನ: ಮೈತೇಯಿ ಸಮುದಾಯದ ಪ್ರಬಲ ಸಂಘಟನೆಯಾಗಿರುವ 'ಮಣಿಪುರ ಏಕತಾ ಸಮನ್ವಯ ಸಮಿತಿ'ಯ ಸದಸ್ಯರು ಮುಖ್ಯ ಚುನಾವಣಾ ಆಯುಕ್ತರ ಕಚೇರಿಗೆ ನುಗ್ಗಿ, ಅದರ ಬಾಗಿಲಿಗೆ ಸರಪಳಿ ಬಿಗಿದರು.

ಈ ಕಚೇರಿಯಿಂದ ಅನತಿ ದೂರದಲ್ಲಿ ಇರುವ ಜೀವಸಂಪನ್ಮೂಲ ಮತ್ತು ಸುಸ್ಥಿರ ಅಭಿವೃದ್ಧಿ ಸಂಸ್ಥೆಯ (ಐಬಿಎಸ್‌ಡಿ) ಕಚೇರಿಯ ಹಾಗೂ ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ನಿರ್ದೇಶನಾಲಯದ ಕಚೇರಿಗಳ ಮುಖ್ಯ ದ್ವಾರಗಳಿಗೆ ಕೂಡ ಪ್ರತಿಭಟನಕಾರರು ಬೀಗ ಹಾಕಿದರು.

ಕೇಂದ್ರ ಸರ್ಕಾರವು ಉಗ್ರರ ದಾಳಿಗಳಿಂದ ಜನರನ್ನು ರಕ್ಷಿಸಲು ವಿಫಲವಾಗಿರುವ ಕಾರಣ ಸರ್ಕಾರಿ ಕಚೇರಿಗಳ ಬಾಗಿಲು ಮುಚ್ಚಿಸುವುದಾಗಿ ಸಂಘಟನೆಯು ಈ ಮೊದಲೇ ಘೋಷಿಸಿತ್ತು.

ಈ ನಡುವೆ ಬರಾಕ್ ನದಿಯಲ್ಲಿ ಮಹಿಳೆಯೊಬ್ಬಳ ಶವ ದೊರೆತಿದೆ ಎಂದು ಅಸ್ಸಾಂ ಪೊಲೀಸ್ ಮೂಲಗಳು ಹೇಳಿವೆ. 'ಈ ಶವವು ನಾಪತ್ತೆಯಾದ ಆರು ಮಂದಿ ಪೈಕಿ ಕಡೆಯ ವ್ಯಕ್ತಿಯ ಶವ ಆಗಿರಬಹುದು ಎನ್ನಲಾಗಿದೆ. ಮಣಿಪುರ ಪೊಲೀಸರು ಇದನ್ನು ಖಚಿತಪಡಿಸಬೇಕು' ಎಂದು ಅವರು ಹೇಳಿದ್ದಾರೆ.

ಆರ್‌ಎಸ್‌ಎಸ್ ಖಂಡನೆ: ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಸಂಘರ್ಷವನ್ನು ಪ್ರಾಮಾಣಿಕವಾಗಿ ಬಗೆಹರಿಸಬೇಕು ಎಂದು ಹೇಳಿದೆ.

ಪ್ರಧಾನಿ ಭೇಟಿಗೆ ಕಾಂಗ್ರೆಸ್ ಒತ್ತಾಯ

ನವದೆಹಲಿ (ಪಿಟಿಐ): ಹಿಂಸಾಚಾರಕ್ಕೆ ತುತ್ತಾಗಿರುವ ಮಣಿಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಅಧಿವೇಶನ ಶುರುವಾಗುವ ಮೊದಲು ಭೇಟಿ ನೀಡಬೇಕು, ಅಮಿತ್ ಶಾ ಅವರು 'ಅಲ್ಲಿನ ಡಬಲ್ ಎಂಜಿನ್ ಸರ್ಕಾರದ ಸಂಪೂರ್ಣ ವೈಫಲ್ಯಕ್ಕೆ ಹೊಣೆ ಹೊತ್ತು' ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಪ್ರಧಾನಿಯವರು ಮಣಿಪುರದ ಸರ್ವಪಕ್ಷ ನಿಯೋಗವನ್ನು ಮೊದಲು ಭೇಟಿ ಮಾಡಬೇಕು. ಸಂಸತ್ತಿನ ಅಧಿವೇಶನಕ್ಕೂ ಮೊದಲು ರಾಷ್ಟ್ರ ಮಟ್ಟದಲ್ಲಿ ಸರ್ವಪಕ್ಷ ಸಭೆಯೊಂದನ್ನು ಆಯೋಜಿಸಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಸೋಮವಾರ ಆಗ್ರಹಿಸಿದ್ದಾರೆ.

ಶಾ ಅವರು ಮಾತ್ರವೇ ಅಲ್ಲದೆ ಎನ್. ಬಿರೇನ್ ಸಿಂಗ್ ಅವರು ಮಣಿಪುರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಅವರು ಪತ್ರಿಕಾ ಗೋಷ್ಠಿಯಲ್ಲಿ ಒತ್ತಾಯ ಮಾಡಿದ್ದಾರೆ.

'ಮುಖ್ಯಮಂತ್ರಿಯ ವೈಫಲ್ಯಗಳನ್ನು ಗೃಹ ಸಚಿವರು ಏಕೆ ಗಮನಿಸಿಲ್ಲ? ಮುಖ್ಯಮಂತ್ರಿಯನ್ನು ಉಳಿಸಲು ಅವರು ಏಕೆ ಯತ್ನಿಸುತ್ತಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

ಮಣಿಪುರದಲ್ಲಿ ಡಬಲ್ ಎಂಜಿನ್ ಸರ್ಕಾರದ ಆಳ್ವಿಕೆಯಲ್ಲಿ ಸಂಪೂರ್ಣ ಅರಾಜಕತೆ ಇದೆ ಎಂದು ಮಣಿಪುರ ಕಾಂಗ್ರೆಸ್ ಮುಖ್ಯಸ್ಥ ಕೆ. ಮೇಘಚಂದ್ರ ಸಿಂಗ್ ದೂರಿದ್ದಾರೆ.

ಶಿಶುಗಳ ಸಾವಿನ ಸಂಖ್ಯೆ 12ಕ್ಕೆ ಏರಿಕೆ

ಲಖನೌ (ಪಿಟಿಐ): ಝಾನ್ಸಿ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಸಂಭವಿಸಿದ್ದ ಬೆಂಕಿ ಅವಘಡದ ಪರಿಣಾಮ ಮೃತಪಟ್ಟ ಶಿಶುಗಳ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಮಗುವೊಂದು ಸೋಮವಾರ ಮೃತಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶದ ಝಾನ್ಸಿಯಲ್ಲಿನ ಮಹಾರಾಣಿ ಲಕ್ಷ್ಮೀಬಾಯಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನವಜಾತ ಶಿಶುಗಳ ತೀವ್ರನಿಗಾ ಘಟಕಕ್ಕೆ ಕಳೆದ ಶುಕ್ರವಾರ (ನ.15) ರಾತ್ರಿ ಬೆಂಕಿ ತಗುಲಿತ್ತು.

ಘಟನೆಯ ಬಗ್ಗೆ ಪ್ರತ್ಯೇಕವಾಗಿ ಮೂರು ತನಿಖೆ ನಡೆಸುವಂತೆ ಉತ್ತರ ಪ್ರದೇಶ ಸರ್ಕಾರ ಆದೇಶಿಸಿತ್ತು. ತನಿಖೆಗಾಗಿ ರಚನೆಯಾಗಿದ್ದ ಉನ್ನತ ಮಟ್ಟದ ಸಮಿತಿಯು ಸೋಮವಾರ ಆಸ್ಪತ್ರೆಗೆ ಭೇಟಿ ನೀಡಿ ತನಿಖೆ ಆರಂಭಿಸಿದೆ.

ಅವಘಡ ಸಂಭವಿಸಿದಾಗ ಮಕ್ಕಳ ವಾರ್ಡ್‌ನಲ್ಲಿ 55 ಶಿಶುಗಳು ಚಿಕಿತ್ಸೆ ಪಡೆಯುತ್ತಿದ್ದವು ಎಂದು ವರದಿಯಾಗಿತ್ತು. ಆದರೆ 49 ಶಿಶುಗಳು ಮಾತ್ರ ದಾಖಲಾಗಿದ್ದವು ಎಂದು ಆಸ್ಪತ್ರೆಯ ಆಡಳಿತ ವಿಭಾಗ ಸ್ಪಷ್ಟನೆ ನೀಡಿದೆ.ಗಾಯಗೊಂಡ 18 ಮಕ್ಕಳಿಗೆ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಇತರ 9 ಮಕ್ಕಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೆಮಿಫೈನಲ್ ಪಂದ್ಯದಲ್ಲಿ ಇಂದು ಜಪಾನ್ ಎದುರಾಳಿ

ಭಾರತ ಗೆಲ್ಲುವ ನೆಚ್ಚಿನ ತಂಡ

ರಾಜಗೀರ್ (ಬಿಹಾರ), (ಪಿಟಿಐ): ಆತ್ಮವಿಶ್ವಾಸದಿಂದ ಆಡುತ್ತಿರುವ ಮತ್ತು ಅಜೇಯವಾಗಿರುವ ಭಾರತ ತಂಡ, ಮಂಗಳವಾರ ನಡೆಯುವ ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಆತಿಥೇಯ ತಂಡವು ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿದ್ದಲ್ಲದೇ, ರೌಂಡ್ ರಾಬಿನ್ ಲೀಗ್‌ನ ಕೊನೆಯ ಪಂದ್ಯದಲ್ಲಿ ಇದೇ ಜಪಾನ್ ತಂಡವನ್ನು 3–0 ಯಿಂದ ಸೋಲಿಸಿತ್ತು. ಸಹಜವಾಗಿ ಸೆಮಿಫೈನಲ್‌ನಲ್ಲೂ ಭಾರತ ಗೆಲ್ಲುವ ನೆಚ್ಚಿನ ತಂಡವೆನಿಸಿದೆ.

ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಭಾರತ, ಇದುವರೆಗೆ ಆಡಿದ ಐದೂ ಪಂದ್ಯಗಳಲ್ಲಿ ಜಯಗಳಿಸಿದೆ. ಇದರಲ್ಲಿ ಒಲಿಂಪಿಕ್ ಬೆಳ್ಳಿ ವಿಜೇತ ಚೀನಾ ತಂಡದ ಎದುರು 3–0 ಗೆಲುವೂ ಸೇರಿದೆ.

ತಂಡವು ಇದೇ ರೀತಿಯ ಆಟಕ್ಕೆ ಒತ್ತು ನೀಡುವ ಅಗತ್ಯವನ್ನು ಚೀಫ್ ಕೋಚ್ ಹರೇಂದ್ರ ಸಿಂಗ್ ಒತ್ತಿಹೇಳಿದರು. 'ನಮಗೆ ತಂಡದ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಅರಿವು ಇದೆ. ತಂಡ ಯಾವುದರಲ್ಲಿ ಪ್ರಬಲವಾಗಿದೆಯೊ ಆ ಕಡೆ ಲಕ್ಷ್ಯ ವಹಿಸುತ್ತೇವೆ. ತಂಡ ಆಕ್ರಮಣ ಮತ್ತು ರಕ್ಷಣೆ ಎರಡರ ಸಮ್ಮಿಶ್ರಣ' ಎಂದು ಹೇಳಿದರು.

'ಇದುವರೆಗೆ ಆಟಗಾರ್ತಿಯರು ಯೋಜನೆಗೆ ಬದ್ಧರಾಗಿ ಆಡಿದ್ದಾರೆ. ನಿರ್ಧಾರಕ್ಕೆ ಬರುವ ಅವರ ರೀತಿಯ ಬಗ್ಗೆ ತೃಪ್ತಿಯಿದೆ. ಆದರೆ ಸೆಮಿಫೈನಲ್ ಇತರ ಪಂದ್ಯಗಳಂತಲ್ಲ' ಎಂದು ಹರೇಂದ್ರ ಹೇಳಿದರು.


ಭಾರತ ಹಾಕಿ ತಂಡದ ಆಟಗಾರ್ತಿಯರು

'ಪಂದ್ಯದಲ್ಲಿ ಅಲಕ್ಷ್ಯ ಭಾವ ನುಸುಳದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಒಂದು ಸಣ್ಣ ಲೋಪ ಕೂಡ ಪ್ರಶಸ್ತಿ ಉಳಿಸಿಕೊಳ್ಳುವ ಕನಸನ್ನು ಛಿದ್ರಗೊಳಿಸಬಲ್ಲದು' ಎಂದು ಅವರು ಎಚ್ಚರಿಕೆಯ ಮಾತುಗಳನ್ನಾಡಿದರು.

ರೌಂಡ್‌ರಾಬಿನ್ ಲೀಗ್‌ನಲ್ಲಿ ಮೊದಲ ನಾಲ್ಕು ಸ್ಥಾನ ಪಡೆದ ತಂಡಗಳು ಸೆಮಿಫೈನಲ್ ತಲುಪಿವೆ. ಚೀನಾ ತಂಡವು ಮಂಗಳವಾರ ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ಮಲೇಷ್ಯಾ ಎದುರು ಆಡಲಿದೆ.

ಲೀಗ್ ಹಂತದಲ್ಲಿ ಭಾರತ, ಜಪಾನ್ ತಂಡವನ್ನು ಸುಲಭವಾಗಿ ಸೋಲಿಸಿರಬಹುದು. ಆದರೆ ಹರೇಂದ್ರ ಅವರು, ನಾಕೌಟ್ ಪಂದ್ಯದಲ್ಲಿ ಎದುರಾಳಿಯನ್ನು ಹಗುರವಾಗಿ ಪರಿಗಣಿಸುವ ಯೋಚನೆಯಲ್ಲಿಲ್ಲ.

'ನಿಜ, ಜಪಾನ್ ತಂಡದಿಂದ ನಾವು ಕಠಿಣ ಹೋರಾಟದ ನಿರೀಕ್ಷೆಯಲ್ಲಿದ್ದೇವೆ. ಅವರಿಂದ ಪ್ರತಿರೋಧ ಎದುರಾಗುವುದು ಖಚಿತ. ಅವರ ತಂಡ ಉತ್ತಮವಾಗಿದೆ. ಆದರೆ ನಾವು ಸಾಕಷ್ಟು ಹೋಮ್‌ವರ್ಕ್ ಮಾಡಿದ್ದೇವೆ. ಎದುರಾಳಿಯ ಬಗ್ಗೆ ಯೋಚನೆಗಿಂತ ನಾವು ಹೇಗೆ ಆಡಬೇಕೆಂಬ ಯೋಜನೆಯ ಕಡೆಗಷ್ಟೇ ನಮ್ಮ ಗಮನ ಕೇಂದ್ರೀಕೃತವಾಗಬೇಕು' ಎಂದು ಅವರು ಸಲಹೆ ನೀಡಿದರು.

ತಂಡದ ರಕ್ಷಣಾಪಡೆಯ ಪ್ರದರ್ಶನ ಉತ್ತಮವಾಗಿರುವುದು ಉತ್ತೇಜನಕರ ಬೆಳವಣಿಗೆ. ಉದಿತಾ, ಸುಶೀಲಾ ಚಾನು ಮತ್ತು ವೈಷ್ಣವಿ ವಿಠಲ್ ಫಾಲ್ಕೆ ಅವರು ಪರಿಣಾಮಕಾರಿ ಪ್ರದರ್ಶನ ನೀಡಿದ್ದಾರೆ. ಹೀಗಾಗಿ ಗೋಲ್‌ಕೀಪರ್‌ಗಳಾದ ಸವಿತಾ ಪೂನಿಯಾ ಮತ್ತು ಬಿಚು ದೇವಿ ಕರಿಬಮ್ ಅವರಿಗೆ ಸತ್ವಪರೀಕ್ಷೆಯೇ ಎದುರಾಗಿಲ್ಲ. ಇದು ಹರೇಂದ್ರ ಅವರಿಗೆ ಚಿಂತೆಯ ವಿಷಯವೂ ಹೌದು.

ಮೊದಲ ಕೆಲವು ಪಂದ್ಯಗಳಲ್ಲಿ ಪೆನಾಲ್ಟಿ ಕಾರ್ನರ್ ಪರಿವರ್ತನೆಯ ದರ ಕಡಿಮೆಯಿದ್ದುದು ತಂಡದ ಕಳವಳಕ್ಕೆ ಕರಣವಾಗಿತ್ತು. ಆದರೆ ಕೊನೆಯ ಕೆಲವು ಪಂದ್ಯಗಳಲ್ಲಿ ದೀಪಿಕಾ ಮತ್ತು ಮನಿಷಾ ಚೌಹಾನ್ ಅವರು ಆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಿದ್ದಾರೆ.

ದಾಳಿಯ ವಿಭಾಗದಲ್ಲಿ ದೀಪಿಕಾ ಗಮನ ಸೆಳೆದಿದ್ದಾರೆ. ಉತ್ತಮ ಡ್ರ್ಯಾಗ್‌ಫ್ಲಿಕರ್ ಎನಿಸಿದ್ದಾರೆ ಕೂಡ. ನಾಲ್ಕು ಫೀಲ್ಡ್ ಗೋಲು ಸೇರಿ ಅವರು ಹತ್ತು ಗೋಲುಗಳನ್ನು ಗಳಿಸಿದ್ದಾರೆ. ಐದು ಪೆನಾಲ್ಟಿ ಕಾರ್ನರ್ ಪರಿವರ್ತಿಸಿದ್ದಾರೆ. ಒಮ್ಮೆ 'ಪೆನಾಲ್ಟಿ'ಯಲ್ಲೂ ಗೋಲು ಗಳಿಸಿದ್ದಾರೆ.

ಇತರ ಫಾರ್ವರ್ಡ್‌ಗಳಾದ ಶರ್ಮಿಳಾ ದೇವಿ, ಸಂಗೀತಾ ಕುಮಾರಿ, ಪ್ರೀತಿ ದುಬೆ ಮತ್ತು ಲಾಲ್‌ರೆಮ್ಸಿಯಾನಿ ಕೂಡ ಯಶಸ್ಸಿಗೆ ತಮ್ಮ ಪಾಲು ನೀಡಿದ್ದಾರೆ.

ಮಿಡ್‌ಫೀಲ್ಡ್‌ನಲ್ಲಿ ನಾಯಕಿ ಸಲೀಮಾ ಟೆಟೆ ಅವರು ನೇಹಾ ಗೋಯಲ್, ಉಪನಾಯಕಿ ನವನೀತ್ ಕೌರ್ ಮತ್ತು ಬ್ಯೂಟಿ ಡಂಗ್‌ಡಂಗ್ ಜೊತೆ ಉತ್ತಮ ಸಮನ್ವಯ ಸಾಧಿಸಿದ್ದಾರೆ.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಸೆಮಿಫೈನಲ್‌ನಲ್ಲಿ ಇಂದು

ಚೀನಾ	Vs	ಮಲೇಷ್ಯಾ	ಮಧ್ಯಾಹ್ನ 2.30
ಭಾರತ	Vs	ಜಪಾನ್	ಸಂಜೆ 4.45

ಲೈವ್: ಸೋನಿ ಸ್ಪೋರ್ಟ್ಸ್

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಭಾರತ

ಹೈದರಾಬಾದ್ (ಪಿಟಿಐ): ಭಾರತ ಪುರುಷರ ತಂಡವು ಸೋಮವಾರ ನಡೆದ ಅಂತರಾಷ್ಟ್ರೀಯ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ 1–1 ರಿಂದ ಮಲೇಷ್ಯಾ ವಿರುದ್ಧ ಡ್ರಾ ಸಾಧಿಸಿತು. ಈ ಮೂಲಕ ಪ್ರಸಕ್ತ ವರ್ಷವನ್ನು ಯಾವುದೇ ಗೆಲುವಿಲ್ಲದೆ ಕೊನೆಗೊಳಿಸಿತು.

ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಾಲೊ ಜೋಸ್ 19ನೇ ನಿಮಿಷದಲ್ಲಿ ಮಲೇಷ್ಯಾ ತಂಡಕ್ಕೆ ಮುನ್ನಡೆ ಒದಗಿಸಿದರು. ಅದಾದ 20 ನಿಮಿಷಗಳ ಬಳಿಕ ಭಾರತದ ರಾಹುಲ್ ಭೆಕೆ (39ನೇ) ಅವರು ಕಾರ್ನರ್ ಕಿಕ್ ಮೂಲಕ ಬಂದ ಚೆಂಡನ್ನು ಹೆಡ್ ಮಾಡಿ ಗುರಿ ಸೇರಿಸಿದರು. ಹೀಗಾಗಿ ಉಭಯ ತಂಡಗಳ ಸ್ಕೋರ್ ಸಮನಾಯಿತು.

ಪ್ರಸಕ್ತ ವರ್ಷದಲ್ಲಿ ಭಾರತ 11 ಪಂದ್ಯಗಳನ್ನು ಆಡಿದ್ದು, ಆ ಪೈಕಿ ಆರರಲ್ಲಿ ಸೋತರೆ, ಉಳಿದ ಐದರಲ್ಲಿ ಡ್ರಾ ಮಾಡಿಕೊಂಡಿದೆ. ಹೊಸ ಕೋಚ್ ಮನೊಲೊ ಮಾರ್ಕ್ವೆಜ್ ಮಾರ್ಗದರ್ಶನದಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿದ್ದ ಭಾರತಕ್ಕೆ ಮತ್ತೆ ನಿರಾಸೆಯಾಯಿತು.

ಆರ್ಚರಿ: 24ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಜಾರ್ಖಂಡ್‌ನಲ್ಲಿ ಡಿ. 15ರಿಂದ 20ರವರೆಗೆ ನಡೆಯಲಿರುವ ಎನ್‌ಟಿಪಿಸಿ ಸೀನಿಯರ್ ರಿಕರ್ವ್, ಸೀನಿಯರ್ ಕಾಂಪೌಂಡ್ ಮತ್ತು ಇಂಡಿಯನ್ ರೌಂಡ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ರಾಜ್ಯದ ಸ್ಪರ್ಧಿಗಳ ಆಯ್ಕೆಗಾಗಿ ಇದೇ 24ರಂದು ಬೆಳಿಗ್ಗೆ 8.30ರಿಂದ ಕಂಠೀರವ ಕ್ರೀಡಾಂಗಣದಲ್ಲಿ ಟ್ರಯಲ್ಸ್ ಆಯೋಜಿಸಲಾಗಿದೆ.

ಮಾಹಿತಿಗೆ ದೂ: 080–22275656 ಸಂಪರ್ಕಿಸಬಹುದು ಎಂದು ಕರ್ನಾಟಕ ಅಮೆಚೂರು ಆರ್ಚರಿ ಸಂಸ್ಥೆ ಕಾರ್ಯದರ್ಶಿ ಟಿ. ಅನಂತರಾಜು ತಿಳಿಸಿದ್ದಾರೆ.

ಗಾಯದಿಂದ ಚೇತರಿಸಿದ ವೇಗಿ ವೆಂಕಟೇಶ್ ಮನದ ಮಾತು

ನೋವು ಮರೆಯಲು ಸಾಧನೆಯೇ ಔಷಧ


ಎಂ. ವೆಂಕಟೇಶ್

• ಗಿರೀಶ ದೊಡ್ಡಮನಿ

ಬೆಂಗಳೂರು: 'ನಾನು ಉತ್ತಮ ಲಯದಲ್ಲಿ ಆಡುವಾಗಲೇ ದೊಡ್ಡ ಗಾಯವಾಯಿತು. ಈಗ ಅದು ಗುಣಮುಖವೂ ಆಗಿದೆ. ಆದರೆ ಆ ನೋವು ಮರೆಯಲು ದೊಡ್ಡ ಸಾಧನೆ ಮಾಡುವ ಛಲವಿದೆ. ಒಂದು ಅವಕಾಶಕ್ಕಾಗಿ ಕಾಯುತ್ತಿರುವೆ'–

ಕರ್ನಾಟಕ ಕ್ರಿಕೆಟ್ ತಂಡದ ಭರವಸೆಯ ಬೌಲರ್ ಎಂ. ವೆಂಕಟೇಶ್ ಅವರ ವಿಶ್ವಾಸದ ನುಡಿಗಳಿವು. 2023ರ ರಣಜಿ ಋತುವಿನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪದಾರ್ಪಣೆ ಮಾಡಿದ್ದ ಮಧ್ಯಮವೇಗಿ ವೆಂಕಟೇಶ್, ಐದು ವಿಕೆಟ್ ಗೊಂಚಲು ಗಳಿಸಿದ್ದರು. ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್, ವಿ. ಕೌಶಿಕ್ ಅವರೊಂದಿಗೆ ಕರ್ನಾಟಕದ ವೇಗದ ವಿಭಾಗದ ಶಕ್ತಿಯನ್ನು ದುಪ್ಪಟ್ಟು ಮಾಡುವ ಭರವಸೆ ಮೂಡಿಸಿದ್ದರು. ನಂತರದ ಕೆಲವು ಲೀಗ್ ಟೂರ್ನಿಗಳಲ್ಲಿಯೂ ಬೌಲಿಂಗ್ ಮತ್ತು ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನೆಟ್ ಬೌಲರ್ ಆಗಿಯೂ ಕಾರ್ಯನಿರ್ವಹಿಸಿ ಬಂದರು.

ಅವರ ಬೆಳವಣಿಗೆ ಏರುಮುಖವಾಗಿದ್ದ ಸಂದರ್ಭದಲ್ಲಿಯೇ ದುರಾದೃಷ್ಟ ಕಾಡಿತು. ಕಳೆದ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಆಡುವಾಗ ಅವರ ಮುಖಕ್ಕೆ ಚೆಂಡು ಅಪ್ಪಳಿಸಿ ಗಾಯಗೊಂಡರು. ಪ್ಲಾಸ್ಟಿಕ್ ಸರ್ಜರಿ ಕೂಡ ಆಯಿತು. ಆಗ ಆದ ದೈಹಿಕ ಮತ್ತು ಮಾನಸಿಕ ಆಘಾತದಿಂದ ಚೇತರಿಸಿಕೊಂಡಿರುವ ಅವರು, ತಮ್ಮ ಸಾಮರ್ಥ್ಯ 'ಪರೀಕ್ಷೆ'ಗೆ ಸಜ್ಜಾಗುತ್ತಿದ್ದಾರೆ. ಜೊತೆಗೆ ಒಂದು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಅವರು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡ ಮನದ ಮಾತುಗಳ ಸಾರಾಂಶ ಇಲ್ಲಿದೆ.

'ಆಗಿದ್ದು ಆಗಿಹೋಯಿತು. ಖಾಲಿ ಕೂತಾಗ ಆ ನೆನಪು ಕಾಡುತ್ತದೆ. ಆದ್ದರಿಂದ ನಮ್ಮನ್ನು ನಾವು ಹೆಚ್ಚು ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಉತ್ತಮವಾಗಿ ಆಡುವಾಗಲೇ ಗಾಯದಿಂದ ತಡೆಬಿದ್ದಾಗ ಬೇಸರವಾಯಿತು. ಈಗ ಚೇತರಿಸಿಕೊಂಡಿರುವೆ. ನಾನು ಗಾಯಗೊಂಡಾಗ ಮೈಸೂರು ವಾರಿಯರ್ಸ್ ತಂಡ ಮಾಲೀಕರು ಬಹಳ ಕಾಳಜಿಯಿಂದ ನೋಡಿಕೊಂಡರು. ಕೆಎಸ್‌ಸಿಎ ಬಹಳಷ್ಟು ಬೆಂಬಲಿಸಿತು. ನಾನು ಪಂದ್ಯದ ನಾಲ್ಕು ದಿನವೂ ಕಣದಲ್ಲಿರುವ ಸಾಮರ್ಥ್ಯ ಬೇಕು' ಎಂದು ಹೇಳುತ್ತಾರೆ

'19 ವರ್ಷದೊಳಗಿನವ ವಿಭಾಗದವರೆಗೂ ನಾನು ಆರಂಭಿಕ ಬ್ಯಾಟರ್ ಹಾಗೂ ಸಾಂದರ್ಭಿಕ ಬೌಲರ್ ಆಗಿದ್ದೆ. ಕೋಚ್ ಆಗಿದ್ದ ದೀಪಕ್ ಚೌಗುಲೆ, ಲಿಯಾನ್ ಖಾನ್ ಮತ್ತು ಶಾವೀರ್ ಅವರ ಮಾರ್ಗದರ್ಶನದಿಂದ ಫುಲ್ ಟೈಮ್ ಬೌಲರ್ ಆದೆ. ಪ್ರತಿ ಗಂಟೆಗೆ 143 ಕಿ.ಮೀ ವೇಗದಲ್ಲಿ ಎಸೆತಗಳನ್ನು ಹಾಕುತ್ತೇನೆ. ಬೆಂಗಳೂರಿಗೆ ಬಂದ ನಂತರ ನನ್ನ ಜೀವನ ಬದಲಾಯಿತು. ರಣಜಿ ಪದಾರ್ಪಣೆ ಪಂದ್ಯದಲ್ಲಿ 5 ವಿಕೆಟ್ ಗೊಂಚಲು ಗಳಿಸಿದ್ದು ಸ್ಮರಣೀಯ. ಪೇಸ್ ವೇರಿಯೇಷನ್ ನನ್ನ ನೈಜ ಸಾಮರ್ಥ್ಯ' ಎಂದರು.

'ನಮ್ಮದು ಮಧ್ಯಮವರ್ಗದ ಕುಟುಂಬ. ಅಪ್ಪ ಮುರಳೀಧರ್ ಅವರು ಎಂಜಿನಿಯರ್ ಆಗಿದ್ದಾರೆ. ಕುಟುಂಬದಲ್ಲಿ ಅಪ್ಪನಿಗೆ ಕ್ರಿಕೆಟ್ ಪ್ರೀತಿ ಅಪಾರ. ಅವರ ಆಸಕ್ತಿಯಿಂದಾಗಿ ನಾನು ಕ್ರಿಕೆಟಿಗನಾದೆ. ಅವರು ನೀಡಿದ ಪ್ರೋತ್ಸಾಹ ಅಮೂಲ್ಯವಾದದ್ದು. ನಮ್ಮ ತಾಯಿ ದ್ರಾಕ್ಷಾಯಿಣಿ ಅವರು ಶಾಸ್ತ್ರೀಯ ನೃತ್ಯ ಕಲಾವಿದೆ. ಅಜ್ಜಿ ಶಾಸ್ತ್ರೀಯ ಸಂಗೀತಗಾರರು. ನನ್ನ ತಮ್ಮ ಕೂಡ ಒಳ್ಳೆಯ ಗಾಯಕ. ಈಗಾಗಲೇ ಹಲವು ರಿಯಾಲಿಟಿ ಶೋಗಳಲ್ಲಿ ಮಿಂಚಿದ್ದಾರೆ. ನನಗೂ ಸಂಗೀತ ಬರುತ್ತದೆ. ಅವರೆಲ್ಲರೂ ನಾನು ಕ್ರಿಕೆಟಿಗನಾಗಲು ಬೆಂಬಲವಾಗಿ ನಿಂತಿದ್ದಾರೆ' ಎಂದು ಬಿ.ಕಾಂ ಓದುತ್ತಿರುವ ವೆಂಕಟೇಶ್ ಹೇಳಿದರು.

'ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಾದಾಗ ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗಾ ಮತ್ತು ಕುಟುಂಬದವರು ಕಾಳಜಿಯಿಂದ ನೋಡಿಕೊಂಡರು. ಎಲ್ಲ ರೀತಿಯಿಂದಲೂ ನೆರವು ನೀಡಿದರು' ಎಂದು ಸ್ಮರಿಸಿಕೊಂಡರು.

ಸ್ಟಾರ್ ಬ್ಯಾಟರ್ ಕೊಹ್ಲಿ ಬಗ್ಗೆ ಗಾವಸ್ಕರ್ ಅಭಿಪ್ರಾಯ

ಹಿಂದಿನ ದಾಖಲೆಗಳಿಂದ ವಿಶ್ವಾಸ ವೃದ್ಧಿ

ನವದೆಹಲಿ (ಪಿಟಿಐ): ನ್ಯೂಜಿಲೆಂಡ್ ಎದುರು ವಿಫಲರಾಗಿರುವ ವಿರಾಟ್ ಕೊಹ್ಲಿ ಅವರಿಗೆ ಈಗ ರನ್‌ಗಳ ಹಸಿವು ಜೋರಾಗಿದೆ ಎಂದು ಭಾರತ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಹೇಳಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಈ ಹಿಂದೆ ತೋರಿರುವ ಉತ್ತಮ ಸಾಧನೆಯು ಕೊಹ್ಲಿ ಅವರಿಗೆ ಮುಂಬರುವ ಟೆಸ್ಟ್ ಸರಣಿಯಲ್ಲಿ ವಿಶ್ವಾಸ ಮೂಡಿಸಲು ನೆರವಾಗಬಹುದು ಎಂದೂ ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಕಳೆದ ಕೆಲವು ತಿಂಗಳಿಂದ ಕೊಹ್ಲಿ ಹಿಂದೆಂದೂ ಕಾಣದ ರನ್ ಬರ ಎದುರಿಸಿದ್ದಾರೆ. ಆಡಿರುವ ಕೊನೆಯ 60 ಟೆಸ್ಟ್ ಇನಿಂಗ್ಸ್‌ಗಳಲ್ಲಿ ಕೊಹ್ಲಿ ಕೇವಲ ಎರಡು ಶತಕ ಮತ್ತು 11 ಅರ್ಧ ಶತಕಗಳನ್ನಷ್ಟೇ ಗಳಿಸಿದ್ದಾರೆ.

ಈ ವರ್ಷ ಆರು ಟೆಸ್ಟ್ ಪಂದ್ಯಗಳಿಂದ ಅವರ ಸರಾಸರಿ ರನ್ 22.72. ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳಿಂದ ಅವರು 93 ರನ್‌ಗಳನ್ನಷ್ಟೇ ಗಳಿಸಿದ್ದಾರೆ.

'ನ್ಯೂಜಿಲೆಂಡ್ ವಿರುದ್ಧ ವಿಫಲರಾಗಿರುವ ಕಾರಣ ಕೊಹ್ಲಿ ಅವರ ರನ್ ಹಸಿವು ಹೆಚ್ಚಾಗಿದೆ' ಎಂದು ಅವರು ಸ್ಟಾರ್ ಸ್ಪೋರ್ಟ್ಸ್‌ಗೆ ತಿಳಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಕೊಹ್ಲಿ ಅವರ ದಾಖಲೆ ಅತ್ಯುತ್ತಮವಾಗಿದೆ. ನಾಲ್ಕು ಪ್ರವಾಸಗಳಲ್ಲಿ ಅವರು 54.08ರ ಅತ್ಯುತ್ತಮ ಸರಾಸರಿ ಹೊಂದಿದ್ದಾರೆ. ಈ ಅಂಶವೇ ಅವರಿಗೆ 22ರಂದು ಆರಂಭವಾಗುವ ಟೆಸ್ಟ್ ಸರಣಿಗೆ ವಿಶ್ವಾಸ ಮೂಡಿಸಲು ನೆರವಾಗಲಿದೆ ಎಂಬುದು 'ಸನ್ನಿ' ಅನಿಸಿಕೆ.


ಅಭ್ಯಾಸ ನಡೆಸಿದ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾ ಆಟಗಾರರು ತಮ್ಮನ್ನು ಹೇಗೆ ಗುರಿ ಮಾಡುವರೆಂಬುದು ಕೊಹ್ಲಿ ಅವರಿಗೆ ತಿಳಿಯದ ವಿಚಾರವೇನಲ್ಲ ಎಂದು ಮಾಜಿ ಟೆಸ್ಟ್ ಆಟಗಾರ ಸಂಜಯ್ ಮಾಂಜ್ರೇಕರ್ ಹೇಳಿದ್ದಾರೆ. 'ಮುಂದೇನು ಕಾದಿದೆ ಎಂಬುದು ಅವರಿಗೆ ಸರಿಯಾಗಿ ತಿಳಿದೇ ಇರುತ್ತದೆ' ಎಂದಿದ್ದಾರೆ.

ಟೆಸ್ಟ್ ವೇಳೆಯೇ ಐಪಿಎಲ್ ಆಕ್ಷನ್‌ಗೆ ತೆರಳಲಿರುವ ವೆಟೋರಿ

ಪರ್ತ್ (ಪಿಟಿಐ): ಆಸ್ಟ್ರೇಲಿಯಾದ ತಂಡದ ಸಹಾಯಕ ಕೋಚ್ ಡೇನಿಯಲ್ ವೆಟೋರಿ ಅವರು ವಾರಾಂತ್ಯದಲ್ಲಿ ಸೌದಿ ಅರೇಬಿಯಾದಲ್ಲಿ ನಡೆಯಲಿರುವ ಐಪಿಎಲ್ ಮೆಗಾ ಆಕ್ಷನ್‌ನಲ್ಲಿ ಭಾಗಿಯಾಗಲು ಭಾರತ ವಿರುದ್ಧ ಟೆಸ್ಟ್ ಪಂದ್ಯದ ಅರ್ಧದಲ್ಲೇ ಜೆದ್ದಾಕ್ಕೆ ಹೋಗಲಿದ್ದಾರೆ.


ವೆಟೋರಿ

ಐಪಿಎಲ್‌ನಲ್ಲಿ ಆಟಗಾರರ ಹರಾಜು ಇದೇ 24 ಮತ್ತು 25ರಂದು ಜೆದ್ದಾದಲ್ಲಿ ನಡೆಯಲಿದೆ. ಪರ್ತ್‌ನಲ್ಲಿ ಮೊದಲ ಟೆಸ್ಟ್ 22ರಂದು ಆರಂಭವಾಗಲಿದೆ. ಆಸ್ಟ್ರೇಲಿಯಾದ ಸಹಾಯಕ ಕೋಚ್ ಹುದ್ದೆ ಜೊತೆ ವೆಟೋರಿ ಅವರು ಐಪಿಎಲ್ ಫ್ರಾಂಚೈಸಿ ಆಗಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡದ ಹೆಡ್ ಕೋಚ್ ಆಗಿದ್ದಾರೆ.

'ಮೊದಲ ಟೆಸ್ಟ್‌ಗೆ ಅಂತಿಮ ಸಿದ್ಧತೆಯ ನಂತರ ವೆಟೋರಿ ಅವರು ಐಪಿಎಲ್ ಮೆಗಾ ಹರಾಜಿಗೆ ಹೋಗಲಿದ್ದಾರೆ. ನಂತರ ಅವರು ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಗೆ ತಂಡವನ್ನು ಮರಳಿ ಸೇರಿಕೊಳ್ಳಲಿದ್ದಾರೆ' ಎಂದು ಆಸ್ಟ್ರೇಲಿಯಾ ತಂಡದ ವಕ್ತಾರರು ಇಎಸ್‌ಪಿಎನ್ ಕ್ರಿಕೆಟ್‌ಇನ್ಫೋಗೆ ತಿಳಿಸಿದ್ದಾರೆ.

ವೆಟೋರಿ ಜೊತೆಗೆ, ವೀಕ್ಷಕ ವಿವರಣೆಗಾರರ ತಂಡದಲ್ಲಿರುವ ರಿಕಿ ಪಾಂಟಿಂಗ್ ಮತ್ತು ಜಸ್ಟಿನ್ ಲ್ಯಾಂಗರ್ ಕೂಡ ಹರಾಜಿನಲ್ಲಿ ಭಾಗಿಯಾಗಲು ತೆರಳಲಿದ್ದಾರೆ. ಪಾಂಟಿಂಗ್ ಅವರು ಪಂಜಾಬ್ ಕಿಂಗ್ಸ್‌ಗೆ ಮತ್ತು ಲ್ಯಾಂಗರ್ ಅವರು ಲಖನೌ ಸೂಪರ್ ಜೈಂಟ್ಸ್‌ಗೆ ಹೆಡ್ ಕೋಚ್ ಆಗಿದ್ದಾರೆ.

ಆರ್‌ಸಿಬಿ ಬೌಲಿಂಗ್ ಕೋಚ್ ಆಗಿ ಸಾಳ್ವಿ



ಬೆಂಗಳೂರು: ಓಂಕಾರ್ ಸಾಳ್ವಿ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬೌಲಿಂಗ್ ಕೋಚ್ ಆಗಿ ನೇಮಕ ಮಾಡಿಕೊಂಡಿದೆ. ಮುಂಬೈ ತಂಡ, ಕಳೆದ ಋತುವಿನಲ್ಲಿ ರಣಜಿ ಟ್ರೋಫಿ ಮತ್ತು ಇರಾನಿ ಟ್ರೋಫಿ ಗೆಲ್ಲುವಲ್ಲಿ ಓಂಕಾರ್ ಅವರ ಮಾರ್ಗದರ್ಶನವೂ ಇತ್ತು.

ದೇಶಿ ಕ್ರಿಕೆಟ್‌ನಲ್ಲಿ ಹೆಸರು ಮಾಡಿರುವ ಓಂಕಾರ್ ಅವರು ಈ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್ ಸಹಾಯಕ ಕೋಚ್ ಆಗಿದ್ದರು.

ಭಾರತ ತಂಡದ ಮಾಜಿ ಆಟಗಾರ ಅವಿಷ್ಕಾರ್ ಸಾಳ್ವಿ ಅವರ ತಮ್ಮನಾಗಿರುವ ಓಂಕಾರ್, ರೈಲ್ವೆ ಪರ 2005ರಲ್ಲಿ ಒಂದು ಲಿಸ್ಟ್ ಎ ಪಂದ್ಯ ಆಡಿದ್ದಾರೆ. ಮುಂಬೈ ತಂಡದ ಜೊತೆ ಅವರ ಒಪ್ಪಂದ 2025ರ ಮಾರ್ಚ್‌ವರೆಗೆ ಇದೆ.

ವಿಕಲಾಂಗರ ಚೆಸ್: ಸಮರ್ಥ್‌ಗೆ ಬೆಳ್ಳಿ

ಬೆಂಗಳೂರು: ಹೊನ್ನಾವರದ ಸಮರ್ಥ ಜಗದೀಶ್ ರಾವ್ ಅವರು ಕಿರ್ಗಿಸ್ಥಾನದ ಬಿಷ್ಕೆಕ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ದೈಹಿಕ ನ್ಯೂನತೆಯುಳ್ಳವರ ಎರಡನೇ ಏಷ್ಯನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದುಕೊಂಡಿದ್ದಾರೆ.

ಭಾರತ ಕ್ರೀಡಾ ಪ್ರಾಧಿಕಾರದ ಆರ್ಥಿಕ ನೆರವಿನಿಂದ ಅಖಿಲ ಭಾರತ ಚೆಸ್ ಫೆಡರೇಷನ್ ಮತ್ತು ಪಿಸಿಐ ಸಹಕಾರದಿಂದ ಎಂಟು ವಿಕಲಾಂಗ ಆಟಗಾರರು, ಎಂಟು ಸಹಾಯಕರು, ತರಬೇತುದಾರರನ್ನು ಏಳು ದಿನಗಳ ಈ ಚಾಂಪಿಯನ್‌ಷಿಪ್‌ಗೆ ಕಳುಹಿಸಲಾಗಿತ್ತು.

ಓಪನ್ ವರ್ಗದಲ್ಲಿ ವಿಜಯವಾಡದ ವೆಂಕಟಕೃಷ್ಣ ಕೌಶಿಕ್ ಮತ್ತು ಸಮರ್ಥ್ 9 ಸುತ್ತುಗಳಿಂದ ತಲಾ 6 ಪಾಯಿಂಟ್ಸ್ ಗಳಿಸಿದರೂ, ಟೈಬ್ರೇಕ್ ಆಧಾರದಲ್ಲಿ ಕೌಶಿಕ್ ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಎಜಿಲರಸಿ ಗೋಪಾಲಕೃಷ್ಣ (9 ಸುತ್ತುಗಳಿಂದ 6) ಅತ್ಯುತ್ತಮ ಅನ್‌ರೇಟೆಡ್ ಆಟಗಾರ್ತಿ ಎನಿಸಿದರು.


ಸಮರ್ಥ ರಾವ್

ವಂಚನೆ ಪ್ರಕರಣ: ಗಂಭೀರ್ ವಿರುದ್ಧ ಪ್ರಕರಣ– ತಡೆಯಾಜ್ಞೆ ಮುಂದುವರಿಕೆ



ನವದೆಹಲಿ (ಪಿಟಿಐ): ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ವಿರುದ್ಧದ ವಂಚನೆ ಪ್ರಕರಣದ ವಿಚಾರಣೆಗೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ಮುಂದುವರಿಸಿದೆ.

ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಗಂಭೀರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮನೋಜ್ ಕುಮಾರ್ ಒಹ್ರಿ ಸೋಮವಾರ ಮಧ್ಯಂತರ ಆದೇಶ ಹೊರಡಿಸಿದರು. ಗಂಭೀರ್ ಅವರು ಸದ್ಯ ಭಾರತ ತಂಡದ ಜೊತೆ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದು, ಈ ಕುರಿತು ತಮ್ಮ ಅಭಿಪ್ರಾಯ ಸಲ್ಲಿಸುವಂತೆ ದೆಹಲಿ ಪೊಲೀಸರಿಗೆ ಸೂಚಿಸಿತು. ಪ್ರಕರಣದ ಮುಂದಿನ ವಿಚಾರಣೆಯನ್ನು 2025ರ ಜ.31ಕ್ಕೆ ಮುಂದೂಡಿತು. ಗಂಭೀರ್ ಪರವಾಗಿ ಹಿರಿಯ ವಕೀಲರಾದ ಮುಕುಲ್ ರೋಹಟಗಿ ಜಾಗೂ ವಕೀಲ ಪರಿತೋಷ್ ಹಾಜರಾಗಿದ್ದರು.

ಉತ್ತರ ಪ್ರದೇಶ ಗಾಜಿಯಾಬಾದ್‌ನ ಇಂದಿರಾಪುರಂನಲ್ಲಿ ರಿಯಲ್ ಎಸ್ಟೇಟ್ ಕಂಪನಿಗಳಾದ ರುದ್ರಾ ಬಿಲ್ಡ್‌ವೆಲ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್, ಎಚ್.ಆರ್. ಇನ್ಫ್ರಾ ಸಿಟಿ ಪ್ರೈವೇಟ್ ಲಿಮಿಟೆಡ್, ಯು.ಎಂ.ಆರ್ಕಿಟೆಕ್ಚರ್ ಕಂಟ್ರಾಕ್ಟರ್ಸ್ ಲಿಮಿಟೆಡ್ ಸಂಸ್ಥೆಯು ಫ್ಲ್ಯಾಟ್ ನೀಡುವುದಾಗಿ 2013ರಲ್ಲಿ ಸಾರ್ವಜನಿಕರಿಂದ ₹6 ಲಕ್ಷದಿಂದ ₹16 ಲಕ್ಷದವರೆಗೂ ಹಣ ಸಂಗ್ರಹಿಸಿತ್ತು. ಈ ಸಂಸ್ಥೆಗಳಲ್ಲಿ ಗಂಭೀರ್ ನಿರ್ದೇಶಕರಾಗಿದ್ದು, ಬ್ರ್ಯಾಂಡ್ ಅಂಬಾಸಿಡರ್ ಕೂಡ ಆಗಿದ್ದರು.

2016ರವರೆಗೂ ಗ್ರಾಹಕರಿಗೆ ಫ್ಲ್ಯಾಟ್ ನೀಡಿರಲಿಲ್ಲ. ಇದರಿಂದ ನೊಂದ ಗ್ರಾಹಕರು ಗಂಭೀರ್ ಸೇರಿದಂತೆ ಸಂಸ್ಥೆಯ ವಿರುದ್ಧ ದೂರು ನೀಡಿದ್ದರು.

ಟೆನಿಸ್: ಮುಖ್ಯಸುತ್ತಿಗೆ ಸಿದ್ಧಾಂತ್, ಕಬೀರ್

ಕಲಬುರಗಿ: ಅಗ್ರ ಶ್ರೇಯಾಂಕದ ಸಿದ್ಧಾಂತ್ ಬಾಂಥಿಯಾ, ಕಬೀರ್ ಹನ್ಸ್, ನಿತಿನ್ ಕುಮಾರ್ ಸಿನ್ಹಾ, ಪ್ರಣವ್ ಕಾರ್ತಿಕ್ ಅವರು ಇಲ್ಲಿ ನಡೆಯುತ್ತಿರುವ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಅರ್ಹತಾ ಎರಡನೇ ಸುತ್ತಿನಲ್ಲಿ ಗೆಲುವು ಸಾಧಿಸುವ ಮೂಲಕ ಮುಖ್ಯ ಸುತ್ತಿಗೆ ಲಗ್ಗೆಯಿಟ್ಟರು.

ಸೋಮವಾರ ನಡೆದ ಅರ್ಹತಾ ಸುತ್ತಿನ ಎರಡನೇ ಪಂದ್ಯದಲ್ಲಿ ಸಿದ್ಧಾಂತ್ ಅವರು ಅಜಯ್ ಮಲಿಕ್ ಅವರ ವಿರುದ್ಧ 6-2, 6-0ರಿಂದ ಸುಲಭದ ಗೆಲುವು ಸಾಧಿಸಿದರು. ಮುಖ್ಯ ಸುತ್ತಿನ ಮೊದಲ ಪಂದ್ಯದಲ್ಲಿ ಸಿದ್ಧಾಂತ್ ಅವರು ಮನೀಶ್ ಸುರೇಶ್ ಕುಮಾರ್ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದ ಕಬೀರ್ ಹನ್ಸ್ 6–3, 6–1 ರಿಂದ ಶಿವಾಂಕ್ ಭಟ್ನಾಗರ್ ಅವರನ್ನು ಸೋಲಿಸಿದರು. ಕಬೀರ್ ಮುಂದಿನ ಸುತ್ತಿನಲ್ಲಿ ಕರಣ್ ಸಿಂಗ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಇನ್ನೊಂದರಲ್ಲಿ ಪ್ರಣವ್ ಕಾರ್ತಿಕ್ ಅವರು ಚಿನ್ಮಯ್ ದೇವ್ ಚೌಹಾಣ ವಿರುದ್ಧ 6-2, 6-1ರಿಂದ ಗೆಲುವು ಸಾಧಿಸಿದರೆ, ನಿತಿನ್ ಕುಮಾರ ಸಿನ್ಹಾ ಅವರು ಯಶ್ ಚೌರಾಸಿಯಾ ವಿರುದ್ಧ 6-3, 6-3 ಅಂತರದಿಂದ ಗೆದ್ದು ಮುಖ್ಯ ಸುತ್ತಿಗೆ ಪ್ರವೇಶಿಸಿದರು.

ಮಂಗಳ ವಾರ ಮುಖ್ಯ ಸುತ್ತಿನ ಪಂದ್ಯಗಳು ಆರಂಭವಾಗಲಿವೆ.

ಸ್ಟೊಯಿನಿಸ್ ಅಬ್ಬರಕ್ಕೆ ಪಾಕ್ ತತ್ತರ

ಹೋಬಾರ್ಟ್ (ಆಸ್ಟ್ರೇಲಿಯಾ): ಮಧ್ಯಮ ಸರದಿಯ ಬ್ಯಾಟರ್ ಮಾರ್ಕಸ್ ಸ್ಟೊಯಿನಿಸ್ ಅವರ ಮಿಂಚಿನ ಅರ್ಧ ಶತಕದ ನೆರವಿನಿಂದ ಆಸ್ಟ್ರೇಲಿಯಾ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಸೋಮವಾರ ಏಳು ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಆತಿಥೇಯರು ಸರಣಿಯನ್ನು 3–0ಯಿಂದ ಕ್ಲೀನ್‌ಸ್ವೀಪ್ ಮಾಡಿದರು.

ಪಂದ್ಯದ ಆಟಗಾರನಾದ ಸ್ಟೊಯಿನಿಸ್ 27 ಎಸೆತಗಳಲ್ಲಿ 61 ರನ್ ಸಿಡಿಸಿದರು. ವೇಗದ ಬೌಲರ್ ಶಾಹೀನ್ ಶಾ ಅಫ್ರಿದಿ ಅವರ ಒಂದೇ ಓವರ್‌ನಲ್ಲಿ ಮೂರು ಸಿಕ್ಸರ್ ಸೇರಿದಂತೆ ಒಟ್ಟು ಐದು ಸಿಕ್ಸರ್ ಅವರ ಇನಿಂಗ್ಸ್‌ನಲ್ಲಿದ್ದವು. ಜೊತೆಗೆ ಐದು ಬೌಂಡರಿಗಳನ್ನೂ ಬಾರಿಸಿದರು. ಜೋಶ್ ಇಂಗ್ಲಿಸ್ ಸಾರಥ್ಯದ ಆಸ್ಟ್ರೇಲಿಯಾ 11.2 ಓವರುಗಳಲ್ಲಿ 3 ವಿಕೆಟ್‌ಗೆ 118 ರನ್ ಬಾರಿಸಿ ಗುರಿ ತಲುಪಿತು. ಇದಕ್ಕೆ ಮೊದಲು ಪ್ರವಾಸಿ ತಂಡ 11 ಎಸೆತಗಳು ಬಾಕಿಯಿರುವಾಗ 117 ರನ್‌ಗಳಿಗೆ ಆಲೌಟ್ ಆಗಿತ್ತು.

ಸ್ಕೋರುಗಳು: ಪಾಕಿಸ್ತಾನ: 18.1 ಓವರುಗಳಲ್ಲಿ 117 (ಬಾಬರ್ ಆಜಂ 41, ಹಸೀಬುಲ್ಲಾ ಖಾನ್ 24; ಸ್ಪೆನ್ಸರ್ ಜಾನ್ಸನ್ 24ಕ್ಕೆ2, ಆ್ಯಡಂ ಜಂಪಾ 11ಕ್ಕೆ2, ಆರನ್ ಹಾರ್ಡಿ 21ಕ್ಕೆ3); ಆಸ್ಟ್ರೇಲಿಯಾ: 11.2 ಓವರುಗಳಲ್ಲಿ 3 ವಿಕೆಟ್‌ಗೆ 118 (ಜೋಶ್ ಇಂಗ್ಲಿಸ್ 27, ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 61). ಸರಣಿಯ ಆಟಗಾರ: ಸ್ಪೆನ್ಸರ್ ಜಾನ್ಸನ್

ಟಿ20 ಕ್ರಿಕೆಟ್: ಅತಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ರನ್	ಸರಾಸರಿ	ಶತಕ	ಅರ್ಧಶತಕ
ರೋಹಿತ್ ಶರ್ಮಾ	ಭಾರತ	159	4231	32.05	5	32
ಬಾಬರ್ ಆಜಂ	ಪಾಕಿಸ್ತಾನ	126	4192	40.30	3	36
ವಿರಾಟ್ ಕೊಹ್ಲಿ	ಭಾರತ	125	4188	48.69	1	38
ಪಾಲ್ ರಾಬರ್ಟ್ ಸ್ಟರ್ಲಿಂಗ್	ಐರ್ಲೆಂಡ್	147	3655	27.07	1	24
ಮಾರ್ಟಿನ್ ಜೇಮ್ಸ್ ಗಪ್ಟಿಲ್	ನ್ಯೂಜಿಲೆಂಡ್	122	3531	31.81	2	20

ಬೆಂಗಳೂರು ಬುಲ್ಸ್‌ಗೆ 9ನೇ ಸೋಲು

ನೋಯಿಡಾ (ಪಿಟಿಐ): ನಾಯಕ ಪ್ರದೀಪ್ ನರ್ವಾಲ್ (10) ಅವರ 'ಸೂಪರ್ ಟೆನ್' ಸಾಧನೆಯ ಹೊರತಾಗಿಯೂ ಬೆಂಗಳೂರು ಬುಲ್ಸ್, ಸೋಮವಾರ ಪ್ರೊ ಕಬಡ್ಡಿ ಲೀಗ್‌ನ ರೋಚಕ ಹಣಾಹಣಿಯಲ್ಲಿ ಒಂದು ಅಂಕಗಳಿಂದ ಯು ಮುಂಬಾ ವಿರುದ್ಧ ಪರಾಭವಗೊಂಡಿತು.

ಪಾಯಿಂಟ್‌ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಯು ಮುಂಬಾ ತಂಡವು 38–37ರಿಂದ ಬುಲ್ಸ್ ತಂಡವನ್ನು ಮಣಿಸಿತು. ವಿರಾಮದ ವೇಳೆಗೆ ಒಂದು ಅಂಕಗಳಿಂದ ಮುನ್ನಡೆಯಲ್ಲಿದ್ದ ಮುಂಬಾ ಉತ್ತರಾರ್ಧದಲ್ಲಿ ಅದನ್ನು ಕಾಯ್ದು ಕೊಳ್ಳುವಲ್ಲಿ ಯಶಸ್ವಿಯಾಯಿತು. ಬುಲ್ಸ್ ತಂಡಕ್ಕೆ ಇದು 11 ಪಂದ್ಯಗಳಲ್ಲಿ 9ನೇ ಸೋಲಾಗಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವು 49–27ರಿಂದ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ: 400 ಮೀ ಓಟದಲ್ಲಿ ಗೌರಿ, ಅಜಯ್ ಚಾಂಪಿಯನ್

ಹರ್ಡಲ್ಸ್: ಅಥರ್ವ, ಶಾಶ್ವತಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಅಥರ್ವ ಎಸ್.ನಾಯ್ಕ್ ಮತ್ತು ಬೆಂಗಳೂರು ನಗರದ ಶಾಶ್ವತಿ ಸುರೇಶ್ ಅವರು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದ ಐದನೇ ದಿನವಾದ ಸೋಮವಾರ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ 80 ಮೀಟರ್ ಹರ್ಡಲ್ಸ್‌ನಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ನಡೆಯುತ್ತಿರುವ ಕೂಟದಲ್ಲಿ ಶಾಶ್ವತಿ 13.2 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಬೆಳಗಾವಿಯ ಸಾಕ್ಷಿ ಸಂತೋಷ್ ಮತ್ತು ಹಾಸನದ ಹರ್ಷಿಣಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಬಾಲಕರ ವಿಭಾಗದಲ್ಲಿ ಅಥರ್ವ 14 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಬೆಂಗಳೂರು ನಗರದ ಧ್ರುವನ್ ಎಸ್. ಆರ್. ಬೆಳ್ಳಿ ಗೆದ್ದರೆ, ರಾಯಚೂರಿನ ವಿವೇಕ ಎಂ.ಎಚ್. ಕಂಚು ಜಯಿಸಿದರು.


ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಬಾಲಕರ 80 ಮೀಟರ್ ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ಬೆಳಗಾವಿಯ ಆಥರ್ವ ಎಸ್. ನಾಯ್ಕ್

ಫಲಿತಾಂಶಗಳು: ಬಾಲಕಿಯರು: 80 ಮೀ ಹರ್ಡಲ್ಸ್: ಶಾಶ್ವತಿ ಸುರೇಶ್ (ಬೆಂಗಳೂರು ನಗರ, ಕಾಲ 13.2 ಸೆ), ಸಾಕ್ಷಿ ಸಂತೋಷ್ (ಬೆಳಗಾವಿ)–2, ಹರ್ಷಿಣಿ (ಹಾಸನ)–3; 400 ಮೀ. ಓಟ: ಗೌರಿ ಪೂಜಾರಿ (ಬೆಳಗಾವಿ, ಕಾಲ 1 ನಿ.01;6ಸೆ))–1, ಪೃಥ್ವಿ ಬೇಕದ್ (ಬಾಗಲಕೋಟೆ)–2, ದಿವ್ಯಾ ಎನ್. (ರಾಮನಗರ)–3; ಡಿಸ್ಕಸ್ ಥ್ರೋ: ತನೇಷ್ಕಾ ಸಿ. (ಬೆಂಗಳೂರು ನಗರ, ಎಸೆತ 25.18 ಮೀ)–1, ಸೈಯದಾ ಇನಾಮ್ ಮರ್ಜಿಯಾ (ಚಾಮರಾಜನಗರ)–2, ಸಂಪದಾ ಎಂ.ಪಿ. (ಚಾಮರಾಜನಗರ)–3; ಲಾಂಗ್‌ಜಂಪ್: ಪ್ರಾಪ್ತಿ ಆರ್.ವಿ. (ತುಮಕೂರು, ಜಿಗಿತ 4.96 ಮೀ)–1, ಯುಕ್ತಿ ಕೆ. (ಮೈಸೂರು)–2, ಮಾಣಿಕಾ ಆದ್ಯಾ ಎಸ್ (ಮೈಸೂರು)–3. ಟೆನಿಸ್: ಸಿಂಗಲ್ಸ್: ಅಹಿದಾ ಸಿಂಗ್ (ಬೆಂಗಳೂರು)–1, ಪದ್ಮಪ್ರಿಯಾ ರಮೇಶ್ ಕುಮಾರ್ (ಮೈಸೂರು)–2, ರಿಯಾ ಗಂಗಮ್ಮ (ಬೆಂಗಳೂರು)–3; ಡಬಲ್ಸ್: ರಿಯಾ ಗಂಗಮ್ಮ ಮತ್ತು ಅಹಿದಾ ಸಿಂಗ್–1, ಅಕ್ಷರಾ ಆರ್.ವಿ ಮತ್ತು ಉನ್ನತಿ ವಿ. ಮುರಳೀಧರ (ಮಂಡ್ಯ)–2, ಸಾನ್ವಿ ಪ್ರಕಾಶ್ ರೈ ಪುರೋಹಿತ್ ಮತ್ತು ಪದ್ಮಪ್ರಿಯಾ ರಮೇಶ್ ಕುಮಾರ್ (ಮೈಸೂರು)–3; ತಂಡ ವಿಭಾಗ: ಬೆಂಗಳೂರು–1, ಮಂಡ್ಯ–2, ಮೈಸೂರು–3. ಕೊಕ್ಕೊ: ಗದಗ–1, ಕೋಲಾರ–2, ಕೋಲಾರ ಮತ್ತು ಹಾವೇರಿ–3. ಫುಟ್‌ಬಾಲ್: ಬೆಳಗಾವಿ–1, ಉತ್ತರಕನ್ನಡ–2. ಕಬಡ್ಡಿ: ಹಾವೇರಿ–1, ಬೆಂಗಳೂರು ಗ್ರಾಮಾಂತರ–2, ಬೆಂಗಳೂರು ನಗರ ಮತ್ತು ಮಂಡ್ಯ–3.

ಬಾಲಕರು: 80 ಮೀ. ಹರ್ಡಲ್ಸ್: ಅಥರ್ವ ಎಸ್.ನಾಯ್ಕ್ (ಬೆಳಗಾವಿ, ಕಾಲ 14 ಸೆ)–1, ಧ್ರುವನ್ ಎಸ್.ಆರ್. (ಬೆಂಗಳೂರು ನಗರ)–2, ವಿವೇಕ ಎಂ.ಎಚ್. (ರಾಯಚೂರು)–3; 400 ಮೀ. ಓಟ: ಅಜಯ್ ಪೃಥ್ವಿರಾಜ್ ಎಂ.ಎಲ್ (ಮೈಸೂರು; ಕಾಲ 54.2 ಸೆ)–1, ಸಂದೀಪ್ ವಡ್ಡರ್ (ಧಾರವಾಡ)–2, ಈರಣ್ಣ ಬಸವರಾಜ್ (ಉಡುಪಿ)–3; ಡಿಸ್ಕಸ್ ಥ್ರೋ: ಸೂರ್ಯ ಸಮರ್ಥ್ (ಶಿವಮೊಗ್ಗ, ಎಸೆತ 31.35 ಮೀ)–1, ಎಸ್.ಸುದರ್ಶನ್ (ಚಾಮರಾಜನಗರ)–2, ಎನ್.ಸಾಯಿ ಹಿತೀಶ್ (ಕೋಲಾರ)–3. ಟೆನಿಸ್: ಸಿಂಗಲ್ಸ್: ಅರ್ಜುನ್ ಮಣಿಕಂದನ್ (ಬೆಂಗಳೂರು)–1, ಇಶಾನ್ ಬಡಗಿ (ಬೆಳಗಾವಿ)–2, ಯಶ್ ಕುಮಾರ್ (ಬೆಂಗಳೂರು)–3; ಡಬಲ್ಸ್: ಅರ್ಜುನ್ ಮಣಿಕಂದನ್ ಮತ್ತು ಇಶಾನ್ ಬಡಗಿ–1, ತರುಣ್ ಎಚ್ ಮತ್ತು ಕೆಂಪೇಗೌಡ ಎಂ (ದಾವಣಗೆರೆ)–2, ವಚನ್ ಪ್ರಸಾದ್ ಮತ್ತು ಇಶಾಯು ಪಿ. ದೇಸಾಯಿ (ಮೈಸೂರು)–3; ತಂಡ ವಿಭಾಗ: ಬೆಂಗಳೂರು–1, ದಾವಣಗೆರೆ–2, ಬಳ್ಳಾರಿ–3. ಕೊಕ್ಕೊ: ಬೆಳಗಾವಿ–1, ಮೈಸೂರು–2, ಬಾಗಲಕೋಟೆ ಮತ್ತು ಹಾವೇರಿ–3. ಫುಟ್‌ಬಾಲ್: ಹಾಸನ–1, ಕೊಡಗು–2. ಕಬಡ್ಡಿ: ತುಮಕೂರು–1, ಶಿವಮೊಗ್ಗ–2, ಉತ್ತರ ಕನ್ನಡ ಮತ್ತು ವಿಜಯಪುರ–3.